FDGB

2

# Translation

To the Delegates to the
32th Congress of the
All-India Trade Union Congress (AITUC)

Berlin, December 1983

Dear Comrades,

The National Executive of the Confederation of Free German Trade Unions extends warm and fraternal greetings to the delegates and guests to the 32th Congress of the All-India Trade Union Congress and to all Indian working people.

During the more than 6o years of its existence the All-India Trade Union Congress has gained the respect and confidence of the Indian workers as class-based organisation of the Indian working people in the struggle for the improvement of the living and working conditions of the Indian people, for the implementation of trade union rights and for social progress.

The All-India Trade Union Congress and the Confederation of Free German Trade Unions fight side by side for peace, disarmament, security and social progress, against the imperialist policy of arms build-up and confrontation, against reaction, racism and neocolonial oppression.

We are sure that the relations of fraternal friendship and class solidarity which have existed between our two organisations for many years, will further deepen and consider it at the same time to be an important contribution to the development of friendship between the peoples of the Republic of India and of the German Democratic Republic.

On behalf of the National Executive of the Confederation of Free German Trade Unions we wish a successful proceedings to your 32th Congress and are convinced that it will adopt resolutions serving the well-being of the Indian working people.

signed: H. Tisch
President

FREIER DEUTSCHER GEWERKSCHAFTSBUND

BUNDESVORSTAND · VORSITZENDER

An die
Delegierten des 32. Kongresses des
All-Indischen Gewerkschaftsbundes (AITUC)

Liebe Kollegen!

Der Bundesvorstand des Freien Deutschen Gewerkschaftsbundes entbietet den Delegierten und Gästen des 32. Kongresses des All-Indischen Gewerkschaftsbundes sowie allen indischen Werktätigen herzliche und brüderliche Grüße.

In den über 60 Jahren seines Bestehens hat sich der All-Indische Gewerkschaftsbund als Klassenorganisation der indischen Werktätigen im Kampf für die Verbesserung der Arbeits- und Lebensbedingungen des indischen Volkes, für die Durchsetzung der gewerkschaftlichen Rechte und für den sozialen Fortschritt Ansehen und Vertrauen bei den arbeitenden Menschen Indiens erworben.

Der All-Indische Gewerkschaftsbund und der Freie Deutsche Gewerkschaftsbund stehen Seite an Seite im Kampf für Frieden, Abrüstung, Sicherheit und sozialen Fortschritt, gegen imperialistische Hochrüstungs- und Konfrontationspolitik, Reaktion, Rassismus und neokoloniale Unterdrückung.

Wir sind gewiß, daß sich die zwischen unseren beiden Organisationen bestehenden langjährigen Beziehungen der brüderlichen Freundschaft und Klassensolidarität weiter vertiefen werden, und sehen darin gleichzeitig einen wichtigen Beitrag zur Ausprägung der Freundschaft zwischen den Völkern der Republik Indien und der Deutschen Demokratischen Republik.

Im Namen des Bundesvorstandes des Freien Deutschen Gewerkschaftsbundes wünschen wir Ihrem 32. Kongreß einen erfolgreichen Verlauf und sind gewiß, daß er Beschlüsse fassen wird, die dem Wohle der indischen Werktätigen dienen werden.

H. Tisch

Berlin, Dezember 1983

# ಕೆಂಬಾವುಟ


ಭಾರತ ಕಮ್ಯೂನಿಸ್ಟ್ ಪಕ್ಷದ
ರಾಜ್ಯ ಮಂಡಲಿಯ ಮುಖಪತ್ರ

ಎಐಟಿಯುಸಿ ೩೨ನೇ ಅಧಿವೇಶನದ
ಸಲುವಾಗಿ
ವಿಶೇಷ ಸಂಚಿಕೆ

ಬೆಲೆ ಒಂದು ರೂಪಾಯಿ

ಸಂಪುಟ 10, ಸಂಚಿಕೆ 19, ಬೆಂಗಳೂರು ಡಿಸೆಂಬರ್ 18, 1983 ಬೆಲೆ : 1 ರೂ. ಪುಟಗಳು 16



ಎಐಟಿಯುಸಿ ಸಮ್ಮೇಳನದ ಅಧ್ಯಕ್ಷ ಮಂಡಲಿ (ಮಧ್ಯದಲ್ಲಿ ಮುಖ್ಯಮಂತ್ರಿ ಹೆಗ್ಡೆಯವರೂ ಇದ್ದಾರೆ)

## 'ಲಾಲ್ ಬಾವುಟ ಬಾಗ್'- ಆಗಿ ಪರಿವರ್ತನೆಗೊಂಡ ಲಾಲ್‌ಬಾಗ್


# ಸಂಭ್ರಮದ ವಾತಾವರಣದಲ್ಲಿ ಎಐಟಿಯುಸಿ ಸಮ್ಮೇಳನ ಆರಂಭ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಎಐಟಿಯುಸಿಯ 32ನೇ ಅಧಿವೇಶನ ಆರಂಭವಾಗಿದೆ. ಸಮ್ಮೇಳನ ನಡೆಯುತ್ತಿರುವ ಶಾಂತಾರಾಮ ಪೈ ನಗರ (ಲಾಲ್‌ಭಾಗ್) ಉತ್ಸವದ ಕಳೆಯಿಂದ ತುಂಬಿ ತುಳುಕುತ್ತಿದೆ. ಅಲಂಕೃತವಾದ ದ್ವಾರಗಳು ಜನರನ್ನು ಆಕರ್ಷಿಸುತ್ತಿವೆ. ಲಾಲ್‌ಭಾಗ್ (ಕೆಂಪುತೋಟ) ಎಂಬುದು 'ಲಾಲ್‌ಬಾವುಟ ಬಾಗ್' ಆಗಿ ಪರಿವರ್ತನೆ ಹೊಂದಿದೆ. ಉತ್ತರದ ಕಾಶ್ಮೀರದಿಂದ ದಕ್ಷಿಣದ ಕನ್ಯಾಕುಮಾರಿಯವರೆಗಿನ ವಿವಿಧ ರಾಜ್ಯಗಳ ವಿವಿಧ ಭಾಷೆಗಳನ್ನಾಡುವ 3000ಕ್ಕೂ ಮಿಕ್ಕಿ ಪ್ರತಿನಿಧಿಗಳು ಈಗಾಲೆಲೇ ಆಗಮಿಸಿದ್ದಾರೆ.

ರಾಜ್ಯದ ಕಾರ್ಮಿಕ ವರ್ಗ ಕಳೆದ 6 ತಿಂಗಳುಗಳಿಂದ ಇದಿರು ನೋಡುತ್ತಿದ್ದ ಈ ಘಟನೆ ತಾ 26ರಂದು ಆರಂಭ. ಭಾರತದ ಐಕ್ಯ ಪ್ರದರ್ಶನದ ದ್ಯೋತಕ. ಭಾರತದ ಇಂದಿನ ಸಾರ್ವತ್ರಿಕ ಅಳತೆಗೋಲು ಜಾತಿ, ಮತ, ಕೋಮು. ಆದರೆ ಕಾರ್ಮಿಕರಿಗೆ ಆ ಭೇದವಿಲ್ಲ. ಅವರೆಲ್ಲರೂ ದುಡಿಯುವವರು. ಅವರ ಜಾತಿ ದುಡಿಯುವ ಜಾತಿ. ಭಾರತವೆಂಬುದು 'ಭಿನ್ನತೆಯಲ್ಲಿ ಏಕತೆ'ಯ ದೇಶವೆನ್ನುತ್ತೇವೆ. ಆದರೆ ದುಡಿಯುವವರ ಮುಟ್ಟಿಗೆ ಭಿನ್ನತೆಯೇ ಇಲ್ಲ, ಐಕ್ಯತೆಯೇ ಎಲ್ಲ; ಅದರ ಪ್ರದರ್ಶನ ನಡೆಯುತ್ತಿದೆ- ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ.

ಎಐಟಿಯುಸಿಯ ಅಧ್ಯಕ್ಷ ಎಸ್. ಎ. ಡಾಂಗೆಯವರ ಹೊರತು (ಅನಾರೋಗ್ಯದ ದೆಸೆಯಿಂದ ದೂರ ಪ್ರಯಾಣ ಅಸಾಧ್ಯವೆಂದೂ ಸಮ್ಮೇಳನ ಯಶಸ್ವಿಯಾಗಲಿ ಎಂದೂ ಅವರು ಸಂದೇಶ ಕಳುಹಿಸಿದ್ದರು.) ಉಳಿದ ಎಲ್ಲ ಹಿರಿಯ ನಾಯಕರ ಆಗಮನ, ಮೊದಲ ದಿನವೇ 18ಕ್ಕೂ ಮಿಕ್ಕಿದ

16ನೇ ಪುಟಕ್ಕೆ



ಏರಲಿ ಕೆಂಪು ಬಾವುಟ, ಹಾರಲಿ ಕೆಂಪು ಬಾವುಟ, ಧ್ವಜಾರೋಹಣದ ಒಂದು ದೃಶ್ಯ.

## ಸಂಪಾದಕೀಯ

# ಎಐಟಿಯುಸಿಯ 32ನೇ ಸಮ್ಮೇಳನ

ರಾಷ್ಟ್ರೀಯ – ಅಂತರ್ರಾಷ್ಟ್ರೀಯ ಪರಿಸ್ಥಿತಿ ಒಂದು ವಿಶಿಷ್ಟ ರೂಪದಲ್ಲಿ ಬೆಳವಣಿಗೆಯಾಗುತ್ತಿರುವ ಸನ್ನಿವೇಶದಲ್ಲಿ ಬೆಂಗಳೂರಿನಲ್ಲಿ ಎಐಟಿಯುಸಿಯ 32ನೇ ಅಧಿವೇಶನವು ಆರಂಭವಾಗಿದೆ. ರಾಷ್ಟ್ರದ ಅತ್ಯಂತ ಹಿರಿಯ, ಅತ್ಯಂತ ಪ್ರಾತಿನಿಧಿಕ ಕ್ರಾಂತಿಕಾರಿ ಕಾರ್ಮಿಕ ಕೇಂದ್ರ ಸಂಘಟನೆಯಾದ ಎಐಟಿಯುಸಿಗೆ 63 ವರ್ಷ ಕಾಲದ ದೀರ್ಘ ಹೋರಾಟಗಳ ಸಂಪನ್ನ ಪರಂಪರೆಯಿದೆ; ಅವನ್ನೆಲ್ಲ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳಿಂದ ತಿಳಿಯಬಹುದು.

ಇಂದು ಜಾಗತಿಕ ಪರಿಸ್ಥಿತಿಯು ಅಪಾಯದಲ್ಲಿದೆ. ಅಮೆರಿಕಾದ ಅಧ್ಯಕ್ಷ ರೇಗನರ ಯುದ್ಧದಾಹದಿಂದಾಗಿ ಯುರೋಪು, ಪ. ಏಷ್ಯಾಗಳಲ್ಲಿ ಯುದ್ಧದ ಅಪಾಯ ಜಾಸ್ತಿಯಾಗಿದೆ. ಬ್ರಿಟನ್, ಪ. ಜರ್ಮನಿ, ಇಟಲಿಗಳಲ್ಲಿ ಅಮೆರಿಕಾ ಕ್ಷಿಪಣಿಗಳನ್ನು ಸ್ಥಾಪಿಸಿದ ಮೇಲಂತೂ ಈ ಅಪಾಯ ಇನ್ನಷ್ಟು ಹೆಚ್ಚಾಗಿದೆ. ಪ. ಏಷ್ಯಾ ಉರಿಯುತ್ತಿದೆ. ಸಿರಿಯಾ–ಲೆಬನಾನ್‌ಗಳ ಮೇಲೆಯೇ ಅಮೆರಿಕನ್ ವಿಮಾನಗಳು ದಾಳಿ ನಡೆಸುತ್ತಿವೆ. ಪಾಕಿಸ್ತಾನಕ್ಕೆ ಆಧುನಿಕ ಹಾಗೂ ನಾಜೂಕಿನ ಶಸ್ತ್ರಾಸ್ತ್ರಗಳನ್ನು ನೀಡುವ ಮೂಲಕ, ಹಿಂದೂ ಮಹಾಸಾಗರದಲ್ಲಿ ಮಿಲಿಟರೀಕರಣಗೊಳಿಸುವುದರ ಮೂಲಕ, ಅಮೆರಿಕದ ಆಕ್ರಮಣಕಾರಿತನ ಇನ್ನಷ್ಟು ಹೆಚ್ಚಿದೆ; ಭಾರತದ ಸಮಗ್ರತೆ ಸಾರ್ವಭೌಮತ್ವಗಳಿಗೇ ತೀವ್ರ ಅಪಾಯವುಂಟಾಗಿದೆ. ಈ ಎಲ್ಲ ವಿಚಾರಗಳಿಂದ ನಮಗೆ ಕಾಣಬರುವುದೇನು ? ಇಂದು ಯುದ್ಧದ ಅಪಾಯ ಹಿಂದೆಂದಿಗಿಂತಲೂ ಹೆಚ್ಚಿದೆ. ಆದುದರಿಂದಲೇ ಶಾಂತಿ ಶಕ್ತಿಗಳ ಜವಾಬ್ದಾರಿ ಮಹತ್ತದ್ದಿದೆ. ಜಾಗತಿಕ ಶ್ರಮಜೀವಿಗಳಂತೆಯೇ ಭಾರತದ ಕಾರ್ಮಿಕ ವರ್ಗವೂ ಶಾಂತಿಯನ್ನು ಬಯಸುತ್ತದೆ; ಆಕ್ರಮಣ, ಯುದ್ಧಗಳನ್ನು ವಿರೋಧಿಸುತ್ತದೆ. ಆದುದರಿಂದಲೇ ಎಐಟಿಯುಸಿಯ 32ನೇ ಅಧಿವೇಶನ ಶಾಂತಿ ರಕ್ಷಣೆಗಾಗಿ ಯುದ್ಧದ ಅಪಾಯದ ವಿರುದ್ಧವಾಗಿ ತನ್ನ ಕರ್ತವ್ಯಗಳನ್ನು ಪೂರೈಸಲು ಕಾರ್ಯಕ್ರಮಗಳನ್ನು ಹಾಕುವುದರಲ್ಲಿ ಸಂದೇಹವಿಲ್ಲ.

ಇಂದು ಅಂತರ್ರಾಷ್ಟ್ರೀಯ ಕರ್ತವ್ಯವಾದರೆ ದುಡಿಯುವ ವರ್ಗದ ರಾಷ್ಟ್ರೀಯ ಕರ್ತವ್ಯವೇನು ?

ಇಂದು ದೇಶದ ಬಂಡವಳವಾದೀ ಬೆಳವಣಿಗೆಯ ಫಲವಾಗಿ ಜಾಗತಿಕ ಬಂಡವಳವಾದೀ ವ್ಯವಸ್ಥೆಯ ಬಿಕ್ಕಟ್ಟಿನ ಪರಿಣಾಮ ನಮ್ಮ ದೇಶವನ್ನೂ ಆವರಿಸಿದೆ. ಬೆಲೆ ಏರಿಕೆಗೆ ಮಿತಿ ಇಲ್ಲವಾಗಿದೆ. ಹಣದುಬ್ಬರ ದಿನೇ ದಿನೇ ಜಾಸ್ತಿಯಾಗುತ್ತಿದೆ; ಕಪ್ಪು ಹಣದ ಹಾವಳಿಯನ್ನು ಕೇಳುವವರಿಲ್ಲವಾಗಿದೆ. ಅದೇ ವೇಳೆ ಆಹಾರಧಾನ್ಯಗಳನ್ನು ಉತ್ಪಾದಿಸುವವರಿಗೆ ಪ್ರತಿಫಲದಾಯಕ ಬೆಲೆಯಿಲ್ಲ. ದಾಸ್ತಾನುಗಾರರು, ಕಾಳಸಂತೆಕದೀಮರು ಜನರನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಬೆಲೆಗಳಂತೂ ಕಳೆದ ವರ್ಷಕ್ಕಿಂತಲೂ ಈ ವರ್ಷ ಏರಿದೆ, ಏರುತ್ತಲೇ ಹೋಗುತ್ತಿದೆ.

ಇದರ ಹೊಡೆತ ನೇರವಾಗಿ ಬೀಳುವುದು ಕಾರ್ಮಿಕ ವರ್ಗಕ್ಕೆ. ಸಂಘಟಿತ ಕೈಗಾರಿಕೆಗಳ ಕಾರ್ಮಿಕರಿಗೆ ಬೆಲೆ ಏರಿಕೆಗನುಗುಣವಾಗಿ ತುಟ್ಟಿಭತ್ತೆ ಸಿಗುವ ಕ್ರಮ ಇದ್ದರೂ ಅದು ಬೆಲೆ ಏರಿಕೆಯ ಸಂಪೂರ್ಣ ಹಾನಿಯನ್ನು ಭರ್ತಿ ಮಾಡುವುದಿಲ್ಲ. ಎರಡನೆಯದಾಗಿ ಅಸಂಘಟಿತ ಕಾರ್ಮಿಕ ವರ್ಗಕ್ಕೆ ತುಟ್ಟಿಭತ್ತೆಯೆಂದರೇನೆಂದೇ ತಿಳಿಯದು. ಒಂದು ನಿರ್ದಿಷ್ಟ ಕೂಲಿಯಲ್ಲಿ ಅವರು ಜೀವನ ನಡೆಸಬೇಕಾಗಿದೆ.

ಇನ್ನು ನಿರುದ್ಯೋಗವಂತೂ ಇತಿಮಿತಿಯಿಲ್ಲದೆ ದಿನೇ ದಿನೇ ಹೆಚ್ಚುತ್ತಿದೆ. ಇದರ ಪರಿಹಾರಕ್ಕೆ ಸರ್ಕಾರದಿಂದ ಯೋಗ್ಯ ಕ್ರಮವಿಲ್ಲ. ಲಾಕೌಟುಗಳು, ಕಾರ್ಖಾನೆಗಳ ಮುಚ್ಚುವಿಕೆಗಳ ಫಲವಾಗಿ ಉದ್ಯೋಗ ಕಳೆದುಕೊಳ್ಳುವವರ ಸಂಖ್ಯೆ ಅಪಾರ. ಹೀಗಾಗಿ ಬೆಲೆ ಏರಿಕೆಯನ್ನು ತಡೆಗಟ್ಟಬೇಕು, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಡಬೇಕು, ಕಾರ್ಖಾನೆಗಳ ಮುಚ್ಚುವಿಕೆಯನ್ನು ತಡೆಗಟ್ಟಬೇಕು, 'ರೋಗಗ್ರಸ್ತ' ಕಾರ್ಖಾನೆಗಳನ್ನು ಸರ್ಕಾರವೇ ವಶಪಡಿಸಿಕೊಳ್ಳಬೇಕು ಎಂಬ ಕೇಳಿಕೆಗಳಿಗಾಗಿ ಈ ಸಮ್ಮೇಳನ ಯೋಗ್ಯ ಕಾರ್ಯಕ್ರಮಗಳನ್ನು ಹಾಕುವುದು.

ದೇಶವನ್ನು, ದುಡಿಯುವ ವರ್ಗವನ್ನು, ಇದಿರಿಸುವ ಮತ್ತೊಂದು ಮುಖ್ಯ ಸಮಸ್ಯೆಯೆಂದರೆ ಕೋಮುವಾದ, ಜಾತೀಯವಾದ, ಸಂಕುಚಿತ ಪ್ರಾದೇಶಿಕವಾದ, ಮಿತಿಮೀರಿದ ಭಾಷಾವಾದ. ಇವು ದೇಶದ ಐಕ್ಯಕ್ಕೇ ಮಾರಕ. ಕಾರ್ಮಿಕರವರ್ಗ ಐಕ್ಯತೆಗಂತೂ ಕುಠಾರಪ್ರಾಯ. ದೇಶದಲ್ಲಿ ಉಂಟಾಗಿರುವ ಸಾಮಾಜಿಕ-ರಾಜಕೀಯ ಪಿಡುಗು ಇದು. ಅದೇ ವೇಳೆಗೆ ಪ್ರತ್ಯೇಕವಾದದ ಪ್ರವೃತ್ತಿಯೂ ಗಾಬರಿದಾಯಕವಾಗಿ ಬೆಳೆಯುತ್ತಿದೆ. ಪಂಜಾಬ, ಅಸ್ಸಾಮ್‌ಗಳು ಇದಕ್ಕೆ ಉದಾಹರಣೆ. ಇವುಗಳ ವಿರುದ್ಧದ ಜನಕೀಯ ಹೋರಾಟದಲ್ಲಿ ಕಾರ್ಮಿಕ ವರ್ಗ ಮುಂದಳವಲ್ಲಿರಬೇಕು. ಆ ಕುರಿತಾಗಿಯೂ ಸಮ್ಮೇಳನ ಚರ್ಚಿಸುವುದು.

ಅಸಂಘಟಿತ ಕಾರ್ಮಿಕರು, ಮಹಿಳಾ ಕಾರ್ಮಿಕರು ಇತರ ಪ್ರಶ್ನೆಗಳೂ ಈ ಸಮ್ಮೇಳನದಲ್ಲಿ ಚರ್ಚಿಸಲ್ಪಡುವುದು.

ಇದೇ ವೇಳೆಗೆ ಟ್ರೇಡ್ ಯೂನಿಯನ್ ಹಕ್ಕುಗಳ ಮೇಲೆ ದಾಳಿ, ಸಾಮೂಹಿಕ ಚೌಕಾಸಿಗೆ ಅಡ್ಡಿ, ಮುಷ್ಕರದ ಹಕ್ಕುಗಳಿಗೆ ಆತಂಕಗಳನ್ನೊಡ್ಡುವ ಹಲವಾರು ಕ್ರಮಗಳನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದೆ. ಅವುಗಳ ವಿರುದ್ಧ ಹೋರಾಡಿ ಹಿಮ್ಮೆಟ್ಟಿಸಲು ಈ ಸಮ್ಮೇಳನ ತನ್ನ ಕಾರ್ಯಕ್ರಮವನ್ನು ಹಾಕುವುದು.

ಸಮಾಜವಾದದ ಸ್ಥಾಪನೆ ಕಾರ್ಮಿಕ ವರ್ಗದ ಗುರಿ. ಬಂಡವಳಶಾಹಿ ವ್ಯವಸ್ಥೆಯನ್ನು ನಾಶಮಾಡಿ ಉತ್ಪಾದನೆಯ ಉಪಕರಣಗಳನ್ನು ದುಡಿಯುವವರ ಕೈಗಳಿಗೆ ತೆಗೆದುಕೊಳ್ಳುವುದು ದುಡಿಯುವ ವರ್ಗದ ಘೋಷಣೆ. ಈ ಗುರಿ ಸಾಧಿಸಲು ಹಲವಾರು ಮೆಟ್ಟಲುಗಳನ್ನು ಏರಬೇಕು. ಭಾರತದಂತಹ ಸಂಕೀರ್ಣ ರಾಜಕೀಯ ಸಾಮಾಜಿಕ ವ್ಯವಸ್ಥೆಯುಳ್ಳ ದೇಶಗಳಲ್ಲಿ ಇಂತಹ ಹೋರಾಟಗಳಿಗೆ ಸಮಸ್ಯೆಗಳು ಎಷ್ಟೋ. ಆದರೂ ಈ ಹಾದಿಯಲ್ಲಿ ಎಐಟಿಯುಸಿ ತನ್ನ ಪರಂಪರೆಗೆ ತಕ್ಕಂತೆ ಮುಂದರಿದಿದೆ. ಮೂರು ವರ್ಷಗಳ ಹಿಂದೆ ವಿಶಾಖಪಟ್ಟಣದಲ್ಲಿ ಅದರ ಅಧಿವೇಶನ ನಡೆದಾಗ 22.5 ಲಕ್ಷದಷ್ಟಿದ್ದ ಅದರ ಸದಸ್ಯ ಸಂಖ್ಯೆ ಈಗ ಇನ್ನಷ್ಟು ಏರಿದೆ. ತನ್ನ ಈ ಗುರಿಯನ್ನು ಸಾಧಿಸಲು ದುಡಿಯುವ ವರ್ಗ ಸಂಘಟಿತವಾಗಬೇಕು, ತನ್ನ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಎಐಟಿಯುಸಿಯ ಕ್ರಾಂತಿಕಾರಿ ಹೋರಾಟದ ಆಶ್ರಯದಲ್ಲಿ ದುಡಿಯುವ ವರ್ಗ ಮುಂದರಿಯಬೇಕು.

ಇವುಗಳಿಗೆಲ್ಲ ಕಾರ್ಯಕ್ರಮ ಹಾಕುವ ಎಐಟಿಯುಸಿಯ 32ನೇ ಅಧಿವೇಶನ ಯಶಸ್ವಿಯಾಗಲಿ ಎಂದು 'ಕೆಂಬಾವುಟ' ಹಾರೈಸುತ್ತದೆ.

# ವಿಟ್ಲ: ಬೀಡಿ ಕಾರ್ಮಿಕರ ದುರವಸ್ಥೆ

ಬಂಟ್ವಾಳ ತಾಲೂಕಿನ ವಿಟ್ಲ ಫಿರ್ಕಾ (ಹೋಬಳಿ) ಅತ್ಯಂತ ಹಿಂದುಳಿದ ಗ್ರಾಮಾಂತರ ಪ್ರದೇಶ. ಇಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಒಂದು ದೊಡ್ಡ ಪ್ರಮಾಣದಲ್ಲಿದೆ. ಮುಸ್ಲಿಂ ಮತ್ತು ಹರಿಜನರೇ ಈ ಕೈಗಾರಿಕೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುತ್ತಿದ್ದಾರೆ. ಇವರು ಅವಿದ್ಯಾವಂತರು, ಅಸಂಘಟಿತರು, ಆದುದರಿಂದಲೇ ಅವರ ಮೇಲಿನ ಶೋಷಣೆ ಜಾಸ್ತಿ. ಇನ್ನು ಇವರು ವಾಸಿಸುವ ಪ್ರದೇಶವಾದರೋ ಕುಡಿಯಲು ನೀರಿಲ್ಲದ ಪ್ರದೇಶ, ಕಾರ್ಮಿಕರ ವಸತಿಗಳೋ ಗಾಳಿ ಬೆಳಕಿಲ್ಲದ ಜನತಾ ಮನೆಗಳು, ಅವೂ ಇಲ್ಲವಾದರೆ ಗುಡ್ಡಗಳ ಮೇಲೆ ಗುಡಿಸಲು ಕಟ್ಟಿ ವಾಸ. ಬೀಡಿಕಾರ್ಮಿಕರಾದ ಇವರಿಗೆ ಕಾನೂನು ಪ್ರಕಾರ ಸಿಗಬೇಕಾದ ಯಾವ ಸವಲತ್ತುಗಳೂ ದೊರೆಯುವುದಿಲ್ಲ,

### ಶೋಷಣೆ

ಈ ಕೆಲಸಗಾರರಲ್ಲಿ 100 ರಲ್ಲಿ 15 ಮಂದಿಗೆ ಮಾತ್ರ ಲಾಗ್ ಪುಸ್ತಕಗಳು ಇವೆ. ಆದರೆ ಅವುಗಳಲ್ಲಿ ಏನು ಬರೆದಿದೆ, ಎಷ್ಟು ಗೆರೆಯಿದೆ ಎಂಬುದೂ ಈ ಕಾರ್ಮಿಕರಿಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಈ ಲಾಗ್ ಪುಸ್ತಕಗಳು ಇರುವುದು ಕಂಟ್ರಾಕ್ಟರುಗಳ ಕಪಾಟಿನಲ್ಲಿ. ಇನ್ನು ಕೊಡುವ ಕೂಲಿಯೂ ಕಾನೂನು ಪ್ರಕಾರವಿಲ್ಲ, 1,000 ಬೀಡಿಗೆ 7,80 ರಿಂದ 8 ರೂ. ವರೆಗೆ ಕೂಲಿ ಸಂದಾಯ. ಎವರೇಜಿನ ಲೆಕ್ಕದಲ್ಲಿ ದಂಡ ವಸೂಲಿ ಮಾಡುವುದಕ್ಕಂತೂ ಲೆಕ್ಕವೇ ಇಲ್ಲ. ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ತೆ ಕೊಡುವ ಕ್ರಮ ಕಡಿಮೆ. ಕೊಟ್ಟರೂ ಮುಕ್ಕಾಲಂಶವನ್ನು ಕಂಟ್ರಾಕ್ಟರುಗಳೇ ಸ್ವಾಹಾ ಮಾಡಿ ಕಾಲಂಶವನ್ನು ಕೊಡುತ್ತಾರೆ, ಸಿಗುವ ಶೇ 8.33 ಬೋನಸ್‌ನಲ್ಲಿ ಶೇ 3 ಬೋನಸನ್ನು ಕಂಟ್ರಾಕ್ಟರ್‌ಗಳು ತಮಗಾಗಿ ಇಟ್ಟುಕೊಳ್ಳುತ್ತಾರೆ. ಇನ್ನು ವಾರದ ರಜಾ ಸಂಬಳ ತುಟ್ಟಿಭತ್ತೆ ಎಂಬುದು ಈ ಕೆಲಸಗಾರರಿಗೆ ಕನಸಿನ ಗಂಟು. ಇಲ್ಲಿಯ ಕಂಟ್ರಾಕ್ಟ್‌ದಾರರು ವಾರದಲ್ಲಿ ಮೂರುದಿನ ದೀಪಕ್ ಬೀಡಿ ಮತ್ತೆಮೂರು ದಿನ ಶಂಕ್ರ ಬೀಡಿಕಟ್ಟಿಸಿ ಕೆಲಸಗಾರರ ಕೂಲಿಯಲ್ಲಿ 1000ಕ್ಕೆ 2ರೂಗಳಿಂದ 3ರೂ ವರೆಗೆ ವಂಚನೆ ಮಾಡುತ್ತಾರೆ. ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳಿಗೆ 3 – 4 ಲೈಸನ್ಸ್ ಇರುತ್ತದೆ. ಒಂದು ಲೈಸನ್ಸ್‌ನಲ್ಲಿ ಬೀಡಿ ಕಟ್ಟಿಸಿ ಆದನ್ನುಮ ರದ್ದು ಮಾಡಿಸುತ್ತಾರೆ. ಆಗ ಕೆಲಸಗಾರರ ಸರ್ವಿಸ್ ಎಲ್ಲ ನೀರಿನ ಮೇಲಿನ ಹೋಮದಂತಾಗುತ್ತದೆ.

ಈ ಕಾರ್ಮಿಕರ ಕಷ್ಟದ ಕಥೆ ಇಲ್ಲಿಗೇ ಮುಗಿಯುವುದಿಲ್ಲ, ಕಲವು ಕಂಟ್ರಾಕ್ಟರ್‌ಗಳಿಗೆ ತಮ್ಮದೇ ಆದ ಜೀನಸು (ದಿನಸಿ) ಅಂಗಡಿಗಳಿವೆ. ಇಲ್ಲಿ ಬೆಲೆ ಬೇರೆ ಅಂಗಡಿಗಳಲ್ಲಿರುವುದಕ್ಕಿಂತ ಮೂರು ಪಟ್ಟು ಜಾಸ್ತಿ. ಆದರೆ ಆ ಕಂಟ್ರಾಕ್ಟರ್‌ಗಳಡಿಯಲ್ಲಿ ದುಡಿಯುವ ಕಾರ್ಮಿಕರು ಅಲ್ಲಿಂದಲೇ ದಿನ ಬಳಕೆಯ ಸಾಮಗ್ರಿಗಳನ್ನು ಒಯ್ಯಬೇಕೆಂಬ ನಿರ್ಬಂಧ,

### ಸುಲಿಗೆ

ಕಂಟ್ರಾಕ್ಟರ್‌ಗಳಿಗೆ ಇಷ್ಟೇ ಉದ್ಯೋಗವಲ್ಲ. ಚಿಟ್ ಫಂಡ್‌ಗಳಿರುತ್ತವೆ. ಸೀರೆ, ಕೊಡೆ, ಪಾತ್ರೆ, ಬಟ್ಟೆಗಳ 'ಚೀಟಿ' ಏರ್ಪಾಡುಗಳಿರುತ್ತವೆ, ಇವನ್ನು ದುಬಾರಿ ಬೆಲೆಯಲ್ಲಿ ಈ ಕೆಲಸಗಾರರಿಗೆ ಒತ್ತಾಯದಿಂದ ಮಾರಲಾಗುತ್ತದೆ. ಆದರೆ ಈ ಮಾರಾಟಕ್ಕೆ ಲೈಸನ್ಸ್ ಇಲ್ಲ, ಸೇಲ್ಸ್ ಟ್ಯಾಕ್ಸ್ ಕೊಡುವ ಕ್ರಮವಿಲ್ಲ. ಕೆಲಸಗಾರರಿಗೆ ಲಾಗ್ ಪುಸ್ತಕ ಕೊಡುವ ಕ್ರಮವಿಲ್ಲದಿರುವುದರಿಂದ ಎಲ್ಲ ಕಾರ್ಮಿಕರ ಲೆಕ್ಕವನ್ನು ಒಂದು ಬಿಳಿ ನೋಟ್ ಪುಸ್ತಕದಲ್ಲಿ, ಕಟ್ಟಿದ ಬೀಡಿ, ಎಲೆ ತಂಬಾಕು, ಕೊಂಡುಕೊಂಡ ಅಕ್ಕಿ, ಸಕ್ಕರೆ, ಬಟ್ಟೆ, ಕಟ್ಟಿದ ಎಲ್ಲ ಲೆಕ್ಕ ಸಾಲ ಬರೆದು ಕೊಡಲಾಗುತ್ತದೆ. ವಾರದ ಕಡೇ ದಿನ ವಾರದ ಸಾಲ ಕಳೆದು ಲೆಕ್ಕ ಹಾಕಲಾಗುತ್ತದೆ. ಆಗ ಹೆಚ್ಚಿನ ಪ್ರಸಂಗಗಳಲ್ಲಿ ಕಾರ್ಮಿಕರಿಗೆ ಮಾಲಿಕ ಹಣ ಕೊಡುವ ಬದಲು ಕಾರ್ಮಿಕರೇ ಮಾಲಿಕನಿಗೆ ಹಣ ಕೊಡಬೇಕಾಗುತ್ತದೆ ಇದನ್ನು ಬಿಡಿಸಿ ಹೇಳುವ ಧೈರ್ಯ ಬಡ ಕಾರ್ಮಿಕರಿಗೆ ಅದರಲ್ಲೂ ಮಹಿಳಾ ಕಾರ್ಮಿಕರಿಗೆಲ್ಲಿ ? ಹೀಗೆ ವಾರ–ವಾರ ಬಾಕಿ ಉಳಿಯುತ್ತದೆ, ಹೀಗೆ ಮೋಸ ಮಾಡಿ ಸಂಪಾದಿಸಿದ ಹಣವನ್ನು ಕಂಟ್ರಾಕ್ಟರ್ ಮತ್ತೆ ಬೇಕಾದರೆ ಕೆಲಸಗಾರರಿಗೆ ಸಾಲ ಕೊಡುತ್ತಾನೆ. ಹೀಗೆ ಸಾಲ ಪಡೆದು ಕಂಟ್ರಾಕ್ಟರರುಗಳ ಭಯದಿಂದ ಸಂಘಟನೆಯಾಗುವುದಕ್ಕೆ ಕಾರ್ಮಿಕರು ಹಿಂಜರಿಯುತ್ತಾರೆ.

### ಅನ್ಯಾಯ

ಈ ಪ್ರದೇಶದ ಬೀಡಿ ಮಾಲಿಕರೂ ಶೋಷಣೆ ಮಾಡುವುದರಲ್ಲಿ ಹಿಂದುಳಿದಿಲ್ಲ. ಮಹಿಳಾ ಕಾರ್ಮಿಕರಿಗೆ ಲಾಗ್ ಪುಸ್ತಕ ಕೊಡುವ ಕ್ರಮವೇ ಇಲ್ಲ. ಒಂದು ಕಂಟ್ರಾಕ್ಟ್‌ನಲ್ಲಿ 10 ಕ್ಕಿಂತ ಹೆಚ್ಚು ಮಹಿಳಾ ಕಾರ್ಮಿಕರಿದ್ದರೆ ಮಿಕ್ಕಿದವರಿಗೆ ಲಾಗ್ ಪುಸ್ತಕ ಇಲ್ಲ. ವರುಷದಲ್ಲಿ 340 ದಿನ ಕೆಲಸ ಮಾಡಿದರೂ 140 ದಿನಗಳ ಹಾಜರಿಯನ್ನೇ ಹಾಕಲಾಗುತ್ತದೆ. ಹೀಗಾಗಿ ಮಹಿಳಾ ಕಾರ್ಮಿಕರ ಹೆರಿಗೆ ಭತ್ತೆದೆ ತಪ್ಪುತ್ತಾರೆ, ಮೆನೇಜರರಲ್ಲಿ ದೂರು ಕೊಟ್ಟರೆ ಹಿಟ್ಲರನಿಗಿಂತ ಮೀರಿದ ಗರ್ಜನೆಯ ಉತ್ತರ ಬರುತ್ತದೆ.

ಮಾಲಿಕರ ಈ ತರದ ಸುಲಿಗೆ, ಸಂಘಟನೆಗೆ ಸೇರಲು ಭಯ, ಇವುಗಳಿಂದಾಗಿ ಈ ಅಸಂಘಟಿತ ಕೆಲಸಗಾರರು ತಮ್ಮ ವಿಧಿಯನ್ನು ಹಳಿದುಕೊಳ್ಳುತ್ತಾರೆ, ಅತ್ತ ಕಾರ್ಮಿಕ ಇಲಾಖೆಗೆ ಇಂತಹ ಅನ್ಯಾಯಗಳ ಕುರಿತು ಗಮನವೇ ಇರುವುದಿಲ್ಲ.

ಇನ್ನಾದರೂ ಕಾರ್ಮಿಕ ಇಲಾಖೆ ಕಣ್ತೆರೆಯಬೇಕು. ಈ ಬಡ ಕಾರ್ಮಿಕರಿಗೆ, ಅದರಲ್ಲೂ ಮಹಿಳಾ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕು, ತಿಂಗಳಿಗೊಮ್ಮೆಯಾದರೂ ಎಲ್ಲ ಕಂಟ್ರಾಕ್ಟರುಗಳ ಅಂಗಡಿಗಳನ್ನು ಅಧಿಕಾರಿಗಳು ಶೋಧಿಸಿ ಕೆಲಸಗಾರರಿಗೆ ನ್ಯಾಯ ಒದಗಿಸಬೇಕು.

*

# ಚಿಕ್ಕೋಡಿ: ರೈತರ ಭಾರಿ ಮತಪ್ರದರ್ಶನ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ವಿದ್ಯುತ್ ಸರಿಯಾಗಿ ಸರಬರಾಜು ಆಗುತ್ತಿಲ್ಲ. ಪರಿಣಾಮವಾಗಿ ರೈತರು ತೊಂದರೆಗೊಳಗಾಗಿದ್ದಾರೆ. ನಷ್ಟವನ್ನು ಅನುಭವಿಸುತ್ತಿದ್ದಾರೆ, ಅವರ ಪಂಪಸೆಟ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಬೆಳೆಗಳು ಹಾಳಾದಿವೆ.

ವಿದ್ಯುತನ್ನು ಸರಿಯಾದ ಸರಬರಾಜು ಮಾಡಬೇಕೆಂದು ಒತ್ತಾಯಿಸಲು ಚಿಕ್ಕೋಡಿ ತಾಲೂಕಿನ ರೈತರ ಬೃಹತ್ ಜಾಥಾವೊಂದು ಭಾರತ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಇತ್ತೀಚೆಗೆ ಕೆ.ಇ.ಬಿ ಕಛೇರಿಗೆ ತೆರಳಿತು. ಅಲ್ಲಿ ಮತ ಪ್ರದರ್ಶನ ನಡೆಸಿ ಇಂಜಿನಿಯರರಿಗೆ ಮನವಿಯನ್ನು ಒಪ್ಪಿಸಲಾಯಿತು.

ಅಲ್ಲಿ ಹಾಜರಿದ್ದ ಅಸಿಸ್ಟೆಂಟ್ ಇಂಜಿನಿಯರ್ ಕೆ.ಎಸ್ ಭಟ್ ಮನವಿಗೆ ಉತ್ತರನೀಡುತ್ತಾ ಕಾಳಿ ನದಿ ವಿದ್ಯುತ್ ಉತ್ಪಾದನೆ ಮತ್ತು ರಾಯಚೂರು ಥರ್ಮಲ್ ವಿದ್ಯುತ್ ಆಗಾರದ ಕೆಲಸ ಪೂರ್ತಿಯಾಗುವವರೆಗೆ ವಿದ್ಯುತ್ ತೊಂದರೆ ಇದ್ದೇ ಇರುತ್ತದೆ, ಆದರೂ ತನ್ನ ಕೈಲಾದ ಸಹಾಯ ಮಾಡುತ್ತೇನೆ, ಎಂದು ಭರವಸೆ ಕೊಟ್ಟರು.

ಜಾಥಾದ ನಾಯಕತ್ವವನ್ನು ಕೈ.ಪಿ ಮಣ್ಣೆ, ಶಾಂತಾರಾಮ ನಾಯಕ್, ಮತ್ತು ಬಿ.ಎಸ್ ಪಾಟೀಲ್ ವಹಿಸಿದ್ದರು, ಕೆ.ಇ.ಬಿಯಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಕುರಿತಾದಿಯೂ ಜಾಥದ ನಾಯಕರು ಅಧಿಕಾರಿಗಳ ಗಮನ ಸೆಳೆದರು.

ಅಲ್ಲಿಂದ ಮೆರವಣಿಗೆಯು ಬಿ.ಡಿ.ಓ ಕಛೇರಿಗೆ ತೆರಳಿತು. ಮುದಿ ವಿಧವೆಯರಿಗೆ ಸರಕಾರಿ ಆಜ್ಞೆಯಂತೆ ವೃದ್ಧಾಪ್ಯ ವೇತನ ಕೊಡಬೇಕೆಂದೂ ಒತ್ತಾಯ ಮಾಡಿತು. ಆದರೆ ಸರಕಾರವು ಈ ಯೋಜನೆಗೆ ಹಣ ಕೊಡ ಮಾಡಿಲ್ಲವೆಂದೂ ಆದರೂ ಈ ವಿಚಾರದಲ್ಲಿ ತನ್ನ ಕೈಯಿಂದಾದ ಪ್ರಯತ್ನವನ್ನು ಮಾಡುವುದಾಗಿಯೂ ಬಿ.ಡಿ.ಓ ವಸಂತ ಆಶ್ವಾಸನೆ ನೀಡಿದರು.

ಸಂಜೆ ಚಿಕ್ಕೋಡಿ ಬಸ್‌ಸ್ಟ್ಯಾಂಡ್ ಬಳಿಯ ಸಾರ್ವಜನಿಕ ಸಭೆಯಲ್ಲಿ ಕೈ.ಪಿ. ಮಣ್ಣೆ, ಕುತುಬ್ ಜಮಾದಾರ್ ಶಾಂತಾರಾಮ ನಾಯಕ್ ಮೊದಲಾದವರು ಭಾಷಣ ಮಾಡಿ ಇಂತಹ ವೃದ್ಧಾಪ್ಯ ವೇತನವನ್ನು ಸರಕಾರ ಘೋಷಣೆ ಮಾಡಿದರೂ ಆ ಆಜ್ಞೆಯನ್ನು ಜಾರಿ ಮಾಡದಿರುವುದನ್ನು ಟೀಕಿಸಿದರು. ಹಾಗೂ ರೈತರಿಗೆ ಸರಿಯಾದ ವಿದ್ಯುತ್ ಸರಬರಾಜು ಮಾಡಬೇಕೆಂದೂ ಅವರು ಒತ್ತಾಯ ಪಡಿಸಿದರು.

# ಎಐಟಿಯುಸಿಯ ಮುಂದಿರುವ ಸಮಸ್ಯೆಗಳು ಮತ್ತು ನಿರೀಕ್ಷೆಗಳು

**ಸ್ವಾತಂತ್ರ್ಯಾನಂತರದಲ್ಲಿ ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಸಾಧನೆಯನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಲ್ಲ. ಏಕೆಂದರೆ ಈ ಚಳವಳಿಯ ಅಣಿಗಳಲ್ಲಿ ಆಳುವ ವರ್ಗವು ಅನೈಕ್ಯತೆಯನ್ನು ಉಂಟು ಮಾಡಿತು. ವಿಭಜನೆಯನ್ನು ಗೈದಿತು. ಈ ನಕಾರಾತ್ಮಕ ಲಕ್ಷಣ ವಲ್ಲದೆ ಹೋಗಿದ್ದರೆ ಈ ಚಳವಳಿ ನಿಸ್ಸಂದೇಹವಾಗಿಯೂ ಇನ್ನಷ್ಟು ಮುನ್ನಡೆಯುತ್ತಿತ್ತು.**

1947ರ ಪೂರ್ವದಲ್ಲಿ ದೇಶದಲ್ಲಿ ದ್ದುದು ಒಂದೇ ಟ್ರೇಡ್ ಯೂನಿಯನ್ ಕೇಂದ್ರ. ಅದು ಅಖಿಲ ಭಾರತ ಸಂಘಟನೆಯಾಗಿತ್ತು. ಅದರ ಪ್ರಧಾನ ಸ್ಥಾನಕ್ಕೆ ಎಂದೂ ಯಾರೂ ಸವಾಲು ಹಾಕುವಂತಿರಲ್ಲಿಲ್ಲ; ಆ ಸಂಸ್ಥೆಯೇ ಎಐಟಿಯುಸಿ. ಇದು ಸ್ಥಾಪನೆಯಾದುದು 1920ರ ಅಕ್ಟೋಬರ್ 31 ರಂದು ಮುಂಬೈಯಲ್ಲಿ, ಇದರ ಛತ್ರದಡಿಯಲ್ಲಿ ವಿವಿಧ ರಾಜಕೀಯ, ಸೈದ್ಧಾಂತಿಕ ಅಭಿಪ್ರಾಯವುಳ್ಳ ಜನರು ಕಾಂಗ್ರೆಸಿಗರು, ಸಮಾಜವಾದಿಗಳು, ಕಮ್ಯೂನಿಸ್ಟರು, ಇತರ ವಾಮವಾದಿಗಳು, ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯವರು ಇವರ ಟ್ರೇಡ್ ಯೂನಿಯನ್‌ಗಳೂ ಟ್ರೇಡ್ ಯೂನಿಯನ್ ನಾಯಕರೂ ಎಲ್ಲ ಒಂದು ಸೇರಿದ್ದರು. ಅದಲ್ಲದೆ ಈ ಸಂಯುಕ್ತ ವೇದಿಕೆಯಲ್ಲಿ ಹಲವಾರು ಮಂದಿ ಪ್ರಮುಖ ವ್ಯಕ್ತಿಗಳೂ ಪಾಲ್ಗೊಂಡಿದ್ದರು. ಈ ವಿವಿಧ ರಾಜಕೀಯ ಪಕ್ಷಗಳ ನಾಯಕರುಗಳಲ್ಲಿ ಮತಭೇದಗಳಿದ್ದರೂ ಕೂಡಾ ಅವರೆಲ್ಲರೂ ಎಐಟಿಯುಸಿಯ ಕಾರ್ಯಕ್ರಮವನ್ನು ಒಪ್ಪಿದ್ದರು. ಎಐಟಿಯುಸಿಯ ಕಾರ್ಯಕ್ರಮವಾದರೂ ಯಾವುದು ? 'ಭಾರತದಲ್ಲಿ ಸಮಾಜವಾದಿ ಪ್ರಭುತ್ವವನ್ನು ಸ್ಥಾಪಿಸುವುದು.' ಇವರೆಲ್ಲ ಎಐಟಿಯುಸಿಯ ಸಂವಿಧಾನವನ್ನು ಅದರ ನಿಬಂಧನೆಗಳನ್ನು ಸ್ವೀಕರಿಸಿದ್ದರು, ಹಾಗೂ ತಮ್ಮ ತಮ್ಮ ಯೂನಿಯನ್‌ಗಳನ್ನು ಎಐಟಿಯುಸಿಯಲ್ಲಿ ಸೇರ್ಪಡೆಗೊಳಿಸಿದ್ದರು.

1920–30 ಕಾಲ; ಬ್ರಿಟಿಷ್ ಆಳರಸರು ಭಯಾನಕವಾದ ದಬ್ಬಾಳಿಕೆಗಳನ್ನು ನಡೆಸುತ್ತಿದ್ದ ಸಮಯ, ಆಗ ಟ್ರೇಡ್‌ಯೂನಿಯನ್‌ಗಳೂ ಕಾರ್ಮಿಕರೂ ಬಲು ಕಠಿಣವಾದ ಪರಿಸ್ಥಿತಿಗಳನ್ನು ಇದಿರಿಸಬೇಕಾಗಿತ್ತು, ಆಗ ಎಷ್ಟೋ ಕೈಗಾರಿಕೆಗಳ ಕಾರ್ಮಿಕರು ನೇತೃತ್ವಕ್ಕಾಗಿ 'ಹೊರಗಿನವರ' ನೆರವು, ಸಲಹೆಗಳನ್ನು ಪಡೆಯುತ್ತಿದ್ದರು ಎಂಬುದು ನಿಜ. ಆದಿನ ಕಾಲದಲ್ಲಿ ಟ್ರೇಡ್‌ಯೂನಿಯನ್‌ಗಳಿಗೆ ಮಾಲಿಕರು ಅಂಗೀಕಾರ ನೀಡುವ ಕ್ರಮವೇ ಇರಲಿಲ್ಲ. 1927ರ ಟ್ರೇಡ್ ಯೂನಿಯನ್ ಕಾನೂನಿನಂತೆ ಒಂದು ಕಾರ್ಖಾನೆ ಅಥವಾ ಕೈಗಾರಿಕೆಯಲ್ಲಿ ಎಷ್ಟು ಟ್ರೇಡ್ ಯೂನಿಯನ್‌ಗಳನ್ನು ಬೇಕಾದರೂ ರಚಿಸಬಹುದಿತ್ತು, ಇಂತಹ ಟ್ರೇಡ್ ಯೂನಿಯನ್‌ಗಳನ್ನು ಕಾರ್ಖಾನೆ ಪ್ರದೇಶಗಳ ಆಧಾರದಲ್ಲಿ ನೊಂದಾಯಿಸಲಾಗುತ್ತಿತ್ತು. ಆದರೆ ಒಂದು ಕೈಗಾರಿಕೆ, ಒಂದು ವೃತ್ತಿ ಇವುಗಳ ಸಂಬಂಧದಲ್ಲಿ ಅಖಿಲಭಾರತ ವ್ಯಾಪ್ತಿಯ, ಹೆಚ್ಚೇಕೆ ರಾಜ್ಯವ್ಯಾಪ್ತಿಯ ಟ್ರೇಡ್ ಯೂನಿಯನ್‌ಗಳನ್ನು ನಿರ್ಮಿಸುವುದಕ್ಕೂ ಆಗ ಸಾಧ್ಯವಾಗಲಿಲ್ಲ, ಕಾರಣ ; ವಿವಿಧ ರಾಜ್ಯಗಳ ಚಳವಳಿಗಳ ಅಸಮಾನ ಬೆಳವಣಿಗೆ ಹಾಗೂ ಪ್ರಾಂತೀಯತೆ, ಪ್ರಾದೇಶಿಕತೆಗಳ ಒಂದು ಪ್ರವೃತ್ತಿ.


## ಎಐಟಿಯುಸಿ ಸ್ಥಾಪನೆ

ಇಷ್ಟೆಲ್ಲ ಅಡ್ಡಿ ಆತಂಕಗಳಿದ್ದರೂ ಕೂಡಾ 1920ರಲ್ಲಿ ದೇಶದ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ಸಮನ್ವಯಗೊಳಿಸುವ ಒಂದು ಕೇಂದ್ರವಾಗಿ ಎಐಟಿಯುಸಿ ಸ್ಥಾಪನೆಯಾಯಿತು. ಮಾತ್ರವಲ್ಲ 25 ವರ್ಷಗಳಿಗಿಂತಲೂ ಮಿಕ್ಕಿ ಅದು ತನ್ನೀ ಕಾರ್ಯವನ್ನು ನಿರ್ವಹಿಸಿತು. ಐ. ಎಲ್. ಒ. ಸದಸ್ಯತನವನ್ನು ಪಡೆಯುವ ಅರ್ಹತೆಯನ್ನು ಕೂಡಾ ಅದು ಗಳಿಸಿತು, ಆದರೆ ಇದು ಇಲ್ಲಿಗೇ ಮುಗಿಯಲಿಲ್ಲ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಎಐಟಿಯುಸಿಯು ಅಂತಃಸ್ಥ ಮೌಲ್ಯವನ್ನು ಹಲವಾರು ಸಮರಧೀರ ಮುಷ್ಕರ ಹೋರಾಟಗಳ ಮೂಲಕ ವ್ಯಕ್ತಪಡಿಸಲಾಯಿತು. ಬ್ರಿಟಿಷರಾಗಲಿ ಭಾರತೀಯನೇ ಆಗಿರಲಿ ತಮ್ಮ ಬಂಡವಳ ಶಾಹಿ ಮಾಲಕರ ವಿರುದ್ಧ ಕಾರ್ಮಿಕರು ಪದೇ ಪದೇ ಹೋರಾಟ ನಡೆಸಿದರು, ಹೀಗಿರುವಾಗ ಸಾಮ್ರಾಜ್ಯವಾದಿ ವಿರೋಧಿ ಹೋರಾಟದಲ್ಲಿ ಎಐಟಿಯುಸಿಯ ಸಹಕಾರ ಪಡೆಯಲು ಕಾಂಗ್ರೆಸಿನ ದೂರದೃಷ್ಟಿಯುಳ್ಳ ಮುಖಂಡರು ಉತ್ಸುಕತೆ ತೋರಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಇಷ್ಟೇ ಅಲ್ಲ ಎಐಟಿಯುಸಿಯ ಅಧ್ಯಕ್ಷರಾಗಿ ಲಾಲಾ ಲಜಪತ್‌ರಾಯ್ ಇದ್ದರು, ದೇಶಬಂಧು ಚಿತ್ತರಂಜನ್ ದಾಸ್ ಇದ್ದರು, ಜವಹರಲಾಲ್ ನೆಹರೂ ಇದ್ದರು, ಸುಭಾಸ್ ಚಂದ್ರಬೋಸ್ ಇದ್ದರು. ಈ ಕುರಿತಾಗಿಯೂ ನಾವು ಅಚ್ಚರಿಪಡಬೇಕಾದ್ದಿಲ್ಲ,

ಆಗ ಎಐಟಿಯುಸಿಗೆ ಸೇರ್ಪಡೆ ಹೊಂದದ ಒಂದು ಪ್ರಮುಖ ಟ್ರೇಡ್ ಯೂನಿಯನಿದ್ದರೆ, ಅದು ಮಹಾತ್ಮ ಗಾಂಧಿಯವರು ಅಹಮ್ಮದಾಬಾದ್‌ನಲ್ಲಿ ಸ್ಥಾಪಿಸಿದ್ದ ಮಜೂರ್ ಮಹಾಜನ ಸಂಘ. ಈ ಸಂಘದ ಸ್ಥಾಪನೆಯೇ ಗಾಂಧೀಜಿಯವರ 'ವಿಶ್ವಸ್ಥ ಸಮಿತಿ' (ಟ್ರಸ್ಟಿಶಿಪ್) ಎಂಬುದರ ಆಧಾರದ ಮೇಲೆ; ವರ್ಗ ಹೋರಾಟದ ಬದಲಾಗಿ ವರ್ಗ ಸಹಕಾರವನ್ನು ಈ ಸಂಘ ಬಹಿರಂಗವಾಗಿಯೇ ಸಾರುತ್ತಿತ್ತು. ಇದು ಗಾಂಧೀಜಿಯವರ ತತ್ವ.

## ಸ್ವಾತಂತ್ರ್ಯಾನಂತರ

ಆದರೆ 1947ರಲ್ಲಿ ಸ್ವಾತಂತ್ರ್ಯ ದೊರೆತ ಬಳಿಕ, ಬ್ರಿಟಿಷರಿಂದ ಅಧಿಕಾರವು ಭಾರತಕ್ಕೆ ಹಸ್ತಾಂತರಗೊಳಿಸಿದ ನಂತರ ಪರಿಸ್ಥಿತಿಯಲ್ಲಿ ದೊಡ್ಡ ಬದಲಾವಣೆಯಾಯಿತು, ಆ ಕಾಲದಲ್ಲಿ ಎಡ ಶಕ್ತಿಗಳು ಅದರಲ್ಲೂ ಮುಖ್ಯವಾಗಿ ಕಮ್ಯೂನಿಸ್ಟರು ತಮ್ಮ ಅವಿಶ್ರಾಂತ ದುಡಿಮೆ, ಸಮರಶೀಲ ನಿಲುವು ಉನ್ನತ ಸಂಘಟನಾ ಕೌಶಲ್ಯ ಇವುಗಳ ಫಲವಾಗಿ ಎಐಟಿಯುಸಿಯಲ್ಲಿ ಪ್ರಧಾನ ಸ್ಥಾನಗಳಿದ್ದರು. ಸದಸ್ಯತನದಲ್ಲಿಯೂ ಇವರ ನೇತೃತ್ವದ ಯೂನಿಯನ್‌ಗಳ ಸಂಖ್ಯೆ ಜಾಸ್ತಿಯಾಗಿತ್ತು. ಆದರೆ ಇನ್ನೊಂದೆಡೆ ಅಧಿಕಾರಕ್ಕೆ ಬಂದ ರಾಷ್ಟ್ರೀಯ ಬಂಡವಾಳಶಾಹಿಯು 'ಉತ್ಪಾದನೆ'ಯ ಹೆಸರಿನಲ್ಲಿ ಕಾರ್ಮಿಕ ವರ್ಗಕ್ಕೆ ಸಂಕೋಲೆ ತೊಡಿಸಲು ಬಯಸಿತು; ದುಡಿಯುವ ವರ್ಗದ ಸಮರಶೀಲತೆಯನ್ನು ಕುಂಠಿತಗೊಳಿಸಲು ಯತ್ನಿಸಿತು; ಆಳುವ ವರ್ಗದಡಿಯ ಸೇವಕರಂತೆ ಕಾರ್ಮಿಕರನ್ನು ಕಂಡಿತು ; ಆದರೆ ಎಐಟಿಯುಸಿಯ ಮೂಲಕ ತನ್ನೀ ಉದ್ದೇಶವನ್ನು ಸಾಧಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ಎಐಟಿಯುಸಿಯು ಸಂಯುಕ್ತವಾದ ಸಾಮೂಹಿಕ ಸಂಘಟನೆ, ಅದಕ್ಕೆ ತನ್ನದೇ ಆದ ಕಾರ್ಮಿಕ ವರ್ಗವಿತ್ತು, ಅವುಗಳ ಕೇಳಿಕೆಗಳಿದ್ದವು, ಮೇಲಾಗಿ



ತೋರಣಗಲ್ : ಅದಿರು ಹೇರುವವರ ಸಂಘಟನೆ

ಕಮ್ಯೂನಿಸ್ಟರು ಎಐಟಿಯುಸಿಯ ಪ್ರಧಾನ ಸ್ಥಾನಗಳಲ್ಲಿದ್ದರು. ಹೀಗಾಗಿ ಸರ್ದಾರ್‌ವಲ್ಲಭಾಯಿ ಪಟೇಲ್ ಗುಲ್ಜಾರಿಲಾಲ್ ನಂದ ಇವರ ಸಲಹೆಯಂತೆ ಎಐಟಿಯುಸಿಯನ್ನು ಒಡೆಯಲು ಅದರಿಂದ ಎಲ್ಲ ಕಾಂಗ್ರೆಸಿಗರೂ ಹೊರಬಯುವಂತೆ ಕರೆಕೊಡಲು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸಿತು. ಹೀಗೆ ಹುಟ್ಟಿತು ಐಎನ್‌ಟಿಯುಸಿ (ಇಂಟಕ್)

ಇಂತಹ ಉನ್ನತ ಮಟ್ಟದಲ್ಲಿ ಹೀಗೆ ಒಡಕುತರುವುದನ್ನು ತಡೆಯಲು ಪ್ರಾಯೋಗಿಕವಾಗಿ ಅಸಾಧ್ಯವಾದ ಇತಿಹಾಸದ ಒಂದು ಕಾಲಘಟ್ಟದಲ್ಲಿ ಕಾಂಗ್ರೆಸ್ ನಾಯಕತ್ವ ಇಂತಹ ಪಾಪವನ್ನು ಮಾಡಿತು, ಎಂಬುದನ್ನು ಇಲ್ಲಿ ನೆನಪಿಗೆ ತರಬೇಕಾಗಿದೆ. ಇಂತಹ ಒಡಕು 1942ರ ಕಾಲಘಟ್ಟದಲ್ಲೂ ನಡೆದಿರಲಿಲ್ಲ,

## ಇನ್ನಷ್ಟು ಬಿರುಕು

ನಂತರದ ದಿನಗಳಲ್ಲಿ ಈ ಅಂಟು ರೋಗ ಇನ್ನಷ್ಟು ಹರಡಿತು, ಎಷ್ಟೆಂದರೂ ಕಾಂಗ್ರೆಸ್ ಗುಂಪು ಎಐಟಿಯುಸಿಯನ್ನು ಬಿಟ್ಟು ತೊಲಗಿದ ಮೇಲೆ ಕಮ್ಯೂನಿಸ್ಟರ ಬಹುಮತ ಅದರಲ್ಲಿ ಮತ್ತಷ್ಟು ಹೆಚ್ಚಿತು. ಆದರೆ ಇದನ್ನು ಜೀರ್ಣಿಸಿಕೊಳ್ಳಲು ಕೆಲವರು ಸಿದ್ಧರಿರಲಿಲ್ಲ, ಸೋಶಿಯಲಿಸ್ಟರು ಇದರಿಂದ ಹೊರ ನಡೆದು ಹಿಂದೂ ಮಜದೂರ್ ಸಭಾವನ್ನು ಕಟ್ಟಿಗೊಂಡರು, ನಂತರ ಕೆಲವು ಎಡ ಗುಂಪುಗಳು ಸೇರಿ ಯುಟಿಯುಸಿಯನ್ನು ಸ್ಥಾಪಿಸಿದವು, ಇನ್ನು 1948-51ರ ಕಾಲ, ಆಗಿನ ಎಡ ಪಂಥವಾದಿ ನೀತಿಯ ಪರಿಣಾಮವಾಗಿ ಕೆಲವು ಸಂಪ್ರಸಿದ್ಧ ನಾಯಕರ ಸಮೇತ ಇನ್ನೂ ಕೆಲವು ಪಕ್ಷಾತೀತರನ್ನು ಎಐಟಿಯುಸಿ ಕಳೆದುಕೊಂಡಿತು,

ನಿಜಕ್ಕೂ ವ್ಯಥೆಯ ಕಥೆಯಿದು. ಸ್ವಾತಂತ್ರ್ಯಾನಂತರದಲ್ಲಿ ಒಂದು ಕೈಗಾರಿಕೆಗೆ ಒಂದೇ ಯೂನಿಯನ್ ಎಂಬ ಘೋಷಣೆಗೆ ಹೆಬ್ಬಾಗಿಲನ್ನು ತೆರೆಯಬೇಕಾಗಿತ್ತು. ಬದಲು 'ಒಂದು ರಾಜಕೀಯ ಪಕ್ಷಕ್ಕೆ ಒಂದು ಯೂನಿಯನ್' ಎಂಬ ಪರಿಸ್ಥಿತಿ ಉಂಟಾಯಿತು. ಅಷ್ಟರಲ್ಲಿ ಜನ್ಮತಾಳಿದ ಜನಸಂಘ ಬಿ. ಎಂ. ಎಸ್.ನ್ನು ಸ್ಥಾಪಿಸಿತು. 1964ರಲ್ಲಿ ಒಮ್ಮೆ ಕಮ್ಯೂನಿಸ್ಟ್ ಪಕ್ಷ ಒಡೆದ ಮೇಲೆ ಕೆಲವೇ ಸಮಯದೊಳಗೆ ಮಾರ್ಕ್ಸಿಸ್ಟ್ ಪಕ್ಷವೂ ತನ್ನದೇ ಆದ ಕಾರ್ಮಿಕ ಸಂಘಟನೆಯನ್ನು ಕಟ್ಟಿಕೊಂಡಿತು. ಅದೇ 1971ರಲ್ಲಿ ಸ್ಥಾಪನೆಗೊಂಡ ಸೀಟೂ. ಹೀಗೆ ಮೇಲಿನಿಂದ ಉಂಟಾದ ಈ ಒಡಕು ಕೆಳಗಿನ ವರೆಗೂ ಹಬ್ಬಿತು. ಕಾರ್ಖಾನೆಗಳ ಮಟ್ಟದಲ್ಲಿ 'ಪ್ರತಿ ಯೂನಿಯನ್‌ಗಳ' ಸಂಖ್ಯೆ ಅಧಿಕವಾಯಿತು. ಕೈಗಾರಿಕಾ ಮಟ್ಟಗಳಲ್ಲಿ ಪ್ರತಿ 'ಫೆಡರೇಶನ್‌ಗಳು' ಸ್ಥಾಪನೆಯಾದವು.

ಹೀಗೆ ವಿವಿಧ ರಾಜಕೀಯ ಹಾಗೂ ಸೈದ್ಧಾಂತಿಕ ನಿಲುವುಗಳನ್ನು ಹೊಂದಿದರೂ ಎಲ್ಲರಿಗೂ ಒಂದೇ ಸಂಯುಕ್ತ ಟ್ರೇಡ್‌ಯೂನಿಯನ್ ಸಂಘಟನೆಯಿರಬೇಕು, ಕಾರ್ಮಿಕರ ಸಾರ್ವತ್ರಿಕ ಹಿತ ದೃಷ್ಟಿಯಿಂದ, ಅವರ ಹಕ್ಕುಗಳ ಹಿತ ದೃಷ್ಟಿಯಿಂದ ಈ ಟ್ರೇಡ್ ಯೂನಿಯನ್‌ಗಳು ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಯವೆಸಗಬೇಕು ಎಂಬ ಗ್ರಹಿಕೆಯೇ ಸಮಾಧಿಯಾಯಿತು. ಇಂತಹ ತಿರೋಗಾಮಿ ಬೆಳವಣಿಗೆಯ ಸಾಧನೆಯ ಕೀರ್ತಿ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಹೋಗಬೇಕು.



ಇಂದ್ರಜಿತ್ ಗುಪ್ತ

## ಜೀವಂತ ಚಳವಳಿ

ಎಐಟಿಯುಸಿ ಜೀವಂತವಾಗಿದೆ, ಹೋರಾಡುತ್ತಿದೆ. ಇದಕ್ಕೆ ಕಾರಣ ಕಮ್ಯೂನಿಸ್ಟರು ಅದರ ಬಾವುಟವನ್ನು ಎತ್ತಿ ಹಿಡಿದಿರುವುದು. 'ಹಡಗ ಉರಿಯುವಾಗ ಎಲ್ಲರೂ ಓಡಿ ಹೋದರೂ ಹುಡುಗ ಮಾತ್ರ ಅಲ್ಲೇ ಹಡಗವನ್ನು ಕಾಯುತ್ತಿದ್ದ' ಎಂಬ ಕಥೆ ಇಲ್ಲಿ ನೆನಪಿಗೆ ಬರುತ್ತದೆ. ಆದರೆ ಇಂತಹ ಅನೈಕ್ಯತೆಯ ಕ್ರಿಯಾ ಸರಣಿಯಿಂದ ಕಾರ್ಮಿಕ ವರ್ಗಕ್ಕೆ ಪ್ರಯೋಜನವಿಲ್ಲ, ಅದರ ಲಾಭಪಡೆಯುವವರು ಕಾರ್ಮಿಕವರ್ಗದ ಶತ್ರುಗಳು ಎಂಬುದನ್ನು ನಾವು ಅರಿತುಕೊಳ್ಳಬೇಕು. ಈ ರೋಗಕ್ಕೆ ಭಾರತವೊಂದೇ ಬಲಿ ಬಿದ್ದುದು ಎಂದು ನಾವು ತಿಳಿದುಕೊಳ್ಳಬಾರದು, ಬದಲು ಅಭಿವೃದ್ಧಿ ಹೊಂದುತ್ತಿರುವದೇಶಗಳೂ ಅಭಿವೃದ್ಧಿ ಹೊಂದಿದ ದೇಶಗಳೂ ಈ ರೋಗಕ್ಕೆ ಬಲಿಯಾಗಿವೆ.

ಇನ್ನು ಅಂತರ್ರಾಷ್ಟ್ರೀಯವಾಗಿ ನೋಡೋಣ, ದ್ವಿತೀಯ ಮಹಾಯುದ್ಧ ವಿಜಯ ಸಾಧಿಸಿದಾಗ 1945ರಲ್ಲಿ ಜಾಗತಿಕ ಟ್ರೇಡ್ ಯೂನಿಯನ್ (ಡಬ್ಲ್ಯು.ಎಫ್.ಟಿ.ಯು) ಸ್ಥಾಪನೆಗೆ ಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಡಬ್ಲ್ಯುಎಫ್‌ಟಿಯುವಿನ ಸ್ಥಾಪಕ ಸದಸ್ಯರಲ್ಲಿ ಭಾರತವೂ ಒಂದು ಇಲ್ಲಿಯೂ ಕೂಡಾ 1949ರಲ್ಲಿ ಐಕ್ಯವನ್ನು ಮುರಿಯಲಾಯಿತು. ಯಾರಿಂದ ? ಬ್ರಿಟಿಷ್ ಮತ್ತು ಅಮೆರಿಕನ್ ಟ್ರೇಡ್ ಯೂನಿಯನ್‌ಗಳಿಂದ, ಈ ಛಿದ್ರಕಾರಿಗಳು ತಮ್ಮದೇ ಆದ 'ಇಂಟರ್‌ನ್ಯಾಶನಲ್ ಕಾನ್ಫಡರೇಶನ್ ಆಫ್ ಫ್ರೀ ಟ್ರೇಡ್ ಯೂನಿಯನ್ಸ್' (ಐಸಿಎಫ್‌ಟಿಯು) ಎಂಬ ಸಂಸ್ಥೆಯನ್ನು ಸ್ಥಾಪಿಸಿಕೊಂಡವು. ಇಂದು ಭಾರತದಲ್ಲಿ ಎಐಟಿಯುಸಿ– ಡಬ್ಲ್ಯು. ಎಫ್. ಟಿ. ಯು.ವಿಗೆ ಸೇರ್ಪಡೆಗೊಂಡಿದ್ದರೆ ಇಂಟಕ್ ಮತ್ತು ಎಚ್. ಎಂ,

4ನೇ ಪುಟಕ್ಕೆ

# ಟ್ರೇಡ್ ಯೂನಿಯನ್ ಚಳವಳಿ ಇದಿರಿಸುತ್ತಿರುವ ಸವಾಲುಗಳು

(3ನೇ ಪುಟದಿಂದ)

ಎಸ್.ಗಳು ಐಸಿಎಫ್‌ಟಿಯುಗೆ ಸೇರ್ಪಡೆಗೊಂಡಿವೆ.

ಹೀಗೆ ಟ್ರೇಡ್ ಯೂನಿಯನ್‌ಗಳನ್ನು ರಾಜಕೀಯವಾಗಿಯೂ ಸಂಘಟನಾತ್ಮಕವಾಗಿಯೂ ಒಡೆದುದರಿಂದ ಏನನ್ನು ಸಾಧಿಸಲು ಶಕ್ಯವಾಗಿದೆ ? ತಾರ್ಕಿಕವಾಗಿ ನೋಡಿದರೆ ಅವನ್ನು ನಿಷ್ಪ್ರಯೋಜಕವೆಂದು ಪರಿಗಣಿಸಿ ಲೆಕ್ಕದಿಂದ ವಜಾ ಮಾಡಬೇಕಾಗಿ ಬರುತ್ತದೆ. ಇದು ನಮ್ಮ ಕೆಲವು ಬುದ್ಧಿಜೀವಿ ಹಿತೈಷಿಗಳಿಗೆ ಅತ್ಯಂತ ಪ್ರಿಯವಾಗಿರುವ ಒಂದು ನಿರಾಶಾದಾಯಕ ತೀರ್ಮಾನ. ಇದು ಸತ್ಯವಾದರೂ ಹಾಗಿಲ್ಲ. ಸಾಧನೆಗಳನ್ನು 'ಅದ್ಭುತ'ವೆಂದು ಕರೆಯುವಂತಿಲ್ಲ. ಆದರೆ ಅವುಗಳೆಲ್ಲ ಕಠಿಣ ಹೋರಾಟಗಳ ಅಪಾರ ತ್ಯಾಗಗಳ ಪ್ರತಿಫಲಗಳು. ಇವುಗಳ ಮೂಲಕವೇ ಜಾಗತಿಕ ಬಂಡವಳಶಾಹಿ ಬಿಕ್ಕಟ್ಟಿನ ವೇಳೆಯಲ್ಲಿ ಭಾರತ ಸರ್ಕಾರವೂ ಬೆಂಬಲ ನೀಡುವ ಬಂಡವಳಶಾಹಿ ದಾಳಿಯ ಇದಿರಿನಲ್ಲಿ ಕಾರ್ಮಿಕ ವರ್ಗ ತನ್ನ ಟ್ರೇಡ್ ಯೂನಿಯನ್ ಹಕ್ಕುಗಳನ್ನು, ಜೀವನಮಟ್ಟವನ್ನು, ತನ್ನ ಕೆಲಸಗಳನ್ನು ಕಾಪಾಡಿಕೊಂಡು ಬಂದಿದೆ; ಮುಂದಕ್ಕೂ ಕಾಪಾಡಿಕೊಂಡು ಬರುತ್ತದೆ.

## ಸಾಧನೆಗಳು

❀ ಭಾರತವು ಬ್ರಿಟಿಷ್ ಆಡಳಿತದಿಂದ ಬಳವಳಿಯಾಗಿ ಪಡೆದುಕೊಂಡ ವಸಾಹತುವಾದಿ ವೇತನ ಕ್ರಮವನ್ನು ಸಾರ್ವಜನಿಕ ಕ್ಷೇತ್ರ ಹಾಗೂ ಸಂಘಟಿತ ಕೈಗಾರಿಕೆಗಳಲ್ಲಾದರೂ ತೆಗೆದುಹಾಕಲು ಸಾಧ್ಯವಾಗಿದೆ. ಆದರೆ ಇದೇನೂ 'ಶಾಂತಿಯುತವಾದ ಕ್ರಿಯಾಸರಣಿ'ಯಾಗಿರಲಿಲ್ಲ. ಇದೀಗ 'ಉನ್ನತ ವೇತನ ಪಡೆಯುವ ದ್ವೀಪಗಳು' ಎಂಬ ಮಂತ್ರವನ್ನು ನಾವು ಕೇಳುತ್ತಿದ್ದೇವೆ.

❀ ಕನಿಷ್ಠ ಕಾನೂನು ಬದ್ಧ ಬೋನಸ್, ಸಾಮಾಜಿಕ ಭದ್ರತೆ, ಅಸಂಘಟಿತ ಕೈಗಾರಿಕಾ ಕ್ಷೇತ್ರದ ಕನಿಷ್ಠ ಕೂಲಿ ಅನ್ವಯವಾಗುವ ಕಾರ್ಮಿಕರಿಗೆ ಕನಿಷ್ಠ ಕೂಲಿ, ಇಂತಹ ಸವಲತ್ತುಗಳಿಗಾಗಿ ಹಲವಾರು ಕಾನೂನುಗಳನ್ನು ಮಾಡಿಸಲು ಕಾರ್ಮಿಕ ವರ್ಗಕ್ಕೆ ಸಾಧ್ಯವಾಗಿದೆ.


ಆದರೆ ಕಾನೂನು ಮೂಲಕ ಭರವಸೆ ನೀಡಿರುವ ಈ ಹಕ್ಕುಗಳನ್ನು ಪಡೆದುಕೊಳ್ಳುವುದೇ ಒಂದು ತಲೆನೋವು. ಅವುಗಳನ್ನು ಉಲ್ಲಂಘಿಸುವವರ ವಿರುದ್ಧ ಹೋರಾಡಬೇಕು. ಅವುಗಳನ್ನು ಕಾರ್ಮಿಕರ ಕೈಗಳಿಂದ ಕಸಿದುಕೊಳ್ಳಲಾಗುವುದನ್ನು ತಡೆಯಬೇಕು. ಇಷ್ಟೇ ಅಲ್ಲ; ಅಸಂಘಟಿತ ಕ್ಷೇತ್ರದ ಮಿಲಿಯಾಂತರ ಕಾರ್ಮಿಕರ ಜೀವನ ಮಟ್ಟವನ್ನು ಹೆಚ್ಚಿಸಬೇಕು.

ಅಂತರ್ರಾಷ್ಟ್ರೀಯ ಹಣ ಕಾಸು ಸಂಸ್ಥೆ ಎಂತಹ ಆದೇಶವನ್ನು ನೀಡಿದ್ದರೂ ಭೂತಲಿಂಗಂ ಸಮಿತಿ ಪ್ರೇರಿತ 'ವೇತನಸ್ತಂಭನ' ನೀತಿಯನ್ನು ಜಾರಿ ಮಾಡದಂತೆ ಸರಕಾರವನ್ನು ನಿರ್ಬಂಧಿಸಲು ಕಾರ್ಮಿಕ ವರ್ಗಕ್ಕೆ ಸಾಧ್ಯವಾಗಿದೆ.

ಇಷ್ಟೆಲ್ಲ ಇದ್ದರೂ ಭಾರತದ ಶ್ರಮದ ಬೆಲೆ ಜಗತ್ತಿನಲ್ಲೇ ಅತಿ ಅಗ್ಗವಾದುದು. ಆದುದರಿಂದಲೇ ಬಹುರಾಷ್ಟ್ರೀಯ ಸಂಸ್ಥೆಗಳು ಅದರ ಸಹಪ್ರವರ್ತಕರು ಇಂತಹ ಬೇಟೆಯನ್ನರಸಿ ಇಲ್ಲಿಗೇ ಬರುತ್ತಾರೆ, ಇಲ್ಲಿಂದ 'ರಫ್ತು' ಮಾಡುವ ಸಾಮಗ್ರಿಗಳನ್ನು ಅವರು ತಯಾರಿಸುತ್ತಾರೆ,

## ಸಾರ್ವಜನಿಕ ಕ್ಷೇತ್ರ

❀ ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆಯ ಕುರಿತಾಗಿ ಒಂದು ಅರ್ಥಪೂರ್ಣವಾದ ಅವಕಾಶ ಸಿಗದೆ ಹೋದರೂ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಉತ್ಪಾದನೆಯಲ್ಲಿ ಬಹು ದೊಡ್ಡದಾದ ಕೊಡುಗೆಯನ್ನು ನೀಡಿದ್ದಾರೆ. ಅದೂ ಕೂಡಾ ಯಾವ ಸಂದರ್ಭದಲ್ಲಿ ? ಕಾರ್ಮಿಕರ ಕುರಿತಾಗಿ ಸಹಾನುಭೂತಿಯೇ ಇಲ್ಲದ ಆಡಳಿತ ವರ್ಗಗಳ ನೀತಿಗಳ ಫಲವಾಗಿ ಕೈಗಾರಿಕಾ ವಿವಾದ, ಕೆಲಸದ ನಿಲುಗಡೆಗಳು ಇರುವ ಸಂದರ್ಭದಲ್ಲಿ. ಆದರೂ ಕೂಡಾ ಉತ್ಪಾದನೆಯು ಹೆಚ್ಚಳವಾಗಿದೆ,



ಕಾರ್ಮಿಕ ವರ್ಗವೇ ಪ್ರಧಾನವಾಗಿ ಭಾಗವಹಿಸಿದ್ದ ದೆಹಲಿ ಶಾಂತಿಯಾತ್ರೆ, 1982

ಸಾರ್ವಜನಿಕ ಕ್ಷೇತ್ರದ ಕೆಲವು ಕೈಗಾರಿಕೆಗಳಲ್ಲಿ ನಷ್ಟವಾಗುತ್ತದೆ, ಅವುಗಳ ವೈಖರಿ ಚೆನ್ನಾಗಿಲ್ಲ ಎನ್ನಲಾಗುತ್ತದೆ. ಇದಕ್ಕೆ ಕಾರಣ ನಿಜಕ್ಕೂ 'ಕಾರ್ಮಿಕರ ತೊಂದರೆ' ಯಲ್ಲ, ಬದಲು ಆಡಳಿತದ ವೈಫಲ್ಯ, ನೌಕರಶಾಹಿಯ ಯೋಜನೆ, ಖಾಸಗಿ ಬಂಡವಳಗಾರರಿಗೆ ನೀಡುವ ಅನಾವಶ್ಯಕವಾದ ಸವಲತ್ತುಗಳು ಮತ್ತು ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರ ಎಂಬುದಾಗಿ ಕಾರ್ಮಿಕರು ನ್ಯಾಯವಾಗಿಯೇ ಹೇಳಬಹುದು,

## ಐಕ್ಯ ಚಳವಳಿ

❀ ಟ್ರೇಡ್ ಯೂನಿಯನ್ ಚಳುವಳಿಯ ಇತಿಹಾಸದ ಈ ದೀರ್ಘ ಸರಣಿಯಲ್ಲಿ ಸಾಂಕ್ರಾಮಿಕದಂತೆ ಒಡೆಯುತ್ತಾ ಬರುತ್ತಿದೆ, ತಾತ್ವಿಕ ಮತಭೇದಗಳು ಹರಿತವಾಗಿವೆ, ಹಾಗಿದ್ದರೂ ಕೂಡಾ 1981ರಲ್ಲಿ ರಾಷ್ಟ್ರೀಯ ಆಂದೋಲನಾ ಸಮಿತಿಯ ಸ್ಥಾಪನೆ. ಸರ್ವರಿಗೂ ಒಪ್ಪಿದ ವಿಷಯಗಳಲ್ಲಿ ಸಂಯುಕ್ತ ಸಾಮೂಹಿಕ ಕಾರ್ಯಾಚರಣೆಗೆ ನಿರಂತರವಾಗಿ ಕಾರ್ಯಕ್ರಮವನ್ನು ಹಾಕುತ್ತಿರುವುದು ಒಂದು ಅನುಕೂಲಕರವಾದ ಮುನ್ನಡೆ, ದುಡಿಯುವವರ ನಡುವೆ ಹೆಚ್ಚುತ್ತಿರುವ ಐಕ್ಯತೆಯ ಜಾಗೃತಿಗೆ ಇದು ಪ್ರತೀಕ. ಇದು ಅನಿವಾರ್ಯವಾಗಿಯೂ ಇತ್ತು, ಹಣದುಬ್ಬರದ ಆಳವಾಗುತ್ತಿರುವ ಬಿಕ್ಕಟ್ಟು, ನಿಜವೇತನ ಕುಂಠಿತವಾಗುವಿಕೆ, ಹೆಚ್ಚುತ್ತಿರುವ ನಿರುದ್ಯೋಗ ಲಾಕೌಟುಗಳು, ಕಾರ್ಖಾನೆಗಳ ಮುಚ್ಚೋಣ, ಕೈಗಾರಿಕೆಗಳೇ ರೋಗಗ್ರಸ್ಥವಾಗುವಿಕೆ, ಯಂತ್ರಗಳ ನವೀಕರಣ, ರಿಟ್ರೆಂಚ್‌ಮೆಂಟ್‌ಗಳು, ಟ್ರೇಡ್ ಯೂನಿಯನ್‌ಗಳ ಮೇಲೆ ಸರಕಾರ ಮತ್ತು ಮಾಲೀಕರ ದಾಳಿಗಳು ಇವು ಇಂತಹ ಐಕ್ಯ ಕಾರ್ಯಾಚರಣೆಯನ್ನು ಶೀಘ್ರಪಡಿಸಿದವು,

ರಾಷ್ಟ್ರೀಯ ಆಂದೋಲನಾ ಸಮಿತಿಯ ಸ್ಥಾಪನೆಯಾಗದೇ ಹೋಗಿದ್ದರೆ, ಸಂಯುಕ್ತ ಹೋರಾಟದ ವಾತಾವರಣವನ್ನು ಉಂಟು ಮಾಡದೇ ಹೋಗಿದ್ದರೆ, ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ, ಆದೇಶಗಳ ದಾಳಿಗಳನ್ನು ವಿಫಲಗೊಳಿಸಲು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗೆ ಸಾಧ್ಯವಾಗುತ್ತಿರಲಿಲ್ಲ. ದತ್ತಾ ಸಾಮಂತರು ಒಪ್ಪಲಿ-ಬಿಡಲಿ, ಮುಂಬಯಿಯ ಗಿರಣಿ ಕಾರ್ಮಿಕರ ಒಂದೂವರೆ ವರುಷ ಕಾಲ ಮುಷ್ಕರ ನಡೆಯುತ್ತಿರಲಿಲ್ಲ.

## ದ್ವಂದ್ವಾತ್ಮಕ ಕ್ರಿಯಾಸರಣಿ

ಈ ಕಾರ್ಮಿಕರ ಹೋರಾಟವು ನಿಜಕ್ಕೂ ಒಂದು ದ್ವಂದ್ವಾತ್ಮಕ ಕ್ರಿಯಾಸರಣಿ. ಇವೇನೂ ಸರಳವಾದ ಸುಲಭ ಹಾದಿಯಲ್ಲ. ಬದಲು ಕಷ್ಟಕರವಾದ ವೈರುಧ್ಯಗಳಿಂದ ಕೂಡಿದ ದಾರಿ, ವಿಜಯ ಮತ್ತು ಅಪಜಯ, ಬೇರೆ ದೇಶಗಳು ಅರ್ಥವೇ ಮಾಡಿಕೊಳ್ಳಲಾರದ ಸಾಮಾಜಿಕ ಸಂಕೀರ್ಣತೆ, ಎಲ್ಲ ದೌರ್ಬಲ್ಯಗಳಿದ್ದರೂ ಕೂಡ ಎಪ್ಪೇವರುಷಗಳ ಬಳಿಕ ನಮ್ಮ ಸಮಾಜದ ಅತ್ಯಂತ ಸಂಘಟಿತವರ್ಗವನ್ನು ಟ್ರೇಡ್ ಯೂನಿಯನ್‌ಗಳು ಪ್ರತಿನಿಧೀಕರಿಸುತ್ತವೆ ಎಂಬ ಸಂಗತಿ ಸತ್ಯವಲ್ಲವೆ ? ಟ್ರೇಡ್ ಯೂನಿಯನ್ ಚಳವಳಿಯ ಶಕ್ತಿಯನ್ನು ಇಂದು ಸಂಬಂಧಪಟ್ಟವರೆಲ್ಲರೂ ಮನ್ನಿಸಲೇಬೇಕಾಗಿ ಬರಲಿಲ್ಲವೆ ? ಐಕ್ಯಭಂಜಕ ಶಕ್ತಿಗಳನ್ನು ಛಿದ್ರಕಾರಿ ಶಕ್ತಿಗಳನ್ನು ಕಾರ್ಮಿಕ–ಕಾರ್ಮಿಕರ ನಡುವೆ ಸೋದರ ದ್ವೇಷಗಳನ್ನು ಉಂಟುಮಾಡುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಐಕ್ಯ, ಮತ್ತು ಐಕ್ಯ ಕಾರ್ಯಾಚರಣೆಗಳನ್ನು ನಡೆಸಿದ್ದರೆ ಇನ್ನಷ್ಟು ವಿಜಯಗಳನ್ನು ಸಾಧಿಸಬಹುದಿತ್ತು, ಇನ್ನೂ ಸಾಧಿಸಬಹುದಾಗಿದೆ.

## ಸವಾಲುಗಳು

ದೇಶದ ಟ್ರೇಡ್ ಯೂನಿಯನ್ ಚಳವಳಿಯನ್ನು ಇದಿರಿಸುವ ಸವಾಲುಗಳು ಹಲವಾರು. ಮುಂಬರುವ ದಿನಗಳಲ್ಲಿ ಬರಲಿರುವ ಸವಾಲುಗಳಲ್ಲಿ ಮುಖ್ಯವಾದವು ಹೀಗಿವೆ;

❀ ಸಾಮ್ರಾಜ್ಯವಾದಿಗಳ ಪಂಥಾಹ್ವಾನ, ಅಣುಯುದ್ಧಕ್ಕಾಗಿರುವ ಈ ಸಾಮ್ರಾಜ್ಯವಾದಿಗಳ ಜಾಗತಿಕ ಯೋಜನೆ. ಆದರಲ್ಲೂ ಭಾರತದ ಭದ್ರತೆ, ಸಾರ್ವಭೌಮತೆಗಿರುವ ಅವುಗಳ ಬೆದರಿಕೆ.

ಟ್ರೇಡ್‌ಯೂನಿಯನ್ ಚಳವಳಿಯ ಮುಂಚೂಣಿಯ ಶಕ್ತಿಗಳು ಶಾಂತಿಗಾಗಿರುವ ಹೋರಾಟದಲ್ಲಿ ಸಕ್ರಿಯವಾದ ಪಾತ್ರವನ್ನು ವಹಿಸುತ್ತಿವೆ. 1982ರ ಅಕ್ಟೋಬರ 4ರಂದು ನಡೆದ 10 ಲಕ್ಷ ಜನರ ಶಾಂತಿಯಾತ್ರೆಯಲ್ಲಿ ಟ್ರೇಡ್ ಯೂನಿಯನ್‌ಗಳ ಪಾತ್ರ ಅಭೂತಪೂರ್ವವಾಗಿತ್ತು. ಅದರ ಮೊದಲು ಸೆಪ್ಟೆಂಬರ 1ರಂದೂ ರಾಷ್ಟ್ರಾದ್ಯಂತ ಯುದ್ಧ ವಿರೋಧಿ ದಿನವನ್ನು ಆಚರಿಸಲಾಗಿತ್ತು. ಡಬ್ಲ್ಯುಎಫ್‌ಟಿಯು ಕರೆಯಂತೆ 1983 ರಲ್ಲೂ ಯಶಸ್ವಿಯಾಗಿ ಯುದ್ಧ ವಿರೋಧಿ ದಿನಾಚರಣೆ ನಡೆದಿತ್ತು.

ಮುಂದಿನ ವರುಷ "ಅಭಿವೃದ್ಧಿ ಮತ್ತು ಹೊಸ ಅಂತರ್ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗಾಗಿರುವ" ಏಷ್ಯನ್ ಟ್ರೇಡ್ ಯೂನಿಯನ್‌ಗಳ ಸಮ್ಮೇಳನ"ಕ್ಕೆ ಭಾರತದ ಕಾರ್ಮಿಕರೇ ಆತಿಥೇಯರು.

❀ ಇನ್ನು ಜಾತೀಯವಾದಿ ವಿಭಜನವಾದಿ ಶಕ್ತಿಗಳಿಂದ ಬಂದಿರುವ ಸವಾಲು. ಈ ಶಕ್ತಿಗಳಾದರೋ ಗೊಂದಲ,ದಂಗೆಗಳನ್ನು ಎಬ್ಬಿಸುತ್ತವೆ. ಧರ್ಮದ ಆಧಾರದಲ್ಲಿ ಜಾತಿ, ಕೋಮು, ಭಾಷೆ ಪ್ರಾದೇಶಿಕತೆಗಳ ಆಧಾರದಲ್ಲಿ ಅವು ದುರಭಿಮಾನ, ಅನ್ಯಾಕ್ರಮಣಶೀಲ ಭಾವನೆಗಳನ್ನು ಕೆರಳಿಸುತ್ತವೆ; ಕೆಲವು ಕಾರ್ಮಿಕ ಕೇಂದ್ರಗಳಲ್ಲೇ ಅಲ್ಪಸಂಖ್ಯಾತರ ಸಾಮೂಹಿಕ ಹತ್ಯೆ ನಡೆದಿದೆ. ಇಂತಹ ದಂಗೆಕೋರರನ್ನು ಕಾರ್ಮಿಕವರ್ಗವೇ ಪ್ರತಿಭಟಿಸಿದ, ಸೋದರತ್ವವನ್ನು ಬೆಳೆಸಿದ ಉದಾಹರಣೆಗಳೂ ಇವೆ. ಪಂಜಾಬದಲ್ಲಿ ಹಿಂದೂ–ಸಿಖ್ ಐಕ್ಯತೆಗಾದಿ ಟ್ರೇಡ್ ಯೂನಿಯನ್‌ಗಳು ಪ್ರಕ್ಷೋಭೆಯನ್ನು ನಡೆಸಿದವು. ಆದರೆ ಈ ವಿಛಿದ್ರಕಾರಿಗಳ ಅಪಾಯ ಹೆಚ್ಚುತ್ತಿದೆ. ಕಾರ್ಮಿಕ ವರ್ಗದ ಐಕ್ಯಕ್ಕೆ ಇರುವ ಈ ಅಪಾಯವನ್ನು ಜಯಪ್ರದವಾಗಿ ಸೋಲಿಸಬೇಕಾದರೆ, ಇದರ ವಿರುದ್ಧ ಮಾಡಬೇಕಾದುದು ತುಂಬಾ ಇದೆ.

❀ ಇನ್ನೊಂದು ಸವಾಲು 'ಆರ್ಥಿಕವಾದ' ಮತ್ತು 'ಸ್ಥಳೀಯವಾದ', ಇವು ಸೈದ್ಧಾಂತಿಕವಾಗಿಯೂ ಸಂಘಟನಾತ್ಮಕವಾಗಿಯೂ ಹೋರಾಟಗಳನ್ನು ಗುಣಾತ್ಮಕವಾದ ಉನ್ನತ ಮಟ್ಟಕ್ಕೊಯ್ಯಲು ಅಡ್ಡಿಯಾಗುತ್ತವೆ. ಕಾರ್ಮಿಕ ವರ್ಗದ ನಡುವೆ ಮಾತ್ರವಲ್ಲ. ಇತರ ಪ್ರಜಾಪ್ರಭುತ್ವವಾದಿ ಹಾಗೂ ಶೋಷಿತ ಜನವಿಭಾಗಗಳೊಂದಿಗೆ ಕೂಡ ಸೌಹಾರ್ದ ಕಾರ್ಯಾಚರಣೆಗಳನ್ನು ನಡೆಸಲು ಆತಂಕವನ್ನು ಉಂಟುಮಾಡುತ್ತವೆ.

ಇಂತಹ ಸನ್ನಿವೇಶಗಳ ಸಂಕೀರ್ಣತೆಗಳು ಅವುಗಳ ಏಕಪಕ್ಷೀಯತೆಗಳು ಇವನ್ನು ನಿವಾರಣೆ ಮಾಡಬೇಕಾದುದು ಅಗತ್ಯ. ಇವನ್ನು ಸರ್ವ ಕಾಲದಲ್ಲೂ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. 1982ರ ಫೆಬ್ರವರಿಯಲ್ಲಿ ಹವಾನದಲ್ಲಿ ನಡೆದ ಡಬ್ಲ್ಯು.ಎಫ್.ಟಿಯು ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ ಕಾಮ್ರೆಡ್ ಕಾಸ್ಟ್ರೋ ಹೇಳಿದಂತಹ ಈ ಮಾತುಗಳನ್ನು ಇಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು.

## ಶಾಂತಿ ಮತ್ತು ಜೀವನ

"ಶಾಂತಿ ಮತ್ತು ಅಂತರ್ರಾಷ್ಟ್ರೀಯ ನಿಷ್ಕಲಹ ಈ ಪ್ರಶ್ನೆಗಳಲ್ಲಿ ಜಗತ್ತಿನಾದ್ಯಂತ ಕಾರ್ಮಿಕ ವರ್ಗ ಆಸಕ್ತಿಯನ್ನು ವ್ಯಕ್ತಪಡಿಸುವುದು ತರ್ಕಬದ್ಧ. ಆದರೆ ಜಗತ್ತಿನ ಹೆಚ್ಚಿನ ಪ್ರದೇಶಗಳಲ್ಲಿ ಭಾರಿ ಪ್ರಮಾಣದಲ್ಲಿ ಕಾರ್ಮಿಕರಿದ್ದಾರೆ, ಅವರ ಜೀವನವೇ ಅನಿಶ್ಚಿತ. ದುಡಿಮೆಗೆ ದೊರೆಯುವ ಪ್ರತಿಫಲ ಅತಿ ಕಡಿಮೆ. ಅವರ ಭವಿಷ್ಯ ನಿರಾಶಾದಾಯಕ. ಹೀಗಿರುವಾಗ ಶಾಂತಿಗಾಗಿರುವ ಚಳವಳಿಯೆಂದರೆ ನೇರವಾಗಿ ಅವರಿಗೆ ಅರ್ಥವಾಗದು... ನಿಜಕ್ಕೂ ಜಗತ್ತಿನಾದ್ಯಂತ ಸಾಮೂಹಿಕ ಚಳವಳಿಯನ್ನು ನಾವು ಬೆಳೆಸಬೇಕಿದ್ದರೆ, ಶಾಂತಿ ಹೋರಾಟದ ಬಾವುಟವೂ ಕಾರ್ಮಿಕರ

5ನೇ ಪುಟಕ್ಕೆ

# ಕರ್ನಾಟಕದಲ್ಲಿ ಕಾರ್ಮಿಕವರ್ಗ; ಸಂಘಟನೆಯ ಇತಿಹಾಸ

**ಕರ್ನಾಟಕದ ಟ್ರೇಡ್ ಯೂನಿಯನ್ ಚಳವಳಿ ಇಂದು ಪಕ್ವಗೊಂಡಿದೆ. 1940ರ ಕಾಲದಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭವಾಗಿದ್ದ ಈ ಚಳವಳಿ ಇಂದು ಕಾರ್ಮಿಕ ವರ್ಗದ ಮಧ್ಯೆ ಸಾಕಷ್ಟು ಪ್ರಭಾವವುಳ್ಳ ಚಳವಳಿಯಾಗಿ ಬೆಳೆದಿದೆ. ಕರ್ನಾಟಕದಲ್ಲಿ ಟ್ರೇಡ್ ಯೂನಿಯನ್ ಚಳವಳಿಗೆ ಎಐಟಿಯುಸಿ ನೀಡಿರುವ ಕೊಡುಗೆ ಅಪಾರ.**

ಭಾರತದಲ್ಲಿ ಟ್ರೇಡ್‌ಯೂನಿಯನ್ ಚಳವಳಿ ಎಐಟಿಯುಸಿಯ ಸ್ಥಾಪನೆಯೊಂದಿಗೇ ಹುಟ್ಟಿಕೊಂಡಿತ್ತು. ಆದರೂ ಕರ್ನಾಟಕದಲ್ಲಿ ಟ್ರೇಡ್ ಯೂನಿಯನ್ ಚಳವಳಿಯು ಮೊಳಕೆಯೊಡೆದುದು ಸುಮಾರು 1935-36 ಕಾಲದಲ್ಲಿ. ನಮ್ಮ ರಾಜ್ಯದ ಟ್ರೇಡ್ ಯೂನಿಯನ್ ಚಳವಳಿಯ ಇತಿಹಾಸ ಮತ್ತು ಬೆಳವಣಿಗೆಗಳನ್ನು ಹೆಚ್ಚು ಕಡಿಮೆ ನಾಲ್ಕು ಅವಧಿಗಳನ್ನಾಗಿ ವಿಭಾಗಿಸಬಹುದು. 1 ಸ್ವಾತಂತ್ರ್ಯ ಪೂರ್ವದ ದಿನಗಳು, 2. ಸ್ವಾತಂತ್ರ್ಯ ಪಡೆದ ದಿನದಿಂದ 1952ರ ವರೆಗಿನ ಕಾಲ 3, 1952ರಿಂದ 1975ರ ತನಕದ ಅವಧಿ 4. 1975ರಿಂದ 1983ರ ವರೆಗಿನ ಕಾಲ ಘಟ್ಟ. ಈ ಅವಧಿಗಳು ನಮ್ಮ ದೇಶದ ಕೆಲವೊಂದು ರಾಜಕೀಯ ಬೆಳವಣಿಗೆಗಳಿಗೂ ಅನುಗುಣವಾಗಿದೆ.

## ಸ್ವಾತಂತ್ರ್ಯ ಪೂರ್ವದಲ್ಲಿ

ದೇಶದಲ್ಲಿ ಶಕ್ತಿಯುತವಾದ ಸಾಮ್ರಾಜ್ಯವಾದಿವಿರೋಧಿಹೋರಾಟ ಮೈಸೂರು ರಾಜ್ಯದಂತಹ ರಾಜ ಮಹಾರಾಜರುಗಳ ರಾಜ್ಯಗಳಲ್ಲಿ ಜನಕೀಯ ಚಳವಳಿಗಳು ನಡೆದಿದ್ದವು. ಇವುಗಳಲ್ಲಿ ಕಾರ್ಮಿಕ ವರ್ಗ ಕೂಡಾ ಸೇರಿಕೊಂಡಿತು. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಸ್ಥಾಪನೆಯಾದ ತುಂಬಾ ನಂತರ, ಆದರೆ ಮೈಸೂರು ರಾಜ್ಯವನ್ನು ರಾಜಮಹಾಜರುಗಳು ಕುಟುಂಬ ಆಳುತ್ತಿದ್ದರೂ ಕೂಡಾ ಡಾ|| ಎಂ. ವಿಶ್ವೇಶ್ವರಯ್ಯ, ಮಿರ್ಜಾ ಎಂ. ಇಸ್ಮಾಯಿಲ್ ಇವರ ದೂರದೃಷ್ಟಿಯ ಫಲವಾಗಿ ಸರಕಾರವೇ ಹಲವಾರು ಕೈಗಾರಿಕೆಗಳನ್ನು ಸ್ಥಾಪಿಸಿತ್ತು, ಸುಮಾರು 1884ರ ಕಾಲದಲ್ಲೇ ಬೆಂಗಳೂರಿನಲ್ಲಿ ಎರಡು ಜವುಳಿ ಗಿರಣಿಗಳು ಸ್ಥಾಪಿಸಲ್ಪಟ್ಟಿದ್ದವು. ಅವುಗಳಲ್ಲೊಂದು ಬಿನ್ನಿಮಿಲ್, 1886ರಲ್ಲಿ ಕೋಲಾರದ ಚಿನ್ನದ ಗಣಿಗಳು ಅಸ್ತಿತ್ವಕ್ಕೆ ಬಂದವು.

ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಎಂದರೆ 20ನೇ ಶತಕದ ಆದಿಯಲ್ಲಿ ಶಿವಸಮುದ್ರದಲ್ಲಿ ಪ್ರಥಮ ವಿದ್ಯುತ್ಪಾದಕ ಕೇಂದ್ರ ಸ್ಥಾಪನೆಯಾಯಿತು. ಆನಂತರ ರೂಪಗೊಂಡ ಕೆ. ಆರ್. ಸಾಗರ ಅಣೆಕಟ್ಟು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಿತು. 1913ರಲ್ಲಿ ಮೈಸೂರು ಬ್ಯಾಂಕ್ ರಚನೆಯಾಯಿತು. 1918ರಲ್ಲಿ ಭದ್ರಾವತಿಯಲ್ಲಿ ಮೈಸೂರು ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ (ಈಗ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ)ಯ ನಿರ್ಮಾಣಗೊಂಡು 1923ರಲ್ಲಿ ಅದು ಉತ್ಪಾದನೆಯನ್ನಾರಂಭಿಸಿತು. ಹೀಗೆ ಈಕಾಲದಲ್ಲಿಯೇ ಬೆಂಗಳೂರು, ಮೈಸೂರು, ದಾವಣಗೆರೆಗಳಲ್ಲಿ ಕೆಲವು ರೇಶ್ಮೆ ಕಾರ್ಖಾನೆಗಳೂ ಜವುಳಿ ಗಿರಣಿಗಳೂ ತಲೆ ಎತ್ತಿದವು. ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಫಿ ತೋಟಗಳು ಅಸ್ತಿತ್ವಕ್ಕೆ ಬಂದವು. ಹಳೆಯ ಮದರಾಸು ಪ್ರಾಂತದ ಆಡಿಯಲ್ಲಿದ್ದ ದ.ಕ. ಜಿಲ್ಲೆಯಲ್ಲಿ ಈ ಕಾಲದಲ್ಲೇ ಹಂಚು ಮತ್ತು ಬೀಡಿ ಕೈಗಾರಿಕೆಗಳು ಬೆಳೆದವು,

## ಸಂಘಟನೆಯಾರಂಭ

ದ್ವಿತೀಯ ಯುದ್ಧಾನಂತರ ಔದ್ಯಮೀಕರಣವು ತೀವ್ರವಾದಿ ಬೆಳೆಯುತ್ತಾ ಬಂದರೂ ರಾಜ್ಯದಲ್ಲಿ ಪ್ರಮುಖವಾಗಿ ಸ್ಥಾಪನೆಯಾದ ಕೈಗಾರಿಕೆ-ವಿಮಾನ ಕೈಗಾರಿಕೆ. ಇದನ್ನು ಸ್ಥಾಪಿಸಿದಾತ ವಾಲಾಚಂದ್ ಹೀರಾಚಂದ್. ಇದು ಖಾಸಗಿ ಕ್ಷೇತ್ರದಲ್ಲಿತ್ತು. ನಂತರ ಇದನ್ನು ಸರಕಾರವೇ ವಶಪಡಿಸಿಕೊಂಡಿತು. ಇಂದು ಹಿಂದೂಸ್ತಾನ್ ಏರೋನಾಟಿಕ್ಸ್ ದೇಶದಲ್ಲೇ ಅತ್ಯಂತ ಹಿರಿದಾದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆ, ಇದರಲ್ಲಿ 22 ಸಾವಿರ ಮಂದಿ ಕಾರ್ಮಿಕರು ದುಡಿಯುತ್ತಾರೆ, 1964ರ ವೇಳೆಯಲ್ಲಿ ನಮ್ಮ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳೂ ದೊಡ್ಡ ಕೈಗಾರಿಕೆಗಳೂ ಸೇರಿ 605 ಕಾರ್ಖಾನೆಗಳಿದ್ದವು. ಅವುಗಳನ್ನು 77,518 ಮಂದಿ ಕಾರ್ಮಿಕರು ದುಡಿಯುತ್ತಿದ್ದರು.

ಕರ್ನಾಟಕದಲ್ಲಿ ಟ್ರೇಡ್ ಯೂನಿಯನ್ ಚಳವಳಿ ಜನ್ಮ ತಾಳಿದ್ದು, ಈ ಕಾಲಾವಧಿಯಲ್ಲಿ. ದೇಶದಲ್ಲಿ ಇರುವ ಗಿರಣಿ ಜವುಳಿ ಕಾರ್ಮಿಕರಂತೆಯೇ ರಾಜ್ಯದ ಜವುಳಿ ಕಾರ್ಮಿಕರೂ ತಾವು ತಂತಮ್ಮ ಯೂನಿಯನ್‌ಗಳಲ್ಲಿ ಸಂಘಟನೆಗೊಂಡದ್ದೇ ಅಲ್ಲದೆ ಪಾಳೆಯಗಾರಿಕೆಯ ವಿರುದ್ಧ ರಾಜ ಮಹಾರಾಜರ ವಿರುದ್ಧ ನಡೆದ ಶಕ್ತಿಯುತ ಹೋರಾಟದಲ್ಲಿ ಭಾಗವಹಿಸಿದ್ದರು. ಆ ಹೋರಾಟದಲ್ಲಿ ಅವರನ್ನು ಸಂಘಟಿಸಿ ಭಾಗವಹಿಸುವಂತೆ ಮಾಡಿದ ಕೀರ್ತಿ ನಾಲ್ಕು ನಾಯಕರಿಗೆ ಹೋಗಬೇಕು. ಅವರೆಂದರೆ ಕೆ.ಟಿ. ಭಾಷ್ಯಂ, ಎನ್.ಡಿ. ಶಂಕರ್, ಎಂ.ಎಸ್. ರಾಮರಾವ್ ಮತ್ತು ಸಿ.ಬಿ. ಮೊನ್ನಯ್ಯ. ಈ ನಾಯಕರಲ್ಲಿ ಕೆ.ಟಿ. ಭಾಷ್ಯಂ ಕಾಂಗ್ರೆಸಿಗರು, ಉಳಿದ ಮೂವರು ಕಮ್ಯೂನಿಸ್ಟರು, ಈ ನಾಲ್ವರೂ ಸೇರಿ ಭಾಗವಹಿಸಿದ್ದ ಬೆಂಗಳೂರು ಟೆಕ್ಸ್‌ಟೈಲ್ ಲೇಬರ್ ಅಸೋಸಿಯೇಶನಿನ ಆಶ್ರಯದಲ್ಲಿ ಹಲವಾರು ಹೋರಾಟಗಳು ನಡೆದವು. ಅವುಗಳಲ್ಲಿ 1940ರಲ್ಲಿ ನಡೆದ ಹೋರಾಟ ಐತಿಹಾಸಿಕ ಹೋರಾಟವಾಗಿತ್ತು. ಬೋನಸಿಗಾಗಿ, ತಮ್ಮ ಯೂನಿಯನಿನ ಅಂದೀಕಾರಕ್ಕಾಗಿ ಬಿನ್ನಿ ಮಿಲ್‌ನ 8000 ಮಂದಿ ಕಾರ್ಮಿಕರು ಮುಷ್ಕರ ಹೂಡಿದ್ದರು. ಈ ಅವಧಿಯಲ್ಲಿ ನಡೆದ ಪೋಲೀಸ್ ದಬ್ಬಾಳಿಕೆಗೆ ಇತಿಮಿತಿಯಿರಲಿಲ್ಲ. ಸಂಗಾತಿಗಳಾದ ಎನ್.ಡಿ. ಶಂಕರ್, ಎಂ.ಎಸ್. ರಾಮರಾವ್, ಬಿ.ಆರ್.ಕೆ. ಶರ್ಮ ಇವರನ್ನು ಬಂಧಿಸಿ ಗಡಿಪಾರು ಮಾಡಲಾಯಿತು. ಇದು ಕಾರ್ಮಿಕರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನವಾಗಿತ್ತು. ಇದರಿಂದ ಧೃತಿಗೆಡದ ಕಾರ್ಮಿಕರು 30ದಿನಗಳ ಕಾಲ ಸಮರಶೀಲ ಮುಷ್ಕರವನ್ನು ನಡೆಸಿದರು. ಕೊನೆಗೆ ಆಡಳಿತ ತಲೆಬಾಗಿತು; ಕಾರ್ಮಿಕರ ಕೇಳಿಕೆಗಳನ್ನು ಈಡೇರಿಸಿತು,

## ಮುನ್ಸೂಚನೆ

ಈ ಹೋರಾಟ ನಮ್ಮ ರಾಜ್ಯದ ಕಾರ್ಮಿಕ ವರ್ಗದ ಇತರ ಹಲವಾರು ಹೋರಾಟಗಳಿಗೆ ಮುನ್ಸೂಚನೆಯಾಯಿತು, 1941-42ರ ವೇಳೆ ಎಐಟಿಯುಸಿಯ ನೇತೃತ್ವದಲ್ಲಿ ಭದ್ರಾವತಿಯ ಉಕ್ಕಿನ ಕಾರ್ಮಿಕರು ತೀವ್ರ ಹೋರಾಟವನ್ನು ನಡೆಸಿದರು; ಆ ಮೊದಲು ಕೆಲವು ಕಾಂಗ್ರೆಸ್ಸಿಗರ ಪ್ರಭಾವದಲ್ಲಿದ್ದ ಕೋಲಾರ ಚಿನ್ನದ ಗಣಿಗಳ ಕಾರ್ಮಿಕರು ಕಮ್ಯೂನಿಸ್ಟ್ ನಾಯಕತ್ವದೆಡೆ ಬಂದರು. ಈ ಚಿನ್ನದ ಗಣಿಗಳ ಟ್ರೇಡ್ ಯೂನಿಯನ್‌ನ ಚಳವಳಿಯಲ್ಲಿಅಗ್ರಗಾಮಿಗಳಾಗಿದ್ದವರಲ್ಲಿ ಎಂ. ಸಿ. ನರಸಿಂಹನ್, ಕೆ.ಎಸ್. ವಾಸನ್ ವಿ.ಎಂ. ಗೋವಿಂದನ್, ವಜ್ರವೇಲು ಚೆಟ್ಟಿ ಇವರು ಪ್ರಮುಖರು.

ಅದೇ ಸಮಯದಲ್ಲಿ ಬೆಂಗಳೂರು, ದಕ್ಷಿಣಕನ್ನಡ, ಮೈಸೂರು, ಉತ್ತರ ಕರ್ನಾಟಕ, ಗುಲ್ಬರ್ಗ ಜಿಲ್ಲೆಗಳಲ್ಲೂ ಕಾರ್ಮಿಕ ವರ್ಗದ ಚಳವಳಿಗಳು ಬೆಳೆದವು. ನಮ್ಮ ಇಂದಿನ ಹಿರಿಯ ಟ್ರೇಡ್ ಯೂನಿಯನ್ ನಾಯಕರಾದ ಡಿ.ಎಸ್. ಶ್ರೀರಾಮುಲು ತನ್ನ ಎಳೆಯ ದಿನಗಳಲ್ಲಿ ಕಾಂಗ್ರೆಸಿಗರಾಗಿದ್ದರು. 1942ರ ಕಾಲದಲ್ಲಿ ಮಾರ್ಕ್ಸ್‌ವಾದದೆಡೆಗೆ ಆಕರ್ಷಿಸ್ಪಟ್ಟ ಅವರೂ ಕಾ|| ಮರಿದಾಸ್. ವೈ. ಆರ್. ಸತ್ಯನಾರಾಯಣ ಎ. ಎನ್. ಸಿಂಗ್, ಎಂ, ಎಸ್. ಕೃಷ್ಣನ್ ಮತ್ತಿತರರೂ ಸೇರಿ ಕಾರ್ಮಿಕ ವರ್ಗದ ಸಂಘಟನೆಗೆ ತೊಡಗಿದರು. ಮುನಿಸಿಪಲ್, ತಂಬಾಕು ಟ್ಯಾನರಿ, ಜವುಳಿ ಇತ್ಯಾದಿ ಕೈಗಾರಿಕೆಗಳ ಕಾರ್ಮಿಕರು ಎಐಟಿಯುಸಿಯಡಿಯಲ್ಲಿ ಸಂಘಟಿತರಾದರು.

ಮೈಸೂರಿನಲ್ಲಿ ಕಾರ್ಮಿಕ ಚಳವಳಿಯನ್ನು ಕಟ್ಟಿದ ಕೀರ್ತಿ ಸೋಮಸುಂದರ ಶರ್ಮ, ರಮಾನಾಥ್, ಉಗ್ರಪ್ಪ, ಶ್ರೀಧರ್ ಮತ್ತಿತರರಿಗೆ ಸಲ್ಲಬೇಕು. ಈ ಚಳವಳಿಯನ್ನುಕಟ್ಟಲು ಬೇಕಾಗಿ ತಮ್ಮ ಸರ್ವಸ್ವವನ್ನೂ ಅವರು ತ್ಯಾಗ ಮಾಡಿದರು.

## ರೈಲ್ವೆ ಕಾರ್ಮಿಕರು

ಈ ಸಂದರ್ಭದಲ್ಲಿ ಮೈಸೂರುರಾಜ್ಯ ರೈಲ್ವೇ ಕಾರ್ಮಿಕರು ನಡೆಸಿದ ಒಂದು ತಿಂಗಳ ಧೀರೋದಾತ್ತ ಹೋರಾಟವನ್ನು ಇಲ್ಲಿ ತಿಳಿಯಪಡಿಸಬೇಕಾದುದು ಅಗತ್ಯ. ಇದುನಡೆದುದು 1947ರಲ್ಲಿ. ಈ ಮುಷ್ಕರವನ್ನು ಸಂಘಟಿಸಿ ಅದಕ್ಕೆ ನೇತೃತ್ವವನ್ನು ನೀಡುವಲ್ಲಿ ಎಐಟಿಯುಸಿ ಪ್ರಧಾನ ಪಾತ್ರ ವಹಿಸಿತ್ತು. ರೈಲ್ವೆ ಕಾರ್ಮಿಕರನ್ನು ಸಂಘಟಿಸಲು ಬೇಕಾಗಿಯೇ ಡಿ. ಎಸ್. ಶ್ರೀರಾಮುಲು ರೈಲ್ವೆ ಕೆಲಸಗಾರನಾಗಿ ಸೇರಿದರು. ಅವರ ಸಹಾಯಕ್ಕೆ ಎಂ.ಎಸ್.ಕೃಷ್ಣನ್ ನಿಂತರು, ಈ ಭವ್ಯವಾದ ಐಕ್ಯಮುಷ್ಕರ ಜವಾಬ್ದಾರಿ ಸರಕಾರಕ್ಕಾಗಿ ರಾಜ್ಯದ ಜನ ನಡೆಸಿದ ಹೋರಾಟದ ಒಂದು ಭಾಗವಾಗಿತ್ತು. ಈ ಮುಷ್ಕರಪ್ರಚಂಡ ಜಯಶೀಲವಾಗಿ ಕೊನೆಗೊಂಡಿತು.

1942ರ 'ಭಾರತದಿಂದ ತೊಲಗಿರಿ' ಚಳವಳಿಯ ವೇಳೆ ನಡೆದ ಜವುಳಿ ಕಾರ್ಮಿಕರ ಮುಷ್ಕರವಾದ ಬಳಿಕ ನಡೆದ ಮಹತ್ತಾದ ರಾಜಕೀಯ ಮುಷ್ಕರವಿದು. ಈ ರೈಲ್ವೇ ಮುಷ್ಕರದಿಂದ ರಾಜ್ಯದ ಆರ್ಥಿಕ ಜೀವನವೇ ಅಸ್ತವ್ಯಸ್ತಗೊಂಡಿತು, ಮಹಾರಾಜನ ಹಿಂದಿನ ಸರಕಾರವನ್ನು ಗದ್ದುಗೆಯಿಂದ ಅದು ಕೆಳಗಿಳಿಸಿತು; ಜವಾಬ್ದಾರಿ ಸರಕಾರಕ್ಕೆ ಹಾದಿಮಾಡಿ ಕೊಟ್ಟಿತು.

**ಎಂ. ಎಸ್. ಕೃಷ್ಣನ್**


## ದ. ಕನ್ನಡ

ದ-ಕನ್ನಡ ಜಿಲ್ಲೆಯಲ್ಲಿ ಟ್ರೇಡ್ ಯೂನಿಯನ್‌ಗಳು 1935-36ರಲ್ಲಿ ಹುಟ್ಟಿದ್ದವು. ಆರಂಭದಲ್ಲೇ ಟ್ರೇಡ್ ಯೂನಿಯನ್ ಚಳವಳಿ ಕಮ್ಯೂನಿಸ್ಟರ ಕೈಗಳಲ್ಲಿದ್ದವು, ಬೀಡಿ, ಕೈಮಗ್ಗ, ಹಂಚು, ಮುದ್ರಣಾಲಯ ಮತ್ತಿತರ ಕೈಗಾರಿಕೆಗಳ ಕಾರ್ಮಿಕರು ಎಐಟಿಯುಸಿಯ ಧ್ವಜದಡಿಯಲ್ಲಿ ಸಂಘಟಿತರಾದರು; ಅಸಂಖ್ಯಾತ ಹೋರಾಟಗಳನ್ನು ನಡೆಸಿದರು. ಈ ಚಳವಳಿಯ ನಾಯಕರಲ್ಲಿ ಬಿ. ವಿ. ಕಕ್ಕಿಲ್ಲಾಯ, ಎ. ಶಾಂತಾರಾಮ ಪೈ, ಸಿಂಪ್ಸನ್ ಸೋನ್ಸ್, ಕೇಶವ ಕಾಮತ್, ಶಿವಶಂಕರರಾವ್ ಇವರು ಪ್ರಮುಖರು, 1945ರಲ್ಲಿ ಇಲ್ಲಿನ ಬೀಡಿ ಕೆಲಸಗಾರರು 56 ದಿನಗಳ ಮುಷ್ಕರ ನಡೆಸಿದರು, 1942ರಲ್ಲಿ ಗೇರುಬೀಜ ಕಾರ್ಮಿಕರು ಹೂಡಿದ ಮುಷ್ಕರ ಎರಡು ತಿಂಗಳ ಕಾಲ ಮುಂದರಿತ್ತು. 1940ರಲ್ಲಿ ಕೈಮಗ್ಗ ಕೆಲಸಗಾರರು 60 ದಿನಗಳ ಕಾಲ ಅಪ್ರತಿಮ ಸಂಪನ್ನುನಡೆಸಿದ್ದರು. ಬ್ರಿಟಿಷರ ಕ್ರೂರವಾದ ಮರ್ದನವಿದ್ದರೂ ಕಾರ್ಮಿಕ ವರ್ಗ ಇಲ್ಲಿ ಸಂಘಟಿತವಾಯಿತು. ಹಲವಾರು ಹೋರಾಟಗಳನ್ನು ಹೂಡಿತು,

## ಸ್ವಾತಂತ್ರ್ಯ ನಂತರ

ಸ್ವಾತಂತ್ರ್ಯ ನಂತರದ 4-5

6ನೇ ಪುಟಕ್ಕೆ



ಬೆಂಗಳೂರಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ 1981-82

(4ನೇ ಪುಟದಿಂದ)

ತುರ್ತು ಬೇಡಿಕೆಗಳ ಹೋರಾಟದ ಬಾವುಟವೂ ಒಟ್ಟೊಟ್ಟಾಗಿ ಮುನ್ನಡೆಯಬೇಕು.. ಶಾಂತಿಗಾಗಿರುವ ಹೋರಾಟವನ್ನು ಮೂರು ಪಾಲು ಹೆಚ್ಚಿಸಿದರೆ ಅದೇ ವೇಳೆ ತಮ್ಮನ್ನು ಶೋಷಿಸುವವರ ಮತ್ತು ದಬ್ಬಾಳಿಕೆ ನಡೆಸುವವರ ವಿರುದ್ಧ ಕಾರ್ಮಿಕರ ಆರ್ಥಿಕ, ಸಾಮಾಜಿಕ ಕೇಳಿಕೆಗಾಗಿರುವ ಹೋರಾಟಗಳನ್ನು ಇಮ್ಮಡಿಗೊಳಿಸಬೇಕು."

# ರಾಜ್ಯದ ಕ್ರಾಂತಿಕಾರಿ ಕಾರ್ಮಿಕ ಸಂಘಟನೆ ಎಐಟಿಯುಸಿ

(5ನೇ ಪುಟದಿಂದ)

ವರುಷಗಳು ಎಐಟಿಯುಸಿ ನಾಯಕತ್ವದ ಕ್ರಾಂತಿಕಾರಿ ಟ್ರೇಡ್ ಯೂನಿಯನ್ ಚಳವಳಿಗೆ ಅತ್ಯಂತ ಕಷ್ಟದ ಕಾಲವಾಗಿತ್ತು. ಹಳೆಯ ಮೈಸೂರು, ಹಳೆಯ ಹೈದರಾಬಾದ್ ಕರ್ನಾಟಕದ ಕಾರ್ಮಿಕ ವರ್ಗವು ಪಾಳೆಯಗಾರಿ ದೊರೆಗಳ ಹಾಗೂ ಸಾಮ್ರಾಜ್ಯವಾದೀಪರ ಮಹಾರಾಜ–ನಿಜಾಮ್ ಸರಕಾರಗಳ ವಿರುದ್ಧ ಇತರ ದೇಶಪ್ರೇಮಿ ಶಕ್ತಿಗಳೊಂದಿಗೆ ಸೇರಿ ಹೋರಾಟ ಹೂಡಿ ವಿಜಯಗಳನ್ನು ಗಳಿಸಿತ್ತು. ಆದರೂ ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರಗಳ ಪ್ರತಿಷ್ಠಾಪನೆ, ಹಾಗೂ ಎಐಟಿಯುಸಿಯು ಆದಿನ ನೀತಿಗಳ ಫಲವಾದಿ 1948-51ರ ಕಾಲದಲ್ಲಿ ಎಐಟಿಯುಸಿ ಕ್ರೂರವಾದ ದಬ್ಬಾಳಿಕೆಗಳಿಗೆ ಒಳಗಾಯಿತು. ಎಂ. ಸಿ. ನರಸಿಂಹನ್, ಮುರಿದಾಸ್, ಎಂ. ಎಸ್ ರಾಮರಾವ್ ಸೋಮಸುಂದರ ಶರ್ಮ, ಡಿ. ಎಸ್ ಶ್ರೀರಾಮುಲು, ಸಿ. ಬಿ. ಮೊನ್ನಯ್ಯ ಎಸ್. ಸಿ. ರಣನವರೆ ಇವರನ್ನು ಮೈಸೂರಿನಲ್ಲೂ ಬೆಂಗಳೂರಿನಲ್ಲಿಯೂ ಬಂಧಿಸಿ ಸ್ಥಾನ ಬದ್ಧತೆಯಲ್ಲಿಡಲಾಯಿತು. ದ.ಕನ್ನಡದಲ್ಲಿ ಬಿ. ವಿ. ಕಕ್ಕಿಲ್ಲಾಯ ಎ. ಶಾಂತರಾಮ ಪೈ, ಮೋನಪ್ಪಶೆಟ್ಟಿ, ಬಿ. ಲಿಂಗಪ್ಪ, ಸುವರ್ಣ ಮೊದಲಾದವರನ್ನು ವೆಲ್ಲೂರು ಜೈಲಿನಲ್ಲಿಡಲಾಯಿತು. ಎಂ. ಎಸ್.ಕೃಷ್ಣನ್, ಎನ್. ಎಲ್. ಉಪಾಧ್ಯಾಯ, ಸಿಂಪ್ಸನ್ ಸೋನ್ಸ್ ಮೊದಲಾದವರು 1948 ರಿಂದ 1951ರ ತನಕ ಭೂಗತರಾಗಬೇಕಾಯಿತು. ಟ್ರೇಡ್ ಯೂನಿಯನ್‌ಗಳನ್ನು ನಿರ್ನಾಮಗೊಳಿಸುವ ಸರಕಾರದ ವಿರುದ್ಧ ಅವನ್ನು ಕಾಪಾಡುವ ಹೊಣೆ ಇವರ ಮೇಲೆ ಬಿದ್ದಿತು. ಆ ಕಾಲದಲ್ಲಿ ಕಾರ್ಮಿಕ ವರ್ಗ ತೋರಿದ ಧೈರ್ಯ, ಮಾಡಿದ ತ್ಯಾಗ, ಅನುಭವಿಸಿದ ಸಂಕಷ್ಟಗಳಿಗೆ ಬೇಕಷ್ಟು ಉದಾಹರಣೆಗಳನ್ನು ನೀಡಬಹುದು.

1949ರ ಈ ಕಾಲದಲ್ಲೇ ನಮ್ಮ ರಾಜ್ಯದಲ್ಲಿ ಇಂಟಕ್ ಮತ್ತು ಎಚ್. ಎಂ. ಎಸ್‌ಗಳು ಜನ್ಮ ತಾಳಿದ್ದು. ಎಐಟಿಯುಸಿ ಯೂನಿಯನ್‌ಗೆ ಬದಲಿ ಯೂನಿಯನ್‌ಗಳನ್ನು ಸಂಘಟಿಸಲು ಅವರು ಎಷ್ಟೋ ಕಡೆ ಯತ್ನಿಸಿದರು. ಕೆಲವು ಕಡೆ ಅವರು ಯಶಸ್ವಿಯಾದರು. ಇದಕ್ಕೆ ಕಾರಣ ಅಂತಹ ಕಡೆ ನಮ್ಮಲ್ಲಿದ್ದ ಯೋಗ್ಯ ನಾಯಕತ್ವದ ಕೊರತೆ.

## ಪುನರುಜ್ಜೀವನದ ಕಾಲ

1951 ರಿಂದ 1975 ರವರೆಗಿನ ಕಾಲ–ಟ್ರೇಡ್ ಯೂನಿಯನ್ ಶಕ್ತಿಗಳಿಗೆ ಮತ್ತೆ ಬಲ ನೀಡಿದ ಕಾಲ. ಚಟುವಟಿಕೆರಹಿತ ಟ್ರೇಡ್ ಯೂನಿಯನ್‌ಗಳನ್ನು ಮತ್ತೆ ಚಟುವಟಿಕೆಗಳಿಗೆ ಇಳಿಸಿದ ಕಾಲ. ಹಾಗೆಯೇ ಟ್ರೇಡ್ ಯೂನಿಯನ್ ಚಳವಳಿಯನ್ನು ವಿಸ್ತರಿಸಿದ ಕಾಲ.

ಈ ಕಾಲದಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಸಂಘಟನೆ ಬೆಳೆಸಲು ಎಐಟಿಯುಸಿ ನಾಯಕರು ದೊಡ್ಡ ಪ್ರಮಾಣದಲ್ಲಿ ದುಡಿದರು. ಎಚ್. ಎ. ಎಲ್ ನೌಕರರ ಸಂಘದಲ್ಲಿ ಎಲ್ಲ ಪ್ರವೃತ್ತಿಗಳ ಜನರೂ ಒಂದಾಗಿದ್ದರು. ತತ್ಫಲವಾಗಿ 1950ರಲ್ಲಿ ಕೆಲಸದಿಂದ ವಜಾ ಮಾಡುವುದರ ವಿರುದ್ಧ ಮಾದಿಯೂ ಬೋನಸಿಗಾಗಿಯೂ ಈ ಯೂನಿಯನ್ ಮುಷ್ಕರ ನಡೆಸಿತು. ಈ ಮುಷ್ಕರಕ್ಕೆ ಎಐಟಿಯುಸಿ ಬೆಂಬಲವನ್ನು ನೀಡಿತು; ಹಾಗೂ ಎಐಟಿಯುಸಿ ಕಾರ್ಯಕರ್ತರು ಈ ಹೋರಾಟದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದರು. ಆದರೆ ಈ ಮುಷ್ಕರ ವಿಫಲಗೊಂಡಿತು. ಹೀಗಾಗಿ ಕೆಲವು ಕಾಲ ಇಲ್ಲಿ ಹಿನ್ನಡೆಯಿದ್ದರೂ ಕಾರ್ಮಿಕರು ತಾವಾಗಿಯೇ ಪುನರ್ಸಂಘಟನೆಗೊಂಡರು. ಇಂದಿಗೂ –ವಿವಿಧ ಪ್ರವೃತ್ತಿಗಳ ಜನರು ಆ ಯೂನಿಯನಿನಲ್ಲಿದ್ದರೂ 'ಒಂದು ಕೈಗಾರಿಕೆಗೆ ಒಂದೇ ಯೂನಿಯನ್' ಎಂಬ ಧ್ಯೇಯ ವಾಕ್ಯಕ್ಕೆ ಅದು ಉದಾಹರಣೆಯಾಗಿದೆ. ಈ ಐಕ್ಯವನ್ನು ಉಳಿಸುವಲ್ಲಿಯೂ, ಚಳವಳಿಯ ಬೆಳವಣಿಗೆಯಲ್ಲೂ ಎಐಟಿಯುಸಿ ಕಾರ್ಯಕರ್ತರು ಮುಖ್ಯ ಪಾತ್ರವನ್ನು ವಹಿಸುತ್ತಾ ಬಂದಿದ್ದಾರೆ.

ಹೀಗಾಗಿ ಎಐಟಿಯುಸಿಯ ಮೇಲೆ ಇಲ್ಲಿನ ಕಾರ್ಮಿಕರಿಗೆ ಮೈತ್ರಿಭಾವವಿದೆ. 1956 ರ ವೇಳೆಗೆ ಬಿ ಇ ಎಲ್ ಮತ್ತು ಹೆಚ್‌ಎಂಟಿ ಕಾರ್ಮಿಕರನ್ನು ಎಐಟಿಯುಸಿಯಡಿಯಲ್ಲಿ ಸಂಘಟಿಸಲಾಯಿತು. ಬಿಇಎಂಎಲ್‌ನ ನೌಕರರ ಸಂಘದ ರಚನೆಯಲ್ಲಿ ಕೂಡಾ ನಾವು ಹೆಣಗಿದ್ದೆವು.

## ಇಂಜಿನಿಯರಿಂಗ್ ಕೈಗಾರಿಕೆ

ಇಂಜಿನಿಯರಿಂಗ್ ಕೆಲಸಗಾರರು ಕೂಡಾ ಸಂಘಟಿತರಾದುದು ಇದೇ ಕಾಲದಲ್ಲಿ. ಸಾರ್ವಜನಿಕ ಕ್ಷೇತ್ರದಲ್ಲೂ ಖಾಸಗಿ ಕ್ಷೇತ್ರದಲ್ಲಿಯೂ ಬಾಲ್ಯಾವಸ್ಥೆಯಲ್ಲಿದ್ದ ಇಂಜಿನಿಯರಿಂಗ್ ಕೈಗಾರಿಕೆ ಈ ಅವಧಿಯಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದಿತ್ತು. 1956ರೊಳಗಾಗಿ 1665 ಇಂಜಿನಿಯರಿಂಗ್ ಕೈಗಾರಿಕೆಗಳು ಬೆಳೆದು ಬಂದವು. ಅವುಗಳಲ್ಲಿ ದುಡಿಯುತ್ತಿದ್ದವರ ಸಂಖ್ಯೆ 1,72 ಲಕ್ಷ, ಆದರೆ ನೆರೆಯ ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳ ಈ ಕೈಗಾರಿಕೆ ಬೆಳೆದ ಮಟ್ಟಕ್ಕೆ ಇಲ್ಲಿನ ಬೆಳವಣಿಗೆಯನ್ನು ಹೋಲಿಸುವಂತಿಲ್ಲ. ಈ ಕೈಗಾರಿಕೆಯಲ್ಲಿ ಎಐಟಿಯುಸಿಯ ಬೆಳವಣಿಗೆಗೆ ಕಾರಣವಾದ ಒಂದು ವೈಶಿಷ್ಟ್ಯವೆಂದರೆ ಇಂಟಕ್‌ನ ಆಶ್ರಯದಲ್ಲಿದ್ದ ಹಲವಾರು ಯೂನಿಯನ್‌ಗಳು ಎಐಟಿಯುಸಿಯ ನೇತೃತ್ವದಡಿಗೆ ಬಂದುದು. ಹೀಗಾಗಲು ಇನ್ನೊಂದು ಕಾರಣವೂ ಇದೆ. ಒಂದು ಕೈಗಾರಿಕೆಗೆ ಒಂದೇ ಯೂನಿಯನ್ ಎಂಬ ಹಿಂದಿನ ಪರಂಪರೆ ಹಾಗೂ ಮೈಸೂರು ಲೇಬರ್ ಕಾನೂನಿನಂತೆ ಟ್ರೇಡ್ ಯೂನಿಯನ್‌ಗಳಿಗೆ ವ್ಯವಸ್ಥಿತವಾದ ಚುನಾವಣೆಗಳು. ಈ ಕಾನೂನು ಇಂದು ಇಲ್ಲವಾದರೂ ಈ ಪರಂಪರೆ ಮುಂದುವರಿಯುತ್ತಾ ಇದೆ. ಹಾಗೂ ಒಂದು ಕೈಗಾರಿಕೆಯಲ್ಲಿ ಒಂದಕ್ಕಿಂತ ಹೆಚ್ಚು ಯೂನಿಯನ್‌ಗಳನ್ನು ಕಾರ್ಮಿಕರು ಸಹಿಸುವುದೂ ಇಲ್ಲ. ಎಷ್ಟೋ ಕೈಗಾರಿಕೆಗಳಲ್ಲಿ ಚುನಾವಣೆಗಳು ಎರಡು ವರುಷಕೊಮ್ಮೆ ವ್ಯವಸ್ಥಿತವಾಗಿ ನಡೆಯುತ್ತವೆ. ಈ ಸಂಗತಿ ಹಾಗೂ ತನ್ನ ನಾಯಕತ್ವದ ಮಾಲಪರ ನೀತಿಯಿಂದಾಗಿ ಇಂಟಕ್ ಕುಖ್ಯಾತಿಗೊಳಗಾದುದು, ಮತ್ತು ಎಐಟಿಯುಸಿ ಸಮರಧೀರ ಹೋರಾಟಗಳಿಗೆ ನೇತೃತ್ವ ಕೊಡುವುದು ಇವೆಲ್ಲ ಹೆಚ್ಚಿನ ಪ್ರಯೋಜನಗಳನ್ನು ತಂದಿದೆ. ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂಪೆನಿ ಇರಲಿ, ಜಿ. ಕೆ. ಡಬ್ಲ್ಯು ಇರಲಿ, ಕೃಷ್ಣ ಮಿಲ್ಸ್ ಇರಲಿ, ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಇರಲಿ. ಇಲ್ಲೆಲ್ಲ ಇಂಟಕ್‌ಮುಖಂಡರು ಸೋಲುತ್ತಾರೆ; ಎಐಟಿಯುಸಿ ನಾಯಕರು ಆರಿಸಿ ಬರುತ್ತಾರೆ.

## ರೇಶ್ಮೆ ಕೈಗಾರಿಕೆ

ರೇಶ್ಮೆ ಕೈಗಾರಿಕೆ ನಮ್ಮ ರಾಜ್ಯದ ಪ್ರಮುಖ ಕೈಗಾರಿಕೆ. ಆರಂಭದ ಕಾಲದಲ್ಲಿ ರೇಶ್ಮೆ ಹೆಣೆಯುವ, ಹಾಗೂ ನೇಯುವ ಕಾರ್ಖಾನೆಗಳು ಬೆಂಗಳೂರು ನಗರದಲ್ಲಿ ಧಾರಾಳ ಇದ್ದವು. ಇದರಲ್ಲಿ ಕೂಲಿ ಅತ್ಯಂತ ಕಡಿಮೆ. ಕಾರ್ಮಿಕರನ್ನು ಶೋಷಿಸುವುದಕ್ಕೆ ಇಲ್ಲಿ ಇತಿಮಿತಿ ಇರಲಿಲ್ಲ. 1952 ರಿಂದ 1960ರ ತನಕ ರೇಶ್ಮೆ ಕಾರ್ಮಿಕರನ್ನು ಭಾರೀ ಪ್ರಮಾಣದಲ್ಲಿ ಕೆಂಬಾವುಟ ಮತ್ತು ಎಐಟಿಯುಸಿ ಸಂಘಟಿಸಿತು; ಹಲವಾರು ಸಮರಶೀಲ ಹೋರಾಟಗಳನ್ನು ನಡೆಸಿತು. ಆದರೆ ಈ ಕೈಗಾರಿಕೆಯಲ್ಲಿ ಬಿಕ್ಕಟ್ಟು ಉಂಟಾದುದರಿಂದ ಹಲವಾರು ರೇಶ್ಮೆ ಕೈಗಾರಿಕೆಗಳು ಮುಚ್ಚಲ್ಪಟ್ಟವು.

## ದಾವಣಗೆರೆ

ಈ ದಿನಗಳಲ್ಲಿ ಸಮರಶೀಲ ಟ್ರೇಡ್ ಯೂನಿಯನ್ ಚಳವಳಿ ದಾವಣಗೆರೆಯಲ್ಲಿ ಬೆಳೆದು ಬಂದುದನ್ನು ನಾವು ಕಾಣುತ್ತೇವೆ. ಇಲ್ಲಿನ ಜವುಳಿ ಗಿರಣಿ ಕಾರ್ಮಿಕರನ್ನು ಸಂಘಟಿಸಲು 1944 ರಿಂದಲೇ ಪ್ರಯತ್ನ ನಡೆದಿತ್ತು. ಆದರೆ ಮಾಲಕ ವರ್ಗದ ಗೂಂಡಾ ದಾಳಿಗಳಿಂದ ಅವೇನೂ ಯಶಸ್ವಿಯಾಗಲಿಲ್ಲ. ಎ. ಶಿವಶಂಕರರಾವ್ ಇವರೇ ಮೊದಲಾದವರನ್ನು ಮಾಲಕರ ಗೂಂಡಾಗಳು ಸ್ಮೃತಿ ತಪ್ಪುವಂತೆ ಇಲ್ಲಿ ಹೊಡೆದಿದ್ದರು. ಆದರೆ ಇದರಿಂದ ಕೆಲಸಗಾರರು ಧೃತಿಗೆಡಲಿಲ್ಲ. ಈ ಕಾರ್ಮಿಕರನ್ನು ಸಂಘಟಿಸುವ ಪ್ರಯತ್ನ ಎಂ. ಸಿ. ನರಸಿಂಹನ್ ಮತ್ತು ಪಂಪಾಪತಿಯವರ ನೇತೃತ್ವದಲ್ಲಿ ಮುಂದುವರಿಯಿತು. ಎಐಟಿಯುಸಿಗಿಂತಲೂ ತಾವೇ ಕ್ರಾಂತಿಕಾರರು ಎಂದು ಕರೆದುಕೊಳ್ಳುವವರ ದಲ್ಲಾಳಿಗಳು ಶೇಖರಪ್ಪ ಮತ್ತು ಸುರೇಶ್ ಇವರನ್ನು 1970ರ ಎಪ್ರಿಲ್‌ನಲ್ಲಿ ಹಚ್ಚ ಹಗಲಿನಲ್ಲಿ ಕೊಂದು ಹಾಕಿದರು. ಈ ಇಬ್ಬರು ಸಂಗಾತಿಗಳು ದುಡಿಯುವ ವರ್ಗಕ್ಕೆ ಬೇಕಾಗಿ ಪ್ರಾಣಾರ್ಪಣೆ ಮಾಡಬೇಕಾಯಿತು. ಆದರೆ ಎಐಟಿಯುಸಿಯನ್ನು ಹಿಮ್ಮೆಟ್ಟಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ದಾವಣಗೆರೆಯಲ್ಲಿ ಇಂದು ಎಐಟಿಯುಸಿ ಅತ್ಯಂತ ಬಲಿಷ್ಠವಾದ ಸಂಘಟನೆ. ಇಷ್ಟೇ ಅಲ್ಲ ಚಿತ್ರದುರ್ಗ ಜಿಲ್ಲೆಯ ಇತರ ಕೇಂದ್ರಗಳಲ್ಲಿ ಕೆಂಬಾವುಟ ಹಾರಾಡುತ್ತಿದೆ.

ಹೆಚ್ಚು ಕಡಿಮೆ ಇದೇ ಕಾಲ ಘಟ್ಟದಲ್ಲಿ ಹುಬ್ಬಳ್ಳಿ, ಗುಲ್ಬರ್ಗ ಮೈಸೂರು ಮತ್ತು ದ. ಕನ್ನಡ ಜಿಲ್ಲೆಗಳಲ್ಲಿ ಟ್ರೇಡ್ ಯೂನಿಯನ್ ಚಳವಳಿ ಬೆಳೆಯಿತು. ಎ. ಜೆ. ಮುಧೋಳರ ಅವಿಶ್ರಾಂತ ಫಲವಾಗಿ ಬೀಡಿ ಮತ್ತಿತರರು ಕೈಗಾರಿಕೆಗಳ ಕಾರ್ಮಿಕರು ಸಂಘಟಿಸಲ್ಪಟರು. ಶ್ರೀನಿವಾಸ ಗುಂಡಿ ಮತ್ತಿತರರು ಶಹಾಬಾದ್. ವಾಡಿಗಳಲ್ಲಿ ಸಿಮೆಂಟ್ ಕೆಲಸಗಾರರನ್ನು, ಗುಲ್ಬರ್ಗದಲ್ಲಿ ಎಂ ಎಸ್ ಕೆ ಜವುಳಿ ಮಿಲ್‌ಕಾರ್ಮಿಕರನ್ನು ಸಂಘಟಿಸಿದರು. ಮೈಸೂರಿನಲ್ಲಿ ಐಡಿಯಲ್ ಜಾವಾ ನೌಕರರ ಸಂಘ ಎಐಟಿಯುಸಿ ನೇತೃತ್ವಕ್ಕೆ ಬಂದಿತು. ಅದರ ಫಲವಾಗಿ ಇತರ ಕೈಗಾರಿಕೆಗಳ ಕಾರ್ಮಿಕರೂ ಎಐಟಿಯುಸಿಯ ನೇತೃತ್ವವನ್ನು ಬಯಸಿದರು. ಕೊಡಗು ಮತ್ತು ಚಿಕ್ಕಮಂಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ತೋಟಗಳ ಕಾರ್ಮಿಕರು ಸಂಘಟನೆಯಾದರು. ಬೆಳಗಾವಿಯ ಇಂಡಾಲ್ ಅಲ್ಯುಮಿನಿಯಂ ಕಾರ್ಮಿಕರು ಎಐಟಿಯುಸಿಯ ನಾಯಕತ್ವವನ್ನು ಸ್ವೀಕರಿಸಿದರು. ತುಮಕೂರು ಜಿಲ್ಲೆಯ ಅಮ್ಮಸಂದ್ರದಲ್ಲಿರುವ ಬಿರ್ಲಾ ಸಿಮೆಂಟ್ ಕೆಲಸಗಾರರು ಸಂಘಟನೆಗೊಂಡು ಎ ಐ ಟಿ ಯು ಸಿ ಯಡಿ ಬಂದರು. ಆದರೆ 1962ರಲ್ಲಿ ಚೀನಾ ನಡೆಸಿದ ಆಕ್ರಮಣದ ವೇಳೆ ನಮ್ಮ ಹಲವಾರು ಸಂಗಾತಿಗಳು ಬಂಧಿಸಲ್ಪಟ್ಟಾಗ ನಮ್ಮ ಟ್ರೇಡ್ ಯೂನಿಯನ್ ಚಳವಳಿಗೆ ಸ್ವಲ್ಪ ಹಿನ್ನಡೆಯಾಯಿತು ಎಂಬುದೇನೋ ನಿಜ.

## 1964–75

1964ರಲ್ಲಿ ಈಗಿನ ಮಾರ್ಕ್ಸಿಸ್ಟ್ ಪಕ್ಷಕ್ಕೆ ಸೇರಿದ ನಾಯಕರಿಂದ ಕಮ್ಯೂನಿಸ್ಟ್ ಪಕ್ಷದಲ್ಲಿ ಒಡಕುಂಟಾಯಿತು. ಆಗ ಎಐಟಿಯುಸಿ ಹಲವಾರು ಕಷ್ಟಗಳನ್ನು, ಅಡ್ಡಿ ಆತಂಕಗಳನ್ನು ಇದಿರಿಸಬೇಕಾಯಿತು. ಹೀಗಿದ್ದರೂ ಕೂಡಾ 1964 – 1975 ರ ಅವಧಿಯಲ್ಲಿ ಎಐಟಿಯುಸಿ ಸಾಕಷ್ಟು ಬೆಳೆಯಿತು. ಇಂಜಿನಿಯರಿಂಗ್ ಕೈಗಾರಿಕೆಯಲ್ಲಿ ಹಲವಾರು ಹೊಸ ಹೊಸ ಯೂನಿಯನ್‌ಗಳು ಬಂದವು. ಮೊದಲಿಗೆ ರಾಜ್ಯ ಸಾರಿಗೆ ಇಲಾಖೆಯ ಡ್ರೈವರುಗಳು ತಮ್ಮದೇ ಆದ ಯೂನಿಯನನ್ನು ಕಟ್ಟಿಕೊಂಡರು. ನಂತರ ಅದನ್ನು ಕೆ ಎಸ್ ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಶನನ್ನಾಗಿ ಪರಿವರ್ತಿಸಲಾಯಿತು. ಅದೀಗ ಸಾರಿಗೆ ಇಲಾಖೆಯ ಬಹುಮಂತ ಕಾರ್ಮಿಕರ ವಿಶ್ವಾಸವನ್ನು ಪಡೆದಿರುವ ಮುಖ್ಯ ಸಂಘಟನೆಯಾಗಿದೆ. ಹುಬ್ಬಳ್ಳಿಯ ಮಹಾದೇವ ಟೆಕ್ಸ್‌ಟೈಲ್ಸ್, ಬೆಂಗಳೂರಿನ ಟಿ ಆರ್ ಮಿಲ್ಸ್, ನರಗುಂದದ ನಂದಿ ಹಸಬಿ ಟೆಕ್ಸ್‌ಟೈಲ್ಸ್, ಚಿತ್ರದುರ್ಗದ ಜಯಲಕ್ಷ್ಮಿ ಮತ್ತಿತರ ಮಿಲ್‌ಗಳ ಕಾರ್ಮಿಕರೂ ಎಐಟಿಯುಸಿಯಡಿಯಲ್ಲಿ ಅಣಿನೆರೆದರು. ಇಲ್ಲಿ ಒಂದು ವಿಷಯವನ್ನು ಮುಖ್ಯವಾಗಿ ಪ್ರಸ್ತಾಪಿಸಬೇಕಾಗಿದೆ. ಅದು 1975 ರಲ್ಲಿ ಟಿ ಆರ್ ಮತ್ತು ಚಂದ್ರ ಮಿಲ್‌ಗಳಲ್ಲಿ ನಡೆದ 66 ದಿನಗಳ ಐತಿಹಾಸಿಕ ಸಂಪು. ಅದು ವಿಜಯದಲ್ಲಿ ಮುಕ್ತಾಯವಾಯಿತು. ಅದೇ ರೀತಿ 1966ರಲ್ಲಿ ನಡೆದ ಬಿ ಇ ಎಲ್ ಮುಷ್ಕರ. ಯೂನಿಯನಿನ ಉಪಾಧ್ಯಕ್ಷರನ್ನು ಕೆಲಸದಿಂದ ವಜಾ ಮಾಡುವುದರ ವಿರುದ್ಧ ಈ ಮುಷ್ಕರ ನಡೆದಿತ್ತು. ಕಾರ್ಮಿಕರ ಪ್ರತಿಭಟನಾ ಮತಪ್ರದರ್ಶನಗಳ, ಧರಣಿ ಮುಷ್ಕರಗಳ ಮೇಲೆ ಪೊಲೀಸರು ಅಮಾನುಷ ರೀತಿಯಲ್ಲಿ ದಾಳಿ ನಡೆಸಿದರು. ಇದರಿಂದ ಹಲವಾರು ಕಾರ್ಮಿಕರೂ ನಾಯಕರೂ ಗಾಯಗೊಂಡರು. 15ದಿನಗಳ ಕಾಲ ಕಾರ್ಖಾನೆಯನ್ನು ಲಾಕೌಟು ಮಾಡಲಾಯಿತು; 500ಮಂದಿಯನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು.

13ನೇ ಪುಟಕ್ಕೆ



ರೈತ–ಕಾರ್ಮಿಕ ಸಖ್ಯ : ನರಗುಂದ ಜಾಥಾಕ್ಕೆ ನಗರದ ಕಾರ್ಮಿಕರ ಬೆಂಬಲ

# ನಮ್ಮ ದೇಶದ ದುಡಿಯುವ ಮಹಿಳೆಯರ ಸಮಸ್ಯೆಗಳು

**ಎಂಟು ವರ್ಷಗಳ ಹಿಂದೆ 1975ರಲ್ಲಿ ವಿಶ್ವಸಂಸ್ಥೆಯು ಜಗತ್ತಿನ ಮಹಿಳಾ ಸಮ್ಮೇಳನವೊಂದನ್ನು ನಡೆಸಿತು. 1975ನ್ನು ಅಂತರ್ರಾಷ್ಟ್ರೀಯ ಮಹಿಳಾ ವರ್ಷವೆಂದೂ, ಪ್ರತಿಯೊಂದು ದೇಶದಲ್ಲೂ ಮಹಿಳೆಯರಿಗೆ ಸಂಪೂರ್ಣ ಸಮಾನತೆ ನೀಡಿ ಅವರಿಗೆ ಮಾನವ ಪ್ರಯತ್ನದ ಎಲ್ಲಾ ರಂಗಗಳಲ್ಲೂ ಸಂಪೂರ್ಣ ಅವಕಾಶಗಳನ್ನು ಕೊಡದಿದ್ದಲ್ಲಿ ಪ್ರಗತಿ ಮತ್ತು ಅಭಿವೃದ್ಧಿಗಳಿಗೆ ಧಕ್ಕೆಯಾಗುವುದೆಂದೂ ಈ ಸಮ್ಮೇಳನ ತೀರ್ಮಾನಿಸಿತ್ತು. 1980 ಜುಲೈನಲ್ಲಿ ಮಹಿಳಾ ದಶಕದ ಮಧ್ಯಾವಧಿ ಸಮ್ಮೇಳನವೊಂದನ್ನು ಕೋಪೆನ್‌ಹೇಗನ್‌ನಲ್ಲಿ ನಡೆಸಲಾಯಿತು. ಇದು 1975ರ ಸಮ್ಮೇಳನದ ತೀರ್ಮಾನಗಳನ್ನು ಮತ್ತೊಮ್ಮೆ ಒತ್ತಾಯಿಸಿತು. ಹಾಗೂ ಈ ನಿಟ್ಟಿನಲ್ಲಿ ಆದ ಪ್ರಗತಿ ಕಡಿಮೆಯೆಂದೂ ಸಮ್ಮೇಳನ ಗಮನಿಸಿತು.**

ಒಂದು ದೇಶದ ಸಂವಿಧಾನದಲ್ಲಿ ಅಥವಾ ಯಾವುದೇ ಕಾನೂನುಗಳಲ್ಲಿ ಸಮಾನತೆಗೆ ಔಪಚಾರಿಕ ಸ್ಥಾನ ಕೊಡಲಾಗಿದ್ದರೂ, ಈ ಸಂವಿಧಾನ ಮತ್ತು ಕಾನೂನುಗಳನ್ನು ಜಾರಿಗೊಳಿಸಬೇಕಾದಲ್ಲಿ ಎಲ್ಲಾ ರಂಗಗಳಲ್ಲೂ ಮಹಿಳೆಯರ ವಿಶೇಷ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚಿನ ಗಮನ ಕೊಡಬೇಕೆಂಬುದನ್ನು ಮಾನ್ಯಮಾಡಲಾಗಿದೆ. ಈ ರೀತಿಯ ವಿಶೇಷ ಗಮನ ಕೊಡದಿದ್ದಲ್ಲಿ ಸಮಾನತೆಯು ಔಪಚಾರಿಕವಾಗಿಯೇ ಉಳಿಯುವುದು. ಅದು ವಾಸ್ತವವಾಗಿ ಜಾರಿಯಾಗಲಾರದು.

ಭಾರತದ ದುಡಿಯುವ ಮಹಿಳೆಯರ ಸಮಸ್ಯೆಗಳನ್ನು ಅಭ್ಯಸಿಸಿದಲ್ಲಿ ಈ ಅಂಶಗಳು ಸಂಪೂರ್ಣವಾಗಿ ನಿಜವೆನ್ನಿಸುತ್ತದೆ. 1975ರಲ್ಲಿ ವಿಶ್ವ ಮಹಿಳಾ ಸಮ್ಮೇಳನ ನಡೆದಾಗಿನಿಂದಲೂ ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡುವುದು ಒಂದು 'ಫ್ಯಾಶನ್' ಆಗಿಬಿಟ್ಟಿದೆ. ಆದರೆ ಈ ಎಂಟು ವರ್ಷಗಳಲ್ಲಿ ಭಾರತದ ದುಡಿಯುವ ಮಹಿಳೆಯರ ಪರಿಸ್ಥಿತಿಯಲ್ಲಿ ಯಾವುದೇ ಗಮನಾರ್ಹ ಬದಲಾವಣೆಯಾಗಿಲ್ಲ. ಆಗಿರುವ ಒಂದೇ ಬದಲಾವಣೆಯೆಂದರೆ ಸಮಾನ ವೇತನದ ಕಾನೂನಿನ ಅಂಗೀಕಾರ. ಇದಕ್ಕಾಗಿ ಟ್ರೇಡ್ ಯೂನಿಯನ್‌ಗಳು ಅನೇಕ ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದವು ಎಂಬುದನ್ನು ನಾವು ತಿಳಿದುಕೊಳ್ಳಬೇಕು.

## ಉದ್ಯೋಗದ ಸ್ವರೂಪ

ಸ್ವಾತಂತ್ರ್ಯಾನಂತರದ 30 ವರ್ಷಗಳಲ್ಲಿ ಮಹಿಳೆಯರಿಗೆ ಸಂಬಂಧಪಟ್ಟಂತೆ ಉದ್ಯೋಗಗಳ ಸ್ವರೂಪವು ಸಾಕಷ್ಟು ಬದಲಾಗಿದೆ; ಆದರೆ ಸಂಘಟಿತ ಕೈಗಾರಿಕೆಯಲ್ಲಿ ಉದ್ಯೋಗಿ ಮಹಿಳೆಯರ ಒಟ್ಟು ಶೇಕಡಾವಾರು ಪರಿಮಾಣವು ಕಡಿಮೆಯಾಗುತ್ತಿದೆ. ಪರಂಪರಾಗತವಾಗಿ ಮಹಿಳಾ ಉದ್ಯೋಗಿಗಳಿದ್ದ ಬಹುತೇಕ ಸಂಘಟಿತ ಕೈಗಾರಿಕೆಗಳಲ್ಲಿ– ಉದಾಹರಣೆಗೆ ಸೆಣಬು ಮತ್ತು ಹತ್ತಿಗಿರಣಿ ಕೈಗಾರಿಕೆಗಳಲ್ಲಿ– ಅವರ ಸಂಖ್ಯೆ ಹಾಗೂ ಶೇಕಡಾವಾರು ತೀವ್ರವಾಗಿ ಕಡಿಮೆಯಾಗಿದೆ. ಔದ್ಯಮೀಕರಣದಲ್ಲಿ ಆಗಿರುವ ಒಟ್ಟಾರೆ ಪ್ರಗತಿಯಿಂದಾಗಿ ಹೊಸ ಕೈಗಾರಿಕೆಗಳಾದ ಎಲೆಕ್ಟ್ರಾನಿಕ್ಸ್, ವಿದ್ಯುತ್ ವಸ್ತುಗಳ ತಯಾರಿ, ಔಷಧಿಗಳು, ಉಡುಪುಗಳು ಮುಂತಾದುವುಗಳಲ್ಲಿ ಹೆಚ್ಚು ಮಹಿಳೆಯರು ದುಡಿಯುತ್ತಿದ್ದಾರೆ. ಬ್ಯಾಂಕ್, ವಿಮೆ, ಸರ್ಕಾರಿ ಸೇವೆಗಳು, ಟೆಲಿಫೋನ್ ಆಪರೇಟರ್‌ಗಳು ಮುಂತಾದ ಕೆಲಸಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿರುವುದು ಹೊಸ ಅಂಶವಾಗಿದೆ. ವೈದ್ಯಕೀಯ ಮತ್ತು ಶಿಕ್ಷಣ ರಂಗಗಳಲ್ಲಿ ದುಡಿಯುವ ಮಹಿಳೆಯರ ಸಂಖ್ಯೆಯೂ ಹೆಚ್ಚಿದೆ, ಆದರೆ ದೇಶದ ದುಡಿಯುವ ಮಹಿಳೆಯರಲ್ಲಿ ಬಹುತೇಕ ಮಹಿಳೆಯರು ಇನ್ನೂ ಅಕುಶಲ ಅಥವಾ ಅತಿ ಕಡಿಮೆ ವೇತನದ ಕೆಲಸಗಳಲ್ಲೇ ಇದ್ದಾರೆ; (ಕೃಷಿ ತೋಟಗಾರಿಕೆ, ಕಾಫಿಕ್ಯೂರಿಂಗ್, ಹತ್ತಿ ಜಿನ್ನಿಂಗ್, ಗೇರುಬೀಜ, ತೆಂಗಿನ ನಾರು, ಬೀಡಿ, ಕೈಮಗ್ಗ, ಕಟ್ಟಡ ನಿರ್ಮಾಣ ಮುಂತಾದುವು) ಪ್ರಯೋಜನಕರ ಉದ್ಯೋಗಗಳಲ್ಲಿರುವ ಮಹಿಳೆಯರ ಸಂಖ್ಯೆಯು ತೀವ್ರವಾಗಿ ಕಡಿಮೆಯಾಗುತ್ತಿರುವುದನ್ನು ಪ್ರತಿಯೊಂದು ಜನಗಣತಿಯೂ ತೋರಿಸುತ್ತದೆ.

1978ರ ಕರಡು ಯೋಜನೆಯು ಈ ರೀತಿ ಹೇಳಿದೆ:-"1971ರ ಜನಗಣತಿಯು 'ಮುಖ್ಯ ಹಾಗೂ ಪ್ರಾಥಮಿಕ' ಕಾರ್ಮಿಕರಿಗೆ ಒತ್ತಾಸೆ ಕೊಟ್ಟು ಮಹಿಳಾ ಕಾರ್ಮಿಕರ ಸಂಖ್ಯೆಯನ್ನು ಬಹುತೇಕ ಅಲಕ್ಷಿಸಿದೆ. ಈ ಅಂಕೆ ಅಂಶಗಳು ಸಂಪೂರ್ಣವಾಗಿ ಒಪ್ಪಿಗೆಗೆ ಅನರ್ಹವಾದದ್ದರಿಂದ ಯೋಜನಾ ಆಯೋಗವು 1971ರ ಅಂದಾಜುಗಳನ್ನು ಹೊಂದಿಸಿತು, ಇದರ ಪ್ರಕಾರ ಮಹಿಳಾ ಕಾರ್ಮಿಕರ ಸಂಖ್ಯೆಯು 1961 ರಿಂದ 1971 ರವರೆಗಿನ ದಶಕದಲ್ಲಿ 15.09 ಮಿಲಿಯಗಳಷ್ಟು ಏರಿದೆ ಮತ್ತು ಪಾಲ್ಗೊಳ್ಳುವಿಕೆಯ ದರವು ಶೇ. 38 ರಷ್ಟೇ ಇದೆ." ಸಂಘಟಿತ ಕೈಗಾರಿಕೆಗಳಲ್ಲಿ ಮಹಿಳೆಯರ ಸಂಖ್ಯೆ ಕಡಿಮೆಯಾಗಿರುವುದು ಮತ್ತು ಬಹುತೇಕ ದುಡಿಯುವ ಮಹಿಳೆಯರು ಕೃಷಿ ಹಾಗೂ ಕಷ್ಟಕರ ಕೈಗಾರಿಕೆಗಳಲ್ಲೇ ಇರುವ ವಾಸ್ತವಾಂಶವನ್ನು ಸಾಬಿತುಮಾಡಿದೆ.

## ಸಂಖ್ಯೆ ಕಡಿಮೆ

1963ರಲ್ಲಿ ಕಾರ್ಖಾನೆಗಳು ಸರ್ಕಾರಕ್ಕೆ ಸಲ್ಲಿಸಿದ ಲೆಕ್ಕಗಳ ಪ್ರಕಾರ ಆಗ ಇದ್ದ 38,59,647 ಕಾರ್ಮಿಕರಲ್ಲಿ ಕೇವಲ 4,00,364-ಅಂದರೆ ಶೇ. 10,37ರಷ್ಟು ಮಾತ್ರ ಮಹಿಳೆಯರು. 1973ರ ಅಂಕೆ ಅಂಶಗಳು ದುಡಿಯುವ ಮಹಿಳೆಯರ ಸಂಖ್ಯೆ ಹಾಗೂ ಶೇಕಡಾವಾರು ಕಡಿಮೆಯಾಗಿರುವುದನ್ನು ತೋರಿಸಿವೆ; ಒಟ್ಟು 44,68,824 ಕಾರ್ಮಿಕರಲ್ಲಿ ಕೇವಲ 3,90,269– ಅಂದರೆ ಶೇ. 8.73 ಮಾತ್ರ ಮಹಿಳೆಯರಿದ್ದು, ಈ ಪರಿಸ್ಥಿತಿ ಮುಂದುವರಿದಿದೆ.

ಆಧುನಿಕ ಕೈಗಾರಿಕೆಗೆ ಬೇಕಾದ ತರಬೇತಿ ಮತ್ತು ಕುಶಲತೆ ಮಹಿಳೆಯರಿಗಿಲ್ಲವೆಂಬ ಸುಳ್ಳು ಕಾರಣ ಕೊಟ್ಟು ಮಾಲಿಕರು ಮೊದಲು ಪರಂಪರಾಗತವಾಗಿ ಮಹಿಳೆಯರು ದುಡಿಯುತ್ತಿದ್ದ ಕೈಗಾರಿಕೆಗಳಲ್ಲಿ ಅವರ ಸಂಖ್ಯೆಯನ್ನು ಕಡಿಮೆಮಾಡಿದರು. ಹತ್ತಿಗಿರಣಿ ಕೈಗಾರಿಕೆಯು ಇದಕ್ಕೆ ಮೊದಲನೆಯ ಉದಾಹರಣೆ ಅವರು ಕೊಡುವ ಮತ್ತೊಂದು ಕಾರಣವೇನೆಂದರೆ; 'ಮಹಿಳೆಯರು ರಾತ್ರಿ ಕೆಲಸ ಮಾಡುವಂತಿಲ್ಲ. ಆದ್ದರಿಂದ ಅವರನ್ನು ಕೆಲಸದಲ್ಲಿಟ್ಟುಕೊಳ್ಳುವುದು ಮಾಲಿಕರ ಮೇಲೆ ಹಣಕಾಸಿನ ಒತ್ತಡಕ್ಕೆ ಕಾರಣವಾಗುವುದು.' ಇದೇ ರೀತಿಯ ವಾದಗಳನ್ನು ಸಮಾಜವಾದಿ ದೇಶಗಳನ್ನು ಬಿಟ್ಟು ವಿಶ್ವದ ಎಲ್ಲೆಡೆಗಳಲ್ಲೂ ಮುಂದಿಡಲಾಗಿದೆ.

## ಆರ್ಥಿಕ ಬಿಕ್ಕಟ್ಟು

ಬೆಳೆಯುತ್ತಿರುವ ಆರ್ಥಿಕ ಬಿಕ್ಕಟ್ಟು ಕೂಡ ಉದ್ಯೋಗದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ಭೇದಭಾವಕ್ಕೆ ಕಾರಣವಾಗಿದೆ. ಆರ್ಥಿಕ ಬಿಕ್ಕಟ್ಟು ಮತ್ತು ಅಭದ್ರತೆಗಳು ಯಾವುದೇ ಕಾಲದಲ್ಲಿ ಉಂಟಾದರೂ, ಅದಕ್ಕೆ ಮೊದಲ ಬಲಿ ಮಹಿಳೆಯರು. ಉದ್ಯೋಗ ವಿನಿಮಯ ಕೇಂದ್ರಗಳ ಅಂಕೆಅಂಶಗಳ ಪ್ರಕಾರ ಉದ್ಯೋಗವನ್ನರಸುವ ಮಹಿಳೆಯರ ಶೇಕಡಾವಾರು ಪರಿಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಉದ್ಯೋಗಕ್ಕಾಗಿ ಕರೆ ಬಂದಾಗ ಮಹಿಳೆಯರಿಗಿಂತ ಪುರುಷರಿಗೇ ಪ್ರಾಧಾನ್ಯತೆ ಕೊಡಲಾಗುತ್ತಿದೆ, ಕೆಲಸ ಕೊಡುವ ಮಾಲಿಕನಿಗೆ ಅಭ್ಯರ್ಥಿಗಳ ಹೆಸರುಗಳನ್ನು ಕಳಿಸಲು ನಾವು ಟ್ರೇಡ್ ಯೂನಿಯನ್‌ಗಳಲ್ಲಿ ಕ್ರಮ ವಹಿಸಬೇಕಾದ ಸಂದರ್ಭಗಳು ಅನೇಕ. ಮಹಿಳೆಯರಿಗೆ ಉದ್ಯೋಗ ಕೊಡುವಂಥ ಕಡೆಗಳಲ್ಲೂ ಪುರುಷರೇ ಬೇಕೆಂದು ಮಾಲಿಕರು ನಿರ್ದಿಷ್ಟವಾಗಿ ಕೇಳುತ್ತಾರೆ.

ಭಾರತದಂತಹ ಬಂಡವಾಳಶಾಹಿ ದೇಶದಲ್ಲಿರುವ ಕಾರ್ಮಿಕರ ಮಾರುಕಟ್ಟೆಯ ಆರ್ಥಿಕತೆಯಲ್ಲಿ ಮಹಿಳಾ

### ಪಾರ್ವತಿ ಕೃಷ್ಣನ್

ಕಾರ್ಮಿಕರ ವಿತರಣೆಯನ್ನು ಹತೋಟಿಯಲ್ಲಿಡುವುದೆಂಬ ಅಂಶವನ್ನು ಗಮನಿಸಬೇಕು. ಮಾಲಿಕರಿಗೆ ಅತಿ ಹೆಚ್ಚು ಲಾಭವನ್ನು ಖಾತ್ರಿಗೊಳಿಸುವುದಕ್ಕಾಗಿ ಮಹಿಳೆಯರ ಉದ್ಯೋಗಾವಕಾಶಗಳನ್ನು ಕಡಿಮೆಮಾಡುವುದೇ ಈ ಹತೋಟಿಯಾಗಿದೆ. ಆದ್ದರಿಂದ ಮಹಿಳೆಯರನ್ನು ಅತಿ ಕಡಿಮೆ ಕುಶಲತೆಯ ಕೆಲಸ ಹಾಗೂ ಕಷ್ಟಕರ ಕೆಲಸಗಳಲ್ಲೇ ಇಡಲಾಗಿದೆ; ಹೆಚ್ಚಿನ ಕುಶಲತೆ–ಹೆಚ್ಚಿನ ವೇತನದ ಕೆಲಸಗಳಿಗಾಗಿ ಅವರಿಗೆ ತರಬೇತಿ ಕೊಡಲಾಗುತ್ತಿಲ್ಲ ಮತ್ತು ಭಡ್ತಿ ನೀಡಲಾಗುತ್ತಿಲ್ಲ.



ಅಸಂಘಟಿತ ಕೈಗಾರಿಕೆಯಾದ ಅಗರಬತ್ತಿ ಕೈಗಾರಿಕೆಯಲ್ಲಿ ದುಡಿಯುವ ಈ ಮಹಿಳೆಯರಿಗೆ ಯಾವ ಸವಲತ್ತೂ ಇಲ್ಲ.

## ರಾಷ್ಟ್ರೀಯ ಕನಿಷ್ಠ ವೇತನ

ಆದುದರಿಂದ ಇಂದು ದುಡಿಯುವ ಮಹಿಳೆಯರ ಮುಂದಿರುವ ಅತಿ ಮುಖ್ಯ ಕೇಳಿಕೆಗಳಲ್ಲೊಂದೆಂದರೆ ರಾಷ್ಟ್ರೀಯ ಕನಿಷ್ಠ ವೇತನದ್ದು. ಈ ಕೇಳಿಕೆಯನ್ನು ಸಾಧಿಸಿದಲ್ಲಿ ಅಕ್ಕಿ-ಎಣ್ಣೆ ಗಿರಣಿಗಳು, ಬೆಂಕಿಪೆಟ್ಟಿಗೆ–ಬೀಡಿ ಕೈಗಾರಿಕೆಗಳು, ಕಟ್ಟಡ ನಿರ್ಮಾಣ ಮುಂತಾದವುಗಳಲ್ಲಿ ದುಡಿಯುವ ಮಹಿಳೆಯರ ವೇತನ–ಉದ್ಯೋಗಗಳನ್ನು ರಕ್ಷಿಸಲು ಸಾಧ್ಯ. ಅತಿ ಕಡಿಮೆ ವೇತನದ ಕೈಗಾರಿಕೆಗಳಲ್ಲಿ ಕೇವಲ ಮಹಿಳೆಯರನ್ನೇ ನೇಮಿಸುವ ಪ್ರವೃತ್ತಿಯನ್ನು ಇದರಿಂದ ತಡೆಯಬಹುದು.

ಎರಡನೆಯದಾಗಿ ವೃತ್ತಿ ಶಿಕ್ಷಣದ ಪ್ರಶ್ನೆಯು ದುಡಿಯುವ ಮಹಿಳೆಯರಿಗೆ ಬಹಳ ಪ್ರಮುಖವಾದುದು. ಅಂತರ್ರಾಷ್ಟ್ರೀಯ ಶ್ರಮಿಕ ಸಂಘಟನೆ (ಐ.ಎಲ್.ಓ.)ಯು 'ಸಮಾನ ವೇತನ ಒಪ್ಪಂದ'ದಲ್ಲಿ ವೃತ್ತಿ ಶಿಕ್ಷಣ, ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗದ ದೊರಕುವಿಕೆಯಲ್ಲಿ ಪುರುಷ ಮತ್ತು ಮಹಿಳ ಕಾರ್ಮಿಕರಿಗೂ ಒಂದೇ ರೀತಿಯ ಸೌಲಭ್ಯಗಳಿರಬೇಕೆಂದು ಶಿಫಾರಸು ಮಾಡಲಾಗಿದೆ. 'ಸಮಾನ ವೇತನದ ಕಾನೂನು ಭಾರತದ ಕಾನೂನುಗಳ ಕಡತದಲ್ಲಿದ್ದರೂ ಸಹ ಈ ಶಿಫಾರ್ಸನ್ನು ಕೈಗೆತ್ತಿಕೊಳ್ಳಲಾಗಿಲ್ಲ; ಈಗ ಮಹಿಳೆಯರಿಗಿರುವ ಉದ್ಯೋಗಾವಕಾಶಗಳನ್ನು ರಕ್ಷಿಸಲು ಕ್ರಮ ವಹಿಸುವಲ್ಲಿ ಸರ್ಕಾರವು ಖಂಡಿತವಾಗಿಯೂ ವಿಫಲವಾಗಿದೆ. ಈ ಶಿಫಾರಸಿನ ಪ್ರಕಾರ ಕ್ರಮ ವಹಿಸಿದಲ್ಲಿ ಮಹಿಳೆಯರನ್ನು ಅತಿ ಕಡಿಮೆ ವೇತನ ಶ್ರೇಣಿಯಲ್ಲಿಡುವ ಮಾಲಿಕರ ಪ್ರಯತ್ನಗಳನ್ನು ಸ್ವಲ್ಪ ಮಟ್ಟಿಗೆ ಎದುರಿಸಬಹುದು ಮತ್ತು ಅವರನ್ನು ಕೆಲಸದಿಂದ ಬಿಡಿಸುವುದನ್ನು ತಡೆಯಬಹುದು.

ಆದರೆ ಮಹಿಳೆಯರಿಗೆ ಹೆಚ್ಚಿನ ಮತ್ತು ಉನ್ನತ ಕುಶಲತೆ ನೀಡುವುದಕ್ಕಾಗಿ ವೃತ್ತಿ ಶಿಕ್ಷಣ ಕೊಡಲು ಕೆಲವು ವಿಶೇಷ ಸೌಲಭ್ಯಗಳು ಬೇಕೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಕಾನೂನಿನಲ್ಲಿ ಎಂಟು ಗಂಟೆಗಳ ಕೆಲಸವೆಂದಿದ್ದರೂ, ಮಹಿಳೆಯರಿಗೆ ಸಂಬಂಧಪಟ್ಟಂತೆ ಹೇಳಬೇಕಾದಲ್ಲಿ ಈ ಕಾನೂನು ಅವರು ಕೆಲಸ ಮಾಡುವ ಸ್ಥಳದ ಗೇಟಿನಲ್ಲೇ ಮುಗಿಯುತ್ತದೆ. ದುಡಿಯುವ ಮಹಿಳೆಯು ಕೆಲಸದ ಜೊತೆಗೆ ಆಕೆ ಮಾಡುವ ಗೃಹ ಕೃತ್ಯ ಮತ್ತು ಮಾತೃ ಕಾರ್ಯಗಳನ್ನು ಸೇರಿಸಿದಲ್ಲಿ ಆಕೆ ಕೆಲಸ ಮಾಡುವುದು ಕನಿಷ್ಠ 14 ಗಂಟೆಗಳಾಗುತ್ತವೆ. ಆದ್ದರಿಂದ ದುಡಿಯುವ ಮಹಿಳೆಯರಿಗೆ ಅವರು ಕೆಲಸಮಾಡುವ ಕಾಲದಲ್ಲೇ ತರಬೇತಿ ಕೊಡಬೇಕಾಗಿದೆ.

## ಅಸಂಘಟಿತ ಕೈಗಾರಿಗಳು

ಅಸಂಘಟಿತ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಶೋಷಿಸಲಾಗುತ್ತಿದೆ, ಟ್ರೇಡ್ ಯೂನಿಯನ್‌ಗಳಲ್ಲಿ ಅವರು ಸಕ್ರಿಯವಾದಲ್ಲಿ ಕೆಲಸದಿಂದ ವಜಾಮಾಡುವುದಾಗಿ ಮಾಲಿಕರು ಹಾಕುವ ಬೆದರಿಕೆಗಳಿಂದಾಗಿ ಅವರನ್ನು ಸಂಘಟಿಸುವುದು ಸಾಕಷ್ಟು ಕಷ್ಟಕರವಾಗಿದೆ. ಉದ್ಯೋಗ ನಡೆಯುವಲ್ಲಿ ಆಗುವ ತೊಂದರೆ, ನಿರುದ್ಯೋಗದ ಬೆದರಿಕೆಯ ಒತ್ತಡ, ಉಪವಾಸದ ಭಯ-ಇವೆಲ್ಲವೂ ಸೇರಿ ಅವರು ಸಂಘಟಿತರಾಗದಂತೆ ತಡೆದಿವೆ. ಇದರೊಡನೆ ಅನಕ್ಷರತೆ ಮತ್ತು ಸದ್ಯದ ಕಾರ್ಮಿಕ ಕಾನೂನುಗಳಡಿಯಲ್ಲಿ ತಮ್ಮ ಉದ್ಯೋಗವನ್ನು ರಕ್ಷಿಸಿಕೊಳ್ಳುವ ಹಕ್ಕುಗಳನ್ನು ಪಡೆಯುವಂತೆ ಅವರನ್ನು ಸಂಘಟಿಸುವುದು ಕಷ್ಟಕರ. ಭಾರತದಲ್ಲಿರುವ ಟ್ರೇಡ್‌ಯೂನಿಯನ್‌ಗಳು ಸಂಘಟಿತ ಕೈಗಾರಿಕೆಯ ಮೇಲೆಯೇ ತಮ್ಮ ಗಮನವನ್ನು ಕೇಂದ್ರೀಕರಿಸಿವೆ; ಅಸಂಘಟಿತ ವಿಭಾಗದ ಕಾರ್ಮಿಕರ, ವಿಶೇಷವಾಗಿ ಅಲ್ಲಿ ದುಡಿಯುವ

14ನೇ ಪುಟಕ್ಕೆ

# ಟ್ರೇಡ್‌ಯೂನಿಯನ್ ಚಳವಳಿ: ಹಳೆಯ ನೆನಪು;

ಸ್ವಾತಂತ್ರ್ಯದ ನಂತರ ನಮ್ಮ ಕಾರ್ಮಿಕವರ್ಗದ ಚಳವಳಿಯಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಮಧ್ಯಮ ವರ್ಗ ಹಾಗೂ ಹಳ್ಳಿಯ ಬಡವರ್ಗದಿಂದ ಬಂದ ಅಸಂಖ್ಯಾತ ಹೊಸ ಕಾರ್ಮಿಕರು ಕೈಗಾರಿಕೆಗಳನ್ನು ಸೇರಿದ್ದಾರೆ. ಒಂದೆಡೆ ದೊಡ್ಡ ಪ್ರಮಾಣದ ಮಧ್ಯಮವರ್ಗದ ಮತ್ತು ತಾಂತ್ರಿಕ ತರಬೇತಿ ಪಡೆದ ಕಾರ್ಮಿಕರಿದ್ದಾರೆ. ಇನ್ನೊಂದೆಡೆ ಅದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿರಬಹುದಾದ ನಿರಕ್ಷರಿ ಕಾರ್ಮಿಕರು-ಆದಿವಾಸಿಗಳು ಮತ್ತಿತರ ಸಮಾಜದ ಅತಿಹಿಂದುಳಿದ ವಿಭಾಗಗಳಿಂದ ಬಂದವರು-ಇದ್ದಾರೆ ಇಂದಿನ ಚಳವಳಿಯು ಸ್ವಾತಂತ್ರ್ಯ ಪೂರ್ವದ ಚಳವಳಿಗಿಂತಲೂ ಹೆಚ್ಚು ವಿಭಜಿತವಾಗಿದೆ; ಈ ಎಲ್ಲಾ ಸಮಸ್ಯೆಗಳೂ ನಿಸ್ಸಂದೇಹವಾಗಿ ವಾಸ್ತವವಾಗಿವೆ.

ಇವೆಲ್ಲವುಗಳಿಂದಾಗಿ ಚಳವಳಿಯ ರಾಜಕೀಯ ಕರ್ತವ್ಯಗಳನ್ನು ಮತ್ತು ಗುರಿಗಳನ್ನು ನಿರ್ದಿಷ್ಟವಾಗಿ ಗೊತ್ತು ಮಾಡುವುದು ಹಾಗೂ ಆ ಬಗ್ಗೆ ಕಾರ್ಮಿಕರ ರಾಜಕೀಯ ಕಾರ್ಯಾಚರಣೆಯನ್ನು ಸಂಘಟಿಸುವುದು ಈಗ ಹಿಂದಿದ್ದುದಕ್ಕಿಂತ ಹೆಚ್ಚು ಜಟಿಲವಾಗಿದೆ, ಕಷ್ಟಕರವಾಗಿದೆ.

ಆದರೂ ಸಹ, ಈ ಸವಾಲನ್ನು ಎದುರಿಸದಿದ್ದಲ್ಲಿ ಈ ದೇಶದಲ್ಲಿರುವ ಬಂಡವಾಳಶಾಹಿ ಆಳ್ವಿಕೆಗೆ ಬದಲಿಯಾಗಿ ನಾವು ಕಟ್ಟಬೇಕೆಂದಿರುವ ಎಡ ಪ್ರಜಾಪ್ರಭುತ್ವವಾದಿ ರಂಗವನ್ನು ಕಟ್ಟಲು ಸಾಧ್ಯವಿಲ್ಲ. ಈ ಬಗ್ಗೆ ವಾಮಪಂಥೀಯ ಕಾರ್ಮಿಕ ನಾಯಕರಲ್ಲಿ–ವಿಶೇಷವಾಗಿ ಕಮ್ಯೂನಿಸ್ಟರಲ್ಲಿ–ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾವು ಒಂದಾದರೊಂದು ದಿನ-ಇದರರ್ಥ ದೀರ್ಘಕಾಲವೆಂದಲ್ಲ–ಈ ಸವಾಲನ್ನು ಯಶಸ್ವಿಯಾಗಿ ಎದುರಿಸದಿದ್ದಲ್ಲಿ ಭಾರತವು ಅರಾಜಕತೆ ಮತ್ತು ಛಿದ್ರೀಕರಣಗಳಿಗೆ ಒಳಗಾಗುವುದೆಂದು ನನ್ನ ಅಭಿಪ್ರಾಯ. ತೀರಾ ಅಧಿಕಾರಶಾಹಿಯಾದ ಕೇಂದ್ರೀಕೃತ ಆಳ್ವಿಕೆಯನ್ನು ತರಲು ಪ್ರಧಾನ ಮಂತ್ರಿಗಳಿಂದ ಮಾತ್ರವೇ ಅಲ್ಲದೆ ಬೇರೆಡೆಗಳಲ್ಲೂ ಪ್ರಯತ್ನಿಸಲಾಗುತ್ತಿದೆ. ಆದರೆ ತೀವ್ರ ಧಾರ್ಮಿಕ, ಕುಲ ಮತ್ತು ಭಾಷಾಸ್ವರೂಪದ ತಿಕ್ಕಾಟಗಳಿರುವ ಈ ದೇಶವನ್ನು ಸಿ.ಐ.ಎ. ಪ್ರೇರಿತವಾದ ಪ್ರತಿಗಾಮಿ ಅಧಿಕಾರಶಾಹಿ ಆಳ್ವಿಕೆಯಿಂದ ನಡೆಸುವುದು ಸಾಧ್ಯವೆಂಬ ಬಗ್ಗೆ ನನಗೆ ಸಂದೇಹಗಳಿವೆ.

## ಕಾರ್ಮಿಕ ವರ್ಗದ ಪಾತ್ರ

ಆದ್ದರಿಂದ, ಎಡ–ಪ್ರಜಾಪ್ರಭುತ್ವವಾದಿ ಬದಲಿಯೊಂದರನಿರ್ಮಾಣಕ್ಕಾಗಿ ರಾಷ್ಟ್ರದ ರಾಜಕೀಯದಲ್ಲಿ ಹೆಚ್ಚು ಪರಿಣಾಮಕಾರಿ ಪಾತ್ರ ವಹಿಸುವ ಕಾರ್ಮಿಕ ವರ್ಗ ಅಥವಾ ಅರಾಜಕತೆ ಮತ್ತು ವಿಭಜನೆಯತ್ತ ನಿರಂತರವಾಗಿ ಸಾಗುವ ಅಸಂಖ್ಯಾತ ಬಂಡವಾಳ ಶಾಹಿ ಹೊಂದಾಣಿಕೆಗಳು–ಇವೆರಡೇ ನಿಜವಾದ ಬದಲಿಗಳು

ನಾವೀಗ ನಮ್ಮ ಸ್ವಾತಂತ್ರ್ಯಾನಂತರದ ಇತಿಹಾಸದ ಕವಲುದಾರಿಯಲ್ಲಿದ್ದೇವೆ, ನಾನಿದನ್ನು ಸಾಹಿತ್ಯದ ಸ್ಫೂರ್ತಿಯಿಂದ ಹೇಳುತ್ತಿಲ್ಲ; ಬದಲಾಗಿ ಕರ್ತವ್ಯವನ್ನು ನಿರ್ವಹಿಸುವ ತುರ್ತು ಅವಶ್ಯಕತೆಯನ್ನು ಒತ್ತಿಹೇಳುತ್ತಿದ್ದೇನೆ.

ಎಐಟಿಯುಸಿಯು ರಾಜಕೀಯ ಪಕ್ಷವಲ್ಲ; ಅದು ಅರಾಜಕೀಯ ಸಂಸ್ಥೆಯೂ ಅಲ್ಲ. ನಮ್ಮ ಕಾರ್ಮಿಕ ವರ್ಗದ ಚಳವಳಿಯ ಆರಂಭದೆಸೆಯಲ್ಲಿದ್ದ ತೀವ್ರ ಪರಿಸ್ಥಿತಿಯಿಂದಾಗಿ ಎಐಟಿಯುಸಿಯು ಆ ಕಾಲದಲ್ಲಿ ಮಹಾನ್ ರಾಜಕೀಯ ಪಾತ್ರ ವಹಿಸಿತು. ಇಂದಿನ ಹಿನ್ನೆಲೆ ಬೇರೆಯಾಗಿದೆ; ಆದರೆ ಸಮಾಜವಾದಕ್ಕೆ ಬದಲಾವಣೆಯು ಘಟ್ಟವಾಗುವ ಭಾರತೀಯ ಪ್ರಜಾಪ್ರಭುತ್ವವಾದಿ ಕ್ರಾಂತಿಯ ಕರ್ತವ್ಯಗಳನ್ನು ಇನ್ನೂ ನಿರ್ವಹಿಸಲಾಗಿಲ್ಲ, ಈ ಕರ್ತವ್ಯಗಳನ್ನೂ ನಿರ್ವಹಿಸುವಲ್ಲಿ ಎಐಟಿಯುಸಿಗೆ ಖಂಡಿತವಾಗಿಯೂ ದೊಡ್ಡ ಪಾತ್ರವಿದೆ.

ಇತಿಹಾಸವು ತನ್ನಿಂದತಾನೇ ಪುನರಾವರ್ತನೆಯಾಗದು; ಹಾಗಾದರೂ ಸಹ, ಮಾರ್ಕ್ಸ್ ಹೇಳಿದಂತೆ ಅದು ತಮಾಶೆಯಾಗಬಹುದು. ಆದರೂ ಕೂಡಾ ನಾವು ಇತಿಹಾಸದಿಂದ ಪಾಠ ಕಲಿತಿದ್ದೇವೆ, ಈ ಲೇಖನದಲ್ಲಿ ನಾನು ನಮ್ಮ ಹಳೆಯ ಅನುಭವಗಳನ್ನು ನಿರೂಪಿಸಲು ಮಾತ್ರ ಬಯಸುತ್ತೇನೆ. ಚಳವಳಿಯ ನಾಯಕತ್ವವು ಹೊಸ ಕರ್ತವ್ಯಗಳನ್ನು ಎದುರಿಸುತ್ತಿದೆ; ಯುವ ಸಂಗಾತಿಗಳಿಗೆ ಹಳೆಯ ಅನುಭವ ಪ್ರಯೋಜನಕರವಾಗಬಹುದು.

## ಮೊದಲಪ್ರಶ್ನೆ

ಮೊದಲನೆಯ ಪ್ರಶ್ನೆ; ಸಾಮೂಹಿಕ ಶಿಕ್ಷಣ ಮತ್ತು ಹೋರಾಟ, ಕಾರ್ಖಾನೆಯ ಗೇಟ್‌ಗಳು, ಪ್ರಾದೇಶಿಕ ಸಭೆಗಳು, ಬಹಿರಂಗ ಸಭೆಗಳು-ಇವೆಲ್ಲವುಗಳಲ್ಲೂ ಸತತ ಪ್ರಚಾರವೇ ಇದರ ಅರ್ಥ. (ಇದರಲ್ಲಿ ಕಾರ್ಮಿಕರ ಮನೆಗಳಲ್ಲಿ ಅವರೊಡನೆ ಮಾಡುವ ವೈಯಕ್ತಿಕ ಚರ್ಚೆಯೂ ಸೇರಿದೆ), 'ಸಾಮಾನ್ಯ' ಪರಿಸ್ಥಿತಿ ಹಾಗೂ ಮುಷ್ಕರ ಪರಿಸ್ಥಿತಿಗಳಲ್ಲೂ ಸಹ ಹೋರಾಟ ನಡೆಯಬೇಕು ಮತ್ತು ಪ್ರಚಾರದ ಕರಪತ್ರಗಳ ಸಾಮೂಹಿಕ ವಿತರಣೆಯು ಆಗಬೇಕು.

ಹಿಂದಿನ ಕಾಲದಲ್ಲಿ ತಮ್ಮ ಚಳವಳಿಯ ಮೂಲ ಗುರಿಗಳ ಸ್ವರೂಪ ಮತ್ತು ಸತ್ವಗಳ ಬಗ್ಗೆ ಕಾರ್ಮಿಕರಿಗೆ ಶಿಕ್ಷಣ ಕೊಡಲು ಈ ಎಲ್ಲ ಮಾಧ್ಯಮಗಳನ್ನು ನಿಸ್ಸಂದೇಹವಾಗಿ ಉಪಯೋಗಿಸಲಾಯಿತು. ಸಮಾಜವಾದದ ನೈಜ ಅರ್ಥವೇನು? ಸ್ವಾತಂತ್ರ್ಯ ಹೋರಾಟದ ಹಾಗೂ ಆ ನಂತರ ಸಮಾಜವಾದಕ್ಕಾಗಿ ನಡೆಯುವ ಹೋರಾಟದ ನಾಯಕನಾಗಿ ಕಾರ್ಮಿಕ ವರ್ಗ ಏಕೆ ಮುಂಬರಬೇಕು? ಶ್ರಮಜೀವಿವರ್ಗದ ಸರ್ವಾಧಿಕಾರವೆಂದರೇನು ? ಅದು ಯಾರ ವಿರುದ್ಧವಾಗಿದೆ ಹಾಗೂ ಅದು ಹೇಗೆ ಪ್ರಜಾಪ್ರಭುತ್ವದ ಅತ್ಯುಚ್ಚ ಸ್ವರೂಪವಾಗಿದೆ ? ಲೆನಿನ್ ನೇತೃತ್ವದ ಬೋಲ್ಷೆವಿಕ್ ಪಾರ್ಟಿಯು ಈ ಕರ್ತವ್ಯಗಳನ್ನು ಹೇಗೆ ನಿರ್ವಹಿಸಿತು ? ಸೋವಿಯತ್ ಆಳ್ವಿಕೆಯ ಸ್ವರೂಪ ಹಾಗೂ ಅದರ ಅಂತರ್‌ರಾಷ್ಟ್ರೀಯ ಪಾತ್ರವೇನು ? ರಾಷ್ಟ್ರೀಯ ಚಳವಳಿಯಲ್ಲಿ ಮತ್ತು ಅಂತರ್‌ರಾಷ್ಟ್ರೀಯ ಕಾರ್ಮಿಕ ಚಳವಳಿಯಲ್ಲಿ ಕಾರ್ಮಿಕ ವರ್ಗದ ಪಾತ್ರವೇನು ? ಈ ಎಲ್ಲ ವಿಷಯಗಳ ಕುರಿತಾದ ಶಿಕ್ಷಣವು ಪಾರ್ಟಿ ಶಾಲೆ ಮತ್ತು ಟ್ರೇಡ್‌ಯೂನಿಯನ್ ಕಾರ್ಯಕರ್ತರಿಗೇ ಸೀಮಿತವಾಗಿರಲಿಲ್ಲ. ಕಾರ್ಮಿಕ ವರ್ಗದ ಎಲ್ಲಾ ಕೇಂದ್ರಗಳಲ್ಲಿ ಈ ಕೆಲಸವನ್ನು ತೃಪ್ತಿಕರವಾಗಿ ನಿರ್ವಹಿಸಲಾಗಲಿಲ್ಲ; ಆದರೆ ಮಾರ್ಕ್ಸ್‌ವಾದವನ್ನು ಒಪ್ಪಿದ್ದ ಮತ್ತು ಚಳವಳಿಯ ನಾಯಕರು – ಕಾರ್ಯಕರ್ತರಾಗಿದ್ದವರ ದೈನಂದಿನ ಸಾಮೂಹಿಕ ಚಟುವಟಿಕೆಯಲ್ಲಿ ಇದು ಒಂದು ಭಾಗವಾಗಿತ್ತೆಂಬ ವಾಸ್ತವಾಂಶವನ್ನು ಖಚಿತವಾಗಿ ಹೇಳಬಹುದು. ಈ ಕೆಲಸವನ್ನು ಕಮ್ಯುನಿಸ್ಟ ಮಹತ್ವವಿಲ್ಲದ ಟ್ರೇಡ್ ಯೂನಿಯನ್‌ಗಳಲ್ಲೂ ಸಹ ಮಾಡಲಾಗುತ್ತಿತ್ತು.

## ಮೇ ದಿನಾಚರಣೆ

ಇಂದು ಮೇ ದಿನವನ್ನು ನಾವು ಹಿಂದೆ ಆಚರಿಸಿದ್ದಕ್ಕಿಂತ ದೊಡ್ಡ ರೀತಿಯಲ್ಲಿ ಆಚರಿಸುತ್ತೇವೆ. ಇದರ ಹಿಂದಿನ ಮೇ ದಿನಗಳ ಸಾಧನೆಗಳಲ್ಲಿ ಅತಿ ಮುಖ್ಯವಾಗಿದ್ದುದು ಅಂತರ್‌ರಾಷ್ಟ್ರೀಯ ರಾಜಕೀಯ. ಸಮಾಜವಾದದ ಸಾಧನೆಗಾಗಿ ವಿವಿಧ ದೇಶಗಳ ಕಾರ್ಮಿಕರು ಹೇಗೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಿದ್ದಾರೆ ಮತ್ತು ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯ ಸೇನೆಗೆ ಸೋವಿಯತ್ ಒಕ್ಕೂಟವು ಹೇಗೆ ಮುಂದಾಳಾಗಿದೆ ಎಂಬುದರ ಬಗ್ಗೆ ಗಮನ ಕೇಂದ್ರೀಕರಿಸಲಾಗಿತ್ತು. ಅಕ್ಟೋಬರ್ ಮಹಾ ಕ್ರಾಂತಿಯ ವಾರ್ಷಿಕೋತ್ಸವವನ್ನು ಆಚರಿಸಲು ಅತಿದೊಡ್ಡ ಸಭೆಗಳನ್ನು ನಡೆಸಲಾಗುತ್ತಿತ್ತು. ಲೆನಿನರ ಜನ್ಮದಿನದ ಆಚರಣೆಯ ಸಂದರ್ಭದಲ್ಲಿ ಸಾಕಷ್ಟು ದೊಡ್ಡ ಸಭೆಗಳನ್ನು–ಮಧ್ಯಮವರ್ಗದ ಜನರ ಸಭೆಗಳು ಸೇರಿದಂತೆ – ನಡೆಸಲಾಗುತ್ತಿತ್ತು. ಲೆನಿನರ ಮರಣ ದಿನವನ್ನು ಸಹ ಆಚರಿಸಲಾಗುತ್ತಿತ್ತು.

ಸೈಮನ್ ಆಯೋಗದ ವಿರುದ್ಧ ಪ್ರಪ್ರಥಮವಾಗಿ ಸಾಮೂಹಿಕ ಪ್ರದರ್ಶನಗಳನ್ನು ನಡೆಸಿದ್ದು ಕಾರ್ಮಿಕ ವರ್ಗವೇ; ಇವು ಕಾಂಗ್ರೆಸ್ ನಡೆಸಿದ ಪ್ರದರ್ಶನಗಳಿಗಿಂತ ಹೆಚ್ಚು ದೊಡ್ಡ ರೀತಿಯಲ್ಲಿದ್ದವು ಮತ್ತು ಹೆಚ್ಚು ಸಂಘಟಿತವಾಗಿದ್ದವು. ಭಾರತಕ್ಕೆ ಹೊಸ ಸಂವಿಧಾನ ರಚಿಸುವುದಕ್ಕಾಗಿ ಈ ಆಯೋಗವನ್ನು 1927ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ನೇಮಿಸಿತ್ತು.

1928 ರಲ್ಲಿ ಅಮೆರಿಕನ್ ಕಾರ್ಮಿಕ ವರ್ಗದ ಪ್ರತಿನಿಧಿಗಳಾದ ಸ್ಯಾಕೊ ಮತ್ತು ವಾಂಜೆತಿ ಅವರನ್ನು ಮರಣ ದಂಡನೆಗೆ ಗುರಿಪಡಿಸಲಾಯಿತು. ಇವರ ವಿಚಾರಣೆ ಅಂತರ್‌ರಾಷ್ಟ್ರೀಯ ವಿಷಯವಾಯಿತು; ಮುಂಬೈ ಕಾರ್ಮಿಕರು ಇವರ ಮರಣದಂಡನೆಯ ವಿರುದ್ಧ ಪ್ರತಿಭಟಿಸಿ ಮುಷ್ಕರ ಹೂಡಿದ್ದರು.

1931ರಲ್ಲಿ ಭಗತ್‌ಸಿಂಗ್ ಮತ್ತವರ ಸಂಗಾತಿಗಳನ್ನು ಗಲ್ಲಿಗೇರಿಸಿದಾಗಲೂ ಮುಂಬಯಿಯಲ್ಲಿ ಸಾರ್ವತ್ರಿಕ ಮುಷ್ಕರ ನಡೆಯಿತು.

## ಗಿರಣಿ ಕಾರ್ಮಿಕರ ಮುಷ್ಕರ

1928ರಲ್ಲಿ ನಡೆದ ಮುಂಬೈ ಗಿರಣಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರವು ಇಡೀ ಬಂಡವಾಳಶಾಹಿ ವಿಶ್ವದಲ್ಲಿ ಪ್ರತಿಧ್ವನಿಸಿತು ; ಇದರಿಂದ ಬ್ರಿಟಿಶ್ ಆಡಳಿತಗಾರರು ಎಷ್ಟು ಗಾಬರಿಗೊಂಡರೆಂದರೆ ಆ ಕೂಡಲೇ ಮೀರತ್ ಪಿತೂರಿ ಖಟ್ಲೆಯ ವಿಚಾರಣೆ ಆರಂಭವಾಯಿತು. ಮುಂಬೈನ ಗಿರಣಿ ಕಾಮಗಾರ್ ಯೂನಿಯನ್ ಇಡೀ ಏಷ್ಯದಲ್ಲೇ ಅತಿ ದೊಡ್ಡ ಟ್ರೇಡ್ ಯೂನಿಯನ್ ಎಂಬ ಹೆಸರು ಪಡೆಯಿತು ; ಮುಂಬೈಯನ್ನು ಭಾರತದ ಪೆತ್ರೋಗ್ರಾಡ್ ಎಂದು ಕರೆಯಲಾಯಿತು.

ಮುಂಬೈ ಗಿರಣಿಕಾರ್ಮಿಕರು 1929 ರಲ್ಲಿ ನಡೆಸಿದ ಸಾರ್ವತ್ರಿಕ ಮುಷ್ಕರವು ಔಪಚಾರಿಕವಾಗಿಯಾದರೂ ಯಾವುದೇ ಆರ್ಥಿಕ ಕೇಳಿಕೆಯನ್ನು ಹೊಂದಿರಲಿಲ್ಲ. 1928 ರಲ್ಲಿ ನಡೆದ ಮುಷ್ಕರದ ಕಾಲದಲ್ಲಿ ಹುಟ್ಟಿದ್ದ ಬಲಿಷ್ಠ ಮಿಲ್ ಸಮಿತಿಗಳು ಮಿಲ್ ಮಾಲೀಕರಿಗೆ 'ಪೀಡೆ' ಯಾಗಿದ್ದವು; ಮಾಲೀಕರು ಈ ಸಮಿತಿಗಳ ವಿರುದ್ಧ ದಾಳಿ ಆರಂಭಿಸಿದರು. 1929ರ ಆದಿ ಭಾಗದಲ್ಲಿ ಮೀರತ್ ಖಟ್ಲೆಯ ಅಂಗವಾಗಿ ಬಂಧನಗಳು ನಡೆದವು. ಸಂಘಟನೆಯ ಹಕ್ಕು, ಮಿಲ್ ಸಮಿತಿಗಳ ರಕ್ಷಣೆ ಮತ್ತು ಮೀರತ್ ಖಟ್ಲೆಯ ವಿರುದ್ಧ ಪ್ರತಿಭಟನೆ-ಇವೇ ಮುಂಬೈ ಕಾರ್ಮಿಕರು 6 ತಿಂಗಳುಗಳ ಕಾಲ ನಡೆಸಿದ ಮುಷ್ಕರಕ್ಕೆ ಕಾರಣಗಳಾಗಿದ್ದವು. ಅಂತಿಮವಾಗಿ ಉಪವಾಸ ಮತ್ತು ದಬ್ಬಾಳಿಕೆ ಈ ಮುಷ್ಕರವನ್ನು ಮುಕ್ತಾಯಗೊಳಿಸಿದವು.

ಮೂವತ್ತರ ದಶಕದ ಬಂಡವಾಳಶಾಹಿ ಬಿಕ್ಕಟ್ಟಿನ ಕಾಲದಲ್ಲಿ 1932 ಮತ್ತು 1933 ಅತಿಕೆಟ್ಟ ವರ್ಷಗಳಾಗಿದ್ದವು; ಸಹಸ್ರಾರು ಕಾರ್ಮಿಕರು ಬೀದಿ ಪಾಲಾಗಿದ್ದರು. ಆದರೂ 1933ರಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದುದರ ವಿರುದ್ಧ ಪ್ರತಿಭಟನಾ ಮುಷ್ಕರ ನಡೆಸಬೇಕೆಂಬ ಕರೆಯು ಹಲವಾರು ಗಿರಣಿಗಳಲ್ಲಿ ಯಶಸ್ವಿಗೊಂಡಿತು.

ಅಂದಿನ ದಿನಗಳಲ್ಲಿ ಕಮ್ಯೂನಿಸ್ಟರೇ ಮಾತ್ರವಲ್ಲದೆ ರಾಷ್ಟ್ರೀಯ ಚಳವಳಿಯಲ್ಲಿದ್ದ ಎಲ್ಲ ಎಡ ಶಕ್ತಿಗಳೂ ಸಹ ಕಾರ್ಮಿಕವರ್ಗದ ಪಾತ್ರದ ಪ್ರಶ್ನೆಯನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತಿದ್ದರು ಎಂಬುದಕ್ಕೆ ಕೆಳಕಂಡ ಇನ್ನೊಂದು ಉದಾಹರಣೆಯನ್ನು ಕೊಡಬಹುದು (ಇದನ್ನೀಗ ಮರೆತು ಬಿಡಲಾಗಿದೆ):

## ಒಂದು ಉದಾಹರಣೆ

1930ರ ಅಸಹಕಾರ ಚಳವಳಿಯ ವಿಫಲತೆಯ ಬಗ್ಗೆ ಮತ್ತು ಅದರ ದೌರ್ಬಲ್ಯಗಳ ಹಾಗೂ ವೈಫಲ್ಯದ ಕಾರಣಗಳ ಬಗ್ಗೆ ದೇಶದಲ್ಲಿ ವ್ಯಾಪಕವಾದ ಚರ್ಚೆಗಳು ನಡೆದಿದ್ದವು.



ಲೇಖಕ: ಎಸ್. ಜಿ. ಸರ್ದೇಸಾಯಿ

★

ಈ ಹಿನ್ನೆಲೆಯಲ್ಲಿ ಕಮ್ಯೂನಿಸ್ಟರು, ನೆಹರೂ, ಸುಭಾಷ್‌ಚಂದ್ರಬೋಸ್ ಮತ್ತಿತರರು ಟ್ರೇಡ್ ಯೂನಿಯನ್‌ಗಳು ಹಾಗೂ ಕಿಸಾನ್ ಸಭಾದವರನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸಾಮೂಹಿಕವಾಗಿ ಸೇರ್ಪಡೆಮಾಡುವ ವಿಷಯವನ್ನು ಎತ್ತಿದರು. ಟ್ರೇಡ್ ಯೂನಿಯನ್‌ಗಳ ಸೇರ್ಪಡೆಯ ವಿಷಯವನ್ನು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು, ಅಖಿಲಭಾರತ ಕಾಂಗ್ರೆಸ್ ಕಮಿಟಿ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗಳಲ್ಲಿ ಗಂಭೀರವಾಗಿ ಚರ್ಚಿಸಲಾಯಿತು.

ಆದರೆ ಪಟೇಲ್ ನಾಯಕತ್ವದಲ್ಲಿದ್ದ ಬಲಪಂಥೀಯರು ಈ ಸಲಹೆಯನ್ನು ಬಲವಾಗಿ ವಿರೋಧಿಸಿದರು; ಇತರ ಎಲ್ಲರಂತೆ ಕಾರ್ಮಿಕರೂ ಸಹ ವೈಯಕ್ತಿಕವಾಗಿ ಕಾಂಗ್ರೆಸ್ ಸೇರಬಹುದೆಂದೂ, ರಾಷ್ಟ್ರೀಯ ಚಳವಳಿಯಲ್ಲಿ ಟ್ರೇಡ್ ಯೂನಿಯನ್‌ಗಳಿಗೆ ಯಾವುದೇ ವಿಶೇಷ ಪಾತ್ರವಿಲ್ಲವೆಂದೂ ಅವರು ವಾದಿಸಿದರು.

ಒಂದು ವರ್ಗವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕವರ್ಗಕ್ಕೆ ಇರುವ ಪಾತ್ರ, ಈ ಪಾತ್ರವನ್ನು ಸಂಘಟಿತ ರೀತಿಯಲ್ಲಿ ಅದು ನಿರ್ವಹಿಸಬೇಕಾದಲ್ಲಿ ಕಾಂಗ್ರೆಸ್‌ಗೆ ಟ್ರೇಡ್ ಯೂನಿಯನ್‌ಗಳ ಸೇರ್ಪಡೆಯ ಅವಶ್ಯಕತೆ ಇವುಗಳ ಬಗ್ಗೆ ಪತ್ರಿಕೆಗಳು ಅನೇಕ ಲೇಖನಗಳನ್ನು ಪ್ರಕಟಿಸಿದ್ದವು.

ಆದರೆ ಅಂತಿಮವಾಗಿ ಬಲಪಂಥೀಯ ಕಾಂಗ್ರೆಸಿಗರು ಈ ಸಲಹೆಯನ್ನು ಸೋಲಿಸಿದರು. ಆದರೂ ಇದನ್ನು ನೇತೃ ರಾಷ್ಟ್ರೀಯ ಸಂಘಟನೆಯಲ್ಲಿ ತರಲಾಯಿತೆಂಬುದೇ ದೊಡ್ಡ ವಿಷಯವಾಗಿದೆ ; ರಾಷ್ಟ್ರೀಯ ಚಳವಳಿಯ ಪರಿಮಿತಿಯಿಂದ ದೂರವಿದ್ದ ಕಮ್ಯೂನಿಸ್ಟರ ಕೆಲಸವೆಂದು ಟ್ರೇಡ್ ಯೂನಿಯನ್‌ಗಳನ್ನು ಯಾರೂ ಪರಿಗಣಿಸಿರಲಿಲ್ಲ.

ಕಾಂಗ್ರೆಸ್‌ಗೆ ಟ್ರೇಡ್ ಯೂನಿಯನ್‌ಗಳ ಸೇರ್ಪಡೆಯ ಸಲಹೆಯು ಸೋತರೂ ಸಹ ಕಮ್ಯೂನಿಸ್ಟ್, ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ,

# ಹೊಸ ಹುರುಪು

ಸುಭಾಷ್‌ಚಂದ್ರ ಬೋಸರ ಫಾರ್ವರ್ಡ್ ಬ್ಲಾಕ್ ಮತ್ತಿತರರಿಂದ ಕೂಡಿದ ಎಡ ಕ್ರೋಢೀಕರಣ ಸಮಿತಿಯು (1936–38) ಸಂಘಟಿತ ಕಾರ್ಮಿಕವರ್ಗ, ರೈತ ಚಳವಳಿ ಹಾಗೂ ರಾಷ್ಟ್ರೀಯ ಕಾಂಗ್ರೆಸ್‌ಗಳ ನಡುವಣ ಸಂಪರ್ಕದ ಕೊಂಡಿಯಾಗಿತ್ತು.

ಎಡ ಕ್ರೋಢೀಕರಣ ಸಮಿತಿಯಲ್ಲಿದ್ದ ಅನೇಕ ಎಐಸಿಸಿ ನಾಯಕರು ಟ್ರೇಡ್ ಯೂನಿಯನ್‌ಗಳು ಹಾಗೂ ಕಿಸಾನ್ ಸಭಾಗಳಲ್ಲೂ ನಾಯಕರಾಗಿದ್ದರು. ಅವರು ಅನೇಕ ಹೋರಾಟಗಳಿಗೆ ನೇತೃತ್ವ ಕೊಡುತ್ತಿದ್ದು, ಇದರಿಂದ ರೋಸಿದ ಕಾಂಗ್ರೆಸ್ ಬಲಪಂಥೀಯರು ಅವರ ವಿರುದ್ಧ ಶಿಸ್ತಿನ ಕ್ರಮಕ್ಕಾಗಿ ಒತ್ತಾಯಿಸುತ್ತಿದ್ದರು. ಆದರೆ ಈ ಒತ್ತಾಯ ಫಲಪ್ರದವಾಗುತ್ತಿರಲಿಲ್ಲ.

## ಇನ್ನೊಂದು ಉದಾಹರಣೆ

ನಾನು ಒಂದು ಪ್ರಮುಖ ಸಾಮೂಹಿಕ ಕಾರ್ಯಾಚರಣೆಯ ಉದಾಹರಣೆಯನ್ನು ಕೊಡಬಯಸುತ್ತೇನೆ. 1936ರ ಪ್ರಾಂತೀಯ ಚುನಾವಣೆಗಳ ನಂತರ ಮುಂಬೈ ಪ್ರಾಂತದ ಅಧಿಕಾರ ವಹಿಸಿಕೊಂಡಿದ್ದ ಕಾಂಗ್ರೆಸ್ ಪಕ್ಷವು ಕೈಗಾರಿಕಾ ಸಂಬಂಧಗಳ ಮಸೂದೆಯೊಂದನ್ನು ತಂದಿತ್ತು. ಇದು ಸ್ವಾತಂತ್ರ್ಯ ನಂತರದ ಕಾಲದಲ್ಲಿ ಟ್ರೇಡ್ ಯೂನಿಯನ್‌ಗಳು ವಿರೋಧಿಸಿದ ಕೈಗಾರಿಕಾ ಸಂಬಂಧಗಳ ಮಸೂದೆಯ ಪೂರ್ವಭಾವಿ ಮಸೂದೆಯಾಗಿತ್ತು. ಈ ಮಸೂದೆಯ ವಿರುದ್ಧ ಮುಂಬೈ ಮತ್ತಿತರ ಕೈಗಾರಿಕಾ ಕೇಂದ್ರಗಳಲ್ಲಿ ಸಾಮೂಹಿಕ ಪ್ರತಿಭಟನೆಗಳು ನಡೆದವು ಮತ್ತು ಈ ಮಸೂದೆಯನ್ನು ಕರಾಳ ಮಸೂದೆಯೆಂದು ಖಂಡಿಸಲಾಯಿತು. ಇದರಲ್ಲಿ ಎಐಸಿಸಿಯ ಸದಸ್ಯರಾಗಿದ್ದ ಟ್ರೇಡ್ ಯೂನಿಯನ್ ನಾಯಕರೂ ಭಾಗವಹಿಸಿದ್ದರು; ಔಪಚಾರಿಕವಾಗಿ ಹೇಳಬೇಕೆಂದರೆ ಇದು ಕಾಂಗ್ರೆಸ್ ಶಿಸ್ತಿನ ಸ್ಪಷ್ಟ ಉಲ್ಲಂಘನೆಯಾಗಿತ್ತು. ಬಲಪಂಥೀಯ ಕಾಂಗ್ರೆಸಿಗರು ಇದರಿಂದ ಕೋಪಗೊಂಡರೂ ಏನೂ ಮಾಡಲಾಗಲಿಲ್ಲ.

ರೈತರ ಸಾಮೂಹಿಕ ಹೋರಾಟಗಳು ನಡೆದಾಗಲೂ ಸಹ–ವಿಶೇಷವಾಗಿ ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ– ಇನ್ನೂ ದೊಡ್ಡ ಬಿಕ್ಕಟ್ಟು ಉಂಟಾಯಿತು. ಅಲ್ಲಿ ರೈತರ ಇಡೀ ನಾಯಕತ್ವವು ಎ.ಐ.ಸಿ.ಸಿ. ಕೇಂದ್ರ ಕಚೇರಿಯೂ ಸೇರಿದಂತೆ ಕಾಂಗ್ರೆಸ್‌ನಲ್ಲಿ ಪ್ರಮುಖ ಸ್ಥಾನಗಳನ್ನು ಹೊಂದಿತ್ತು. ಇದರಿಂದಾಗಿ ಕಾಂಗ್ರೆಸ್ ಬಲಪಂಥೀಯರ ದಾಳಿಯನ್ನು ಎದುರಿಸುವುದೂ ಸಾಧ್ಯವಾಯಿತು.

ಮೂವತ್ತರ ಇಡೀ ದಶಕದಲ್ಲಿ ಮಾಮೂಲಿನ ಮುಷ್ಕರಗಳೊಡನೆ ಕಾರ್ಮಿಕ ವರ್ಗದ ಸಾಮೂಹಿಕ ಕಾರ್ಯಾಚರಣೆಗಳೂ ನಡೆದವು; ಇವು 1939ರಲ್ಲಿ ಮುಂಬೈನಲ್ಲಿ ನಡೆದ ಬೃಹತ್ ಯುದ್ಧವಿರೋಧಿ ಮುಷ್ಕರದಲ್ಲಿ ಕೊನೆಗೊಂಡವು. ಈ ಕಾರ್ಯಾಚರಣೆಗಳು ಕಾನ್‌ಪುರ ಕಲ್ಕತ್ತ, ಶೋಲಾಪುರ ಮತ್ತಿತರ ಅನೇಕ ಕಾರ್ಮಿಕ ವರ್ಗದ ಕೇಂದ್ರಗಳಲ್ಲಿ ನಡೆದವು.

ಇದು ಸ್ವಾತಂತ್ರ್ಯಪೂರ್ವಕಾಲದ ಸಮರಶೀಲ ಕಾರ್ಮಿಕವರ್ಗದ ಚಳವಳಿಯ ಸಮಗ್ರ ಇತಿಹಾಸವೇನಲ್ಲ; ಆದರೆ ಈ ಇತಿಹಾಸವನ್ನು ಬರೆಯುವುದು ಅತ್ಯಗತ್ಯ ಮತ್ತು ಅದು ಇಂದಿನ ಪರಿಸ್ಥಿತಿಗೂ ಸಹ ಬಹಳ ಪ್ರಯೋಜನಕರವಾಗುವುದು, ನಾನು ಕೇವಲ ನನ್ನ ಕೆಲವು ಹಳೆಯ ಅನುಭವಗಳನ್ನು ಅದೂ ನೆನಪಿನಿಂದ ನಿರೂಪಿಸುತ್ತಿದ್ದೇನೆ.

## ಜಾತೀಯ ಐಕ್ಯ

ಕಾರ್ಮಿಕ ವರ್ಗದ ಚಳವಳಿಯು ಕಮ್ಯೂನಿಸ್ಟ್ ನಾಯಕತ್ವದಲ್ಲಿದ್ದ ಕಡೆಗಳಲ್ಲೆಲ್ಲಾ ಹಿಂದೂ ಮತ್ತು ಮುಸ್ಲಿಂ ಕಾರ್ಮಿಕರ ನಡುವೆ ಬೆಳೆದ ಬಲಿಷ್ಠ ಐಕ್ಯತೆಯು ಈ ಕಾಲದ ಗಮನಾರ್ಹ ಸಾಧನೆಯಾಗಿತ್ತು. ಆದರೆ ಇದಕ್ಕೆ ಟ್ರೇಡ್‌ಯೂನಿಯನ್ ಚಟುವಟಿಕೆಯೊಂದೇ ಕಾರಣವಲ್ಲ. ಹಿಂದೂ ಮತ್ತು ಮುಸ್ಲಿಂ ಕಾರ್ಮಿಕರ ಸತತ ಸೋದರತ್ವ ಇವು ಈ ಐಕ್ಯತೆಯ ಆಧಾರವಾಗಿತ್ತು. ಟ್ರೇಡ್ ಯೂನಿಯನ್ ನಾಯಕತ್ವದಲ್ಲಿ ಮತ್ತು ಟ್ರೇಡ್‌ಯೂನಿಯನ್‌ಗಳ ಆಡಳಿತಾಂಗಗಳಲ್ಲಿ ಮುಸ್ಲಿಂ ಕಾರ್ಮಿಕರ ಪರಿಮಾಣ ಆಗ ಸಾಕಷ್ಟು ಹೆಚ್ಚಾಗಿತ್ತು. ನಗರಗಳ ಇತರ ಭಾಗಗಳು ಕೋಮು ದ್ವೇಷದ ದಳ್ಳುರಿಗೆ ಸಿಕ್ಕಿದ್ದರೂ ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ ಹಿಂದೂ ಮುಸ್ಲಿಂ ಕಾರ್ಮಿಕರ ಕುಟುಂಬಗಳು ಸಂಪೂರ್ಣವಾಗಿ ಶಾಂತಿ ಮತ್ತು ಐಕ್ಯತೆಯಿಂದಿರುವುದು ಸಾಮಾನ್ಯವಾಗಿತ್ತು. ಕೋಮು ಉದ್ರಿಕ್ತತೆಯ ಸಂದರ್ಭಗಳಲ್ಲಿ ಎರಡೂ ಕೋಮುಗಳ ಕಾರ್ಮಿಕರ ಪ್ರದೇಶಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಕಾರ್ಮಿಕ ನಾಯಕರಿಬ್ಬರೂ ಯಾವುದೇ ಅಡಚಣೆಯಿಲ್ಲದೆ ಸಂಚರಿಸುತ್ತಿದ್ದರು.

ಈ ಲೇಖನದ ವ್ಯಾಪ್ತಿಯಲ್ಲಿ ಬರುವ ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪಿಸಬೇಕಾಗಿದೆ. 1939–42 ಮತ್ತು 1948–51ರ ಕಾಲದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ಕೈಗಾರಿಕಾ ನಗರಗಳಲ್ಲಿ ಭೂಗತವಾದರೂ ಆಗ ಕಾರ್ಮಿಕ ವರ್ಗದ ವ್ಯಾಪಕ ಬೆಂಬಲ ಮತ್ತು ಶಕ್ತಿಯು ಸಹಕಾರಗಳಿರದಿದ್ದಲ್ಲಿ ಅವರು ಯಶಸ್ವಿಯಾಗುತ್ತಿರಲಿಲ್ಲ. ಪೊಲೀಸರು ಈ ವ್ಯವಸ್ಥೆಯನ್ನು ಕಂಡುಕೊಳ್ಳಲು ಸರ್ವಪ್ರಯತ್ನ ಮಾಡಬೇಕಾಯಿತು.

## ಪಕ್ಷ ಭೂಗತವಾದಾಗ

ಭೂಗತ ಪರಿಸ್ಥಿತಿಯಲ್ಲಿ ಸಹ ಕರಪತ್ರಗಳ ಪ್ರಕಟಣೆ ಮತ್ತು ಸಾಮೂಹಿಕ ಚಟುವಟಿಕೆಗಳನ್ನು ನಡೆಸಬೇಕಾಗಿತ್ತು ಹಾಗೂ ಸಾಮೂಹಿಕ ಹೋರಾಟಗಳನ್ನು ಸಂಘಟಿಸಬೇಕಾಗಿತ್ತು. ಇದನ್ನು ಭೂಗತರಾಗಿರುವ ಕೆಲವೇ ಸಂಗತಿಗಳು ಸಾಧಿಸಲಾಗುತ್ತಿರಲಿಲ್ಲ; ಕಾರ್ಮಿಕರು ಮತ್ತವರ ಕುಟುಂಬದವರ ವಿಶಾಲವಾದ ಜಾಲದಿಂದ ಮಾತ್ರವೇ ಇದನ್ನು ಸಾಧಿಸಲಾಯಿತು

10ನೇ ಪುಟಕ್ಕೆ

# ಶಾಂತಾರಾಮಪೈ ನಗರದಲ್ಲಿ ಎ.ಐ.ಟಿ.ಯು.ಸಿ. ಅಧಿವೇಶನ

**ಬೆಂಗಳೂರಿನಲ್ಲಿ ಜರಗುವ ಎಐಟಿಯುಸಿಯ 32ನೇ ಅಧಿವೇಶನದ ಸ್ಥಳಕ್ಕೆ 'ಶಾಂತಾರಾಮ ಪೈ ನಗರ'ವೆಂದು ಹೆಸರಿಸಿರುವುದು ಸೂಕ್ತವೂ ರಾಜ್ಯದ ಕಾರ್ಮಿಕ ವರ್ಗದ ಹಿರಿಯ ನಾಯಕರಾಗಿದ್ದವರೊಬ್ಬರಿಗೆ ಸಲ್ಲಿಸಿದ ಗೌರವವೂ ಆಗಿದೆ.**



ಕಾ|| ಎ. ಶಾಂತಾರಾಮ ಪೈಯವರ ಜೀವನವೆಂಬುದು ಹೋರಾಟ ತ್ಯಾಗಗಳ ಜೀವನ. ಅವಿಶ್ರಾಂತ ದುಡಿಮೆಯ, ಕಷ್ಟ ಸಹಿಷ್ಣುತೆಗಳ ಜೀವನ. ಆದರೆ ಕೇವಲ 46 ವರುಷ ಪ್ರಾಯದಲ್ಲೇ ಅಕಸ್ಮಾತ್ ಹೃದಯಾಘಾತಕ್ಕೊಳಗಾಗಿ (2-7-1967) ಅವರು ನಿಧನರಾದುದು ರಾಜ್ಯದ ದುಡಿಯುವ ವರ್ಗಕ್ಕೆ, ಕಮ್ಯೂನಿಸ್ಟ್ ಚಳವಳಿಗೆ ತುಂಬಲಾರದಷ್ಟು ನಷ್ಟವಾಯಿತು.

ಅವರು ಜನಿಸಿದ್ದು ಮಧ್ಯಮ ವರ್ಗದ ಕುಟುಂಬವೊಂದರಲ್ಲಿ. ಮಂಗಳೂರಿನ ಗಣಪತಿ ಹೈಸ್ಕೂಲ್, ಸೈಂಟ್ ಎಲೋಸಿಯಸ್ ಕಾಲೇಜುಗಳಲ್ಲಿ ಶಿಕ್ಷಣ 1938–39ರ ಕಾಲದಲ್ಲಿ ಉಜ್ವಲ ಭವಿಷ್ಯವನ್ನು ಹುಡುಕಿಕೊಂಡು ಮುಂಬಯಿಗೆ ಪಯಣ. ಅಲ್ಲಿ ಸ್ವತಃ ದ. ಕನ್ನಡ ಜಿಲ್ಲೆಯವರಾದ ಹಿರಿಯ ನಾಯಕ ಎಸ್. ವಿ. ಘಾಟೆಯವರ ಸಂಪರ್ಕ.

ಆಗಲೇ ದೇಶದ ಸ್ವಾತಂತ್ರ್ಯ ಹೋರಾಟ ಉಗ್ರರೂಪವನ್ನು ತಾಳಿತ್ತು. ದಲಿತ ಜನರ ಬಗ್ಗೆ ಅನುಕಂಪ, ಸಹಾನುಭೂತಿ, ದೇಶದ ಸ್ವಾತಂತ್ರ್ಯ, ವಿಮೋಚನೆಗಳ ಬಗ್ಗೆ ಇದ್ದ ಗಾಢಾಸಕ್ತಿ ಅವರಿಗೆ ಮೂಡಿತು. ಪಾರತಂತ್ರ್ಯದಿಂದ ಬಳಲುತ್ತಿದ್ದ ದೇಶದ ದುಡಿವ ಜನಜೀವನವನ್ನು ಕಂಡ ಶಾಂತಾರಾಮ ಪೈಯವರು ತನ್ನ ಸ್ಥಾನ ಸ್ವಂತ ಸುಖದಲ್ಲಿಲ್ಲ, ದೀನದಲಿತರ, ಶೋಷಿತರ ಹಿತರಕ್ಷಣೆಯಲ್ಲಿದೆ ಎಂಬುದನ್ನು ಅರಿತುಕೊಂಡರು. ಇಂತಹ ಹಿತರಕ್ಷಣೆಗೊಂದು ತತ್ವವಿದೆ, ಸಿದ್ಧಾಂತವಿದೆ ಅದು ಮಾರ್ಕ್ಸ್‌ವಾದ ಎಂಬುದವರಿಗೆ ಖಚಿತವಾಯಿತು.

ಅಂದಿನ ಕಾಲದಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಪ್ರತಿಬಂಧವಿತ್ತು, ಕಮ್ಯೂನಿಸ್ಟ್ ಪಕ್ಷವನ್ನು ಸೇರುವುದು ಇಂದಿನಷ್ಟು ಸುಲಭವಿರಲಿಲ್ಲ. ಪಾರ್ಟಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ಮನೋಧಾರ್ಢ್ಯ ಬೇಕಿತ್ತು. ಆಗ ಕಮ್ಯೂನಿಸ್ಟ್ ಪಕ್ಷದ ಸದಸ್ಯನೆಂದು ಸಂದೇಹ ಬಂದರೆ ಸಾಕು ಬಂಧಿಸಿ ಚಿತ್ರಹಿಂಸೆ ಕೊಡಲಾಗುತ್ತಿತ್ತು. ಆದರೂ ಈ ಕೆಚ್ಚೆದೆಯ ಯುವಕ ಅದನ್ನೆಲ್ಲ ಗಣಿಸದೆ ತನಗೆ ಸರಿಯೆಂದು ಕಂಡ ಹಾದಿ ಹಿಡಿದರು.

ಆಗ ಭೂಗತವಾಗಿದ್ದ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಅವರು ತನ್ನ ನಿಷ್ಠೆ, ಕಾರ್ಯತತ್ಪರತೆಗಳಿಂದ ಇಡಿಯ ಪಾರ್ಟಿ ಕೇಂದ್ರ ನಾಯಕತ್ವದ ವಿಶ್ವಾಸವನ್ನು ಗಳಿಸಿದರು, ಇಲ್ಲವಾದರೆ ಪಾರ್ಟಿಯ ಆಗಿನ ಕೇಂದ್ರ ಸಮಿತಿ, ಪಕ್ಷದ ಕೇಂದ್ರ ಕಾರ್ಯಾಲಯದಲ್ಲಿ ಇವರಿಗೆ ದುಡಿಯುವ ಅವಕಾಶ ನೀಡುತ್ತಿರಲಿಲ್ಲ. ಏಕೆಂದರೆ ಕೇಂದ್ರ ಕಾರ್ಯಾಲಯದ ಅಂತರಂಗ ಸ್ವಲ್ಪ ಬಹಿರಂಗವಾದರೆ ಹತ್ತಾರು ನಾಯಕರ ಜೀವಗಳಿಗೆ ಅಪಾಯವಿತ್ತು.

ಅಂದು ಅವರನ್ನು ಪಾರ್ಟಿಯಲ್ಲಿ 'ಬಚ್ಚಾ' ಎಂಬ ಗುಪ್ತನಾಮದಿಂದ ಕರೆಯಲಾಗುತ್ತಿತ್ತು, ಪಾರ್ಟಿಕೇಂದ್ರದ ಲಿಖಿತ, ಗುಪ್ತ ಪತ್ರಗಳನ್ನು ದೇಶದ ಉದ್ದಗಲಕ್ಕೂ ತಲಪಿಸುವುದು ಅವರಿಗೆ ನೀಡಿದ ಕಾರ್ಯಭಾರ. ಇಂತಹ ಒಂದು ಪತ್ರ ಹೊರಗೆ ಬಿದ್ದರೆ ಇಡಿಯ ಪಾರ್ಟಿಗೇ ಗಂಡಾಂತರ ಬರುತ್ತಿತ್ತು. ಆದರೆ ಶಾಂತಾರಾಮ ಪೈಯವರ

## ಸಂಕ್ಷಿಪ್ತ ಜೀವನ ಚರಿತ್ರೆ

ಕಾರ್ಯಕುಶಲತೆ ನಿಷ್ಠೆ ಅಂತಹದು. ತನ್ನ ಜವಾಬ್ದಾರಿಯನ್ನು ಅವರು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುತ್ತಿದ್ದರು.

1942ರಲ್ಲಿ ಪಾರ್ಟಿಯ ಮೇಲಿನ ಪ್ರತಿಬಂಧ ತೆಗೆದುಹಾಕಿದಾಗ ಶಾಂತಾರಾಮ ಪೈಯವರನ್ನು ಪಾರ್ಟಿಯ ಕೇಂದ್ರ ದ. ಕ. ಜಿಲ್ಲೆಗೆ ಕಳುಹಿಸಿತು. ಅನಂತರದ 25 ವರುಷಗಳಲ್ಲಿ ಅವರು ಜಿಲ್ಲೆಯ ಜನತೆಗಾಗಿ, ದುಡಿಯುವ ವರ್ಗಕ್ಕಾಗಿ ಅಹರ್ನಿಶಿ ದುಡಿದರು. ದ. ಕನ್ನಡ ಜಿಲ್ಲೆಯ 25 ವರುಷಗಳ ಕಮ್ಯುನಿಸ್ಟ್ ಚಳವಳಿ, ಕಾರ್ಮಿಕ ಹೋರಾಟ, ಸಾಮಾಜಿಕ ಜೀವನಗಳ ಇತಿಹಾಸದಿಂದ ಶಾಂತಾರಾಮ ಪೈಯವರ ಹೆಸರು ಹಾಸುಹೊಕ್ಕಾಗಿದೆ.

ಸುಮಾರು ಅದೇ ಕಾಲಕ್ಕೆ ದ. ಕ. ಜಿಲ್ಲೆಯಲ್ಲಿ ಕಾರ್ಮಿಕ ಸಂಘಟನೆಗಳು ಆರಂಭದೆಸೆಯಲ್ಲಿದ್ದವು. ಅಲ್ಲಿ ಕಾರ್ಮಿಕ ಚಳವಳಿ ಆರಂಭವಾದುದೇ ಕೆಂಬಾವುಟವನ್ನು ಹಿಡಿದುಕೊಂಡು ಎಂಬುದನ್ನು ಮರೆಯಬಾರದು. ಆಗ ಇದ್ದುದು ಪ್ರೆಸ್, ಬೀಡಿ ನೇಕಾರರ ಸಂಘಟನೆಗಳು ಮಾತ್ರ. ಹಂಚಿನ ಕೆಲಸಗಾರರ ಸಂಘಟನೆ ಮೊಳಕೆಯೊಡೆಯುತ್ತಿತ್ತು. ಉಳಿದ ಕೈಗಾರಿಕೆಗಳ ಕಾರ್ಮಿಕರು ಅಸಂಘಟಿತರಾಗಿದ್ದರು.

ಬಿ. ವಿ. ಕಕ್ಕಿಲ್ಲಾಯರು ಆಗತಾನೇ ಕಾಲೇಜಿನಿಂದ ಹೊರಬಂದು ಕಮ್ಯೂನಿಸ್ಟ್ ಚಳವಳಿಯನ್ನು ಸೇರಿದ್ದರು. ಸಿಂಪ್ಸನ್-ಸೋನ್ಸ್, ಕೇಶವ ಕಾಮತ್ ಸಿ. ಕೆ. ಗೋವಿಂದನ್ ಈ ಎಲ್ಲ ಸಂಗಾತಿಗಳನ್ನು ಕೂಡಿಕೊಂಡ ಶಾಂತಾರಾಮ ಪೈಯವರು ತನ್ನ ಕ್ಷೇತ್ರದಲ್ಲಿ ತಲ್ಲೀನರಾದರು. ಅವರಿಗೆ ವಿಶ್ರಾಂತಿಯ ಪರಿಚಯವೇ ಇರಲಿಲ್ಲ; 1944ರಲ್ಲಿ ಮಂಗಳೂರಿನ 7000 ಮಂದಿ ಗೇರುಬೀಜ ಕಾರ್ಮಿಕರ ಸಂಘದ ಸ್ಥಾಪನೆ; 1946ರಲ್ಲಿ ಮುನಿಸಿಪಲ್ ಕೆಲಸಗಾರರ ಸಂಘದ ರಚನೆ, 1960ರಲ್ಲಿ ಕಾಫಿ ಕ್ಯೂರಿಂಗ್, ಏಲಕ್ಕಿ, ಅಡಿಕೆ ಕೆಲಸಗಾರರ ಸಂಘಟನೆ. ಇಷ್ಟೇ ಅಲ್ಲ ಪ್ರತಿಯೊಂದು ಕಾರ್ಮಿಕ ಸಂಘಟನೆಯಲ್ಲೂ ಹೋರಾಟಗಳಲ್ಲೂ ಅವರ ಪಾತ್ರ ಎದ್ದು ಕಾಣುತ್ತಿತ್ತು.

## ಬಂಧನ

1944ರ 'ಸ್ವಾತಂತ್ರ್ಯ ದಿನ' 1946 ಆದಿನ ಮದರಾಸು ಪ್ರಾಂತದ ಗವರ್ನರನ ವಿರುದ್ಧ ಮತಪ್ರದರ್ಶನ ನಡೆಸಿದ್ದಕ್ಕಾಗಿ ಆರಾರು ತಿಂಗಳ ಶಿಕ್ಷೆ. 1946ರಲ್ಲಿ ಸ್ಥಾನಬದ್ಧತೆ. 1947ರ ಸ್ವಾತಂತ್ರ್ಯ ದಿನದಂದು ಬಿಡುಗಡೆ.

ಸ್ವಾತಂತ್ರ್ಯಾನಂತರ ಪಕ್ಷದ ಕಾರ್ಯವ್ಯಾಪ್ತಿ ವಿಸ್ತಾರಗೊಂಡಿತು. ಆದರೆ ಮತ್ತೆ 6 ತಿಂಗಳೊಳಗೆ ಅವರು ಸೋನ್ಸ್ ಕಕ್ಕಿಲ್ಲಾಯ ಮತ್ತಿತರರೊಂದಿಗೆ ಭೂಗತರಾಗಬೇಕಾಯಿತು. 1948ರಲ್ಲಿ ಕಮ್ಯೂನಿಸ್ಟರನ್ನು ಬೇಟೆಯಾಡುತ್ತಿದ್ದಾಗ, ಎಲ್ಲ ವಿಧದ ದಬ್ಬಾಳಿಕೆ ನಡೆಯುತ್ತಿದ್ದಾಗ ಭೂಗತ ಜೀವನ ಅತ್ಯಂತ ಕಷ್ಟಕರವಾಗಿತ್ತು. ಮಂಗಳೂರಿನಲ್ಲಂತೂ ಅಂದು ಪೋಲಿಸರ ದಬ್ಬಾಳಿಕೆ ಹೇಳತೀರದಿತ್ತು. ದಿ| ಎಸ್. ಎನ್. ಹೊಳ್ಳರನ್ನು ಮಂಜೇಶ್ವರ ರೈಲ್ವೆಸ್ಟೇಶನಿನಲ್ಲಿ ಪೋಲಿಸರ ಬಂಧನದಿಂದ ತಪ್ಪಿಸಿಕೊಂಡು ಕಮ್ಯೂನಿಸ್ಟರು ಒಯ್ದಾದನಂತರವಂತೂ ಮಂಗಳೂರಲ್ಲಿ ಪೋಲಿಸ್ ರಾಜ್ಯವೇ ನಡೆದಿತ್ತು. ಆದರೂ ಶಾಂತಾರಾಮ ಪೈಯವರು ನಗರದ ನಡುವೆಯೇ ಇದ್ದು ಚಳವಳಿಗೆ ನಾಯಕತ್ವ ಕೊಡುತ್ತಿದ್ದರು. ಕೊನೆಗೆ ಬಂಧನ ತಪ್ಪಿ

10ನೇ ಪುಟಕ್ಕೆ

# ಹಿಂದಿನ ಅನುಭವಗಳು ಮತ್ತು ಮುಂದಿನ ಕರ್ತವ್ಯಗಳು

(9ನೇ ಪುಟದಿಂದ)

ನೂರಾರು ಕಾರ್ಮಿಕರ ಧೈರ್ಯ ಹಾಗೂ ಅವರ ಉನ್ನತ ಮಟ್ಟದ ಕ್ರಾಂತಿಕಾರಿ ರಾಜಕೀಯ ಪ್ರಜ್ಞೆಯಿಂದಾಗಿ ಪಕ್ಷವು ಇಂಥ ಸವಾಲಿನ ಪರಿಸ್ಥಿತಿಯಲ್ಲಿ ಕೆಲಸ ಮಾಡಲು ಸಾಧ್ಯವಾಯಿತು. ಭೂಗತ ಕೆಲಸದಲ್ಲಿ ಮಹಿಳೆಯರೂ ಒಳ್ಳೆಯ ಪಾತ್ರ ವಹಿಸಿದ್ದರೆಂಬುದನ್ನು ಗಮನಿಸ ಬೇಕಾಗಿದೆ. ಕಾರ್ಮಿಕರ ನಿರಕ್ಷರಿ ಪತ್ನಿಯರು ಮತ್ತು ತಾಯಂದಿರು ಪೊಲಿಸ್ ಬೇಹುಗಾರರಿಗೆ ಮಣ್ಣು ಮುಕ್ಕಿಸಿದ್ದುಂಟು. ಕಾರ್ಮಿಕವರ್ಗ ಕುಟುಂಬಗಳಲ್ಲಿ ಮ್ಯಾಕ್ಸಿಂ ಗೋರ್ಕಿಯವರ 'ತಾಯಿ' ಕಾದಂಬರಿಯ ಹಿಂದಿ-ಮರಾಠಿ ಅನುವಾದಗಳನ್ನು ಆಸಕ್ತಿಯಿಂದ ಓದುತ್ತಿದ್ದುದು ಆಕಸ್ಮಿಕವೇನಲ್ಲ.

ಯುದ್ಧಾನಂತರದ ಕಾಲದಲ್ಲಿ (1945-47) ನಡೆದ ಕಾರ್ಮಿಕವರ್ಗದ ಚಳವಳಿಯು ಅತ್ಯಂತ ಯಶಸ್ವಿಯಾಗಿತ್ತು. ಇದನ್ನು ಯುದ್ಧಾನಂತರದ ರಾಷ್ಟ್ರೀಯ ಚಳವಳಿಯಿಂದ ಬೇರ್ಪಡಿಸುವಂತಿಲ್ಲ. ಆದರೆ ಈ ಹೋರಾಟದಲ್ಲಿ ಕಾರ್ಮಿಕವರ್ಗವೇ ಮುಂಚೂಣಿಯಲ್ಲಿತ್ತೆಂಬುದನ್ನು ಅಲ್ಲಗಳೆಯಲಾಗದು.

ನೌಕಾದಳದ ದಂಗೆಯ (ಆರ್.ಐ.ಎನ್)ಕಾಲದಲ್ಲಿನಾವಿಕರು ಕೆಂಬಾವುಟ, ಕಾಂಗ್ರೆಸ್ ಬಾವುಟ ಮತ್ತು ಮುಸ್ಲಿಂ ಲೀಗ್‌ಗಳ ಬಾವುಟಗಳನ್ನು ಒಟ್ಟಿಗೆ ಏರಿಸಿದರು. ಮುಂಬೈನ ನಾಗರಿಕರು ಅತಿದೊಡ್ಡ ಪ್ರಮಾಣದಲ್ಲಿ ಬಂದರು ಕಟ್ಟೆಗೆ ಬಂದು ಸೇರಿದರು. ಹಾಗೂ ಪರೇಲ್, ಲಾಲ್‌ಬಾಗ್ ಮತ್ತು ಸೆವ್ರಿ ಪ್ರದೇಶಗಳಲ್ಲಿ ಶಸ್ತ್ರಸಜ್ಜಿತ ಬ್ರಿಟಿಶ್ ಸೈನಿಕರು ಹಾಗೂ ಕಾರ್ಮಿಕರ ನಡುವೆ ತೀವ್ರ ಘರ್ಷಣೆಗಳು ನಡೆದವು. ಈ ಘರ್ಷಣೆಗಳ ಮುಂಚೂಣಿಯಲ್ಲಿ ಕಮ್ಯೂನಿಸ್ಟರಿದ್ದರು; ಹುತಾತ್ಮರಾದ ನಮ್ಮ ಐದು ಸಂಗಾತಿಗಳಲ್ಲೊಬ್ಬರಾದ ಕಮಲ್ ಧೊಂಡೆ ಮೆಷಿನ್ ಗನ್ ಗುಂಡಿಗೆ ಬಲಿಯಾದರು.

## ಐಎನ್‌ಎ

ಸುಭಾಷ್ ಚಂದ್ರಬೋಸರ ಐಎನ್‌ಐ ಅಧಿಕಾರಿಗಳ ಬಂಧನ ಮತ್ತು ವಿಚಾರಣೆಯ ವಿರುದ್ಧವಾಗಿ ಕಲ್ಕತ್ತವು ಜ್ವಾಲಾಮುಖಿಯಂತೆ ಸಿಡಿದೆದ್ದಿತು. ಈ ಪ್ರತಿಭಟನೆಯು ಕ್ರಾಂತಿಕಾರಿ ಪ್ರಜಾಪ್ರಭುತ್ವವಾದಿ ಐಕ್ಯತೆ ಹಿಂದೂ ಮುಸ್ಲಿಂ ಐಕ್ಯತೆಗಳ ಪ್ರತೀಕವಾಗಿತ್ತು; ಮಹಿಳೆಯರೂ ಸೇರಿದಂತೆ ಕಲ್ಕತ್ತದ ಕಾರ್ಮಿಕ ವರ್ಗವು ಈ ಹೋರಾಟದ ಮುಂಚೂಣಿಯಲ್ಲಿತ್ತು.

ಪೊಲೀಸರುಮತ್ತುವಾಯುಪಡೆಯ ಚಾಲಕರ ಮುಷ್ಕರಗಳು ಎಲ್ಲೆಡೆಯಲ್ಲೂ ನಡೆದವು. ಉತ್ತರ ಪ್ರದೇಶ, ಬಿಹಾರ ಮುಂತಾದೆಡೆಗಳಲ್ಲಿ ನಡೆದ ಈ ಮುಷ್ಕರಗಳಲ್ಲಿ ಬಹುತೇಕವಾಗಿ ಕೆಂಬಾವುಟವನ್ನು ಏರಿಸಲಾಯಿತು. ಹಾಗೂ ನಮ್ಮ ಪಕ್ಷದ ಕಚೇರಿಗಳಿಗೆ ಬಂದು ಬೆಂಬಲ ಕೋರಲಾಯಿತು.

ಈ ಮಹಾನ್ ಕಾಲದ ಸ್ಫೂರ್ತಿದಾಯಕ ಚಿತ್ರವನ್ನು ಕೊಡಬಲ್ಲಂಥ ಲೇಖಕನೊಬ್ಬ ನಮಗೆ ಬೇಕಾಗಿದೆ. ಕ್ರಾಂತಿಕಾರಿ ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಪೊತೆಮ್ಕಿನ್ ದಂಗೆಯಿರುವಂತೆಯೇ ಭಾರತದ ನೌಕಾದಳದ ದಂಗೆಯೂ ಐತಿಹಾಸಿಕ ಸ್ಥಾನ ಪಡೆಯಬೇಕಾಗಿದೆ.

ನಾನು ನಿರೂಪಿಸುತ್ತಿರುವುದು ಕೇವಲ ನೆನಪುಗಳಲ್ಲಿ ಮೂಲಕ. ಭಾರತಕ್ಕೆ 1947ರಲ್ಲಿ ಸ್ವಾತಂತ್ರ್ಯ ಬಂತು, ಆದರೆ ರಾಷ್ಟ್ರೀಯ ಸ್ವಾತಂತ್ರ್ಯದ ಸಾಧನೆಯ ಮೂಲಕ ಭಾರತದ ಕ್ರಾಂತಿ ನಿಂತು ಹೋಗಿದೆಯೆಂಬುದೂ ಅಷ್ಟೇ ಸತ್ಯ. 1948-51ರ ಕಾಲದಲ್ಲಿ ನಮ್ಮ ಅತಿಸರಳ ತಿಳುವಳಿಕೆಯಿಂದಾಗಿ ನಾವುಈ ಕ್ರಾಂತಿಯನ್ನುಆದರ ಐತಿಹಾಸಿಕ ಮುಕ್ತಾಯಕ್ಕೆ ಕೊಂಡೊಯ್ಯಲು ವಿಫಲರಾದೆವು. ಆದರೆ ಈ ಕರ್ತವ್ಯ ಇನ್ನೂ ಉಳಿದಿದೆ. ಆದನ್ನು ನಿರ್ವಹಿಸಬೇಕೆಂಬುದರಲ್ಲಿ ಎರಡು ಅಭಿಪ್ರಾಯಗಳಿರಲಾರದು.

ಈ ಕರ್ತವ್ಯವು ದೊಡ್ಡರೀತಿಯದೆಂಬುದು ನನಗೆ ತಿಳಿದಿದೆ. ಹೊಸ ಪರಿಸ್ಥಿತಿಯಲ್ಲಿ ಅವು ಅಸಾಮಾನ್ಯ ಸ್ವರೂಪದ್ದು, ಜಟಿಲವಾದದು ನಮ್ಮ ಪ್ರಯಾಣ ದೀರ್ಘಕಾಲದ್ದಾಗಿದೆ ; ತಪ್ಪುಗಳು, ವೈಫಲ್ಯಗಳು ಮತ್ತು ಹಿಂಜರಿತಗಳು ಸಂಭವನೀಯ. ತಪ್ಪುಗಳನ್ನು ಮಾಡದಿದ್ದಲ್ಲಿ ಯಾರಾದರೂ ಕಲಿಯಲು ಅಥವಾ ಮುನ್ನಡೆಯಲು ಅಸಾಧ್ಯ. ಆದರೆ ಲೆನಿನ್ ಹೇಳಿರುವಂತೆ 'ರಷ್ಯವು ದೊಡ್ಡಪ್ರಮಾಣದ ಸಂಕಷ್ಟ, ಪ್ರಯೋಗ, ತಪ್ಪು, ಶೋಧನೆ ಮತ್ತು ನಿರಾಸೆಗಳ ಮೂಲಕ ಮಾರ್ಕ್ಸ್‌ವಾದವನ್ನು ಸಾಧಿಸಿತು' ಕಾರ್ಮಿಕವರ್ಗವು ತನ್ನ ಐತಿಹಾಸಿಕ ಗುರಿಯನ್ನುಮುಟ್ಟುವುದು ಹೀಗೆಯೇ. ಇದೇ ತಿಳುವಳಿಕೆಯಿಂದ ನಾವು ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ. ಎಡ-ಪ್ರಭುತ್ವವಾದಿ ಐಕ್ಯತೆಗೆ ಶಕ್ತಿ, ಭದ್ರತೆಗಳನ್ನು ಕೊಟ್ಟು ದೇಶಕ್ಕೆ ಉಜ್ವಲ ಭವಿಷ್ಯದ ಮುನ್ನೋಟವನ್ನು ತೆರೆಯಲು ಇದರಿಂದ ಮಾತ್ರ ಸಾಧ್ಯ.

# ಎ. ಶಾಂತಾರಾಮ ಪೈ

(9ನೇ ಪುಟದಿಂದ)

ಸಲು ಕೆಲ ದಿನಗಳ ಕಾಲ ಅವರೂ ಕಕ್ಕಿಲ್ಲಾಯರೂ ಜಿಲ್ಲೆಯಿಂದ ಹೊರಗಿರಬೇಕೆಂದು ಪಾರ್ಟಿಯು ತೀರ್ಮಾನಿಸಿತು. ಅದರಂತೆ ಕಡೂರು ಹಾದಿಯಲ್ಲಿ ಬೆಂಗಳೂರಿಗೆ ತೆರಳುತ್ತಿದ್ದಾಗ ಚಿಕ್ಕಮಗಳೂರಲ್ಲಿ ಅವರ ಬಂಧನವಾಯಿತು. ರಾತ್ರಿ ಲಾಕಪ್ ನಿಂದ ಅವರು ತಪ್ಪಿಸಿಕೊಂಡರು. ಆದರೆ ಪುನಃ ಬಂಧಿಸಲ್ಪಟ್ಟು ವೆಲ್ಲೂರು ಜೇಲಿನಲ್ಲಿ ಸ್ಥಾನಬದ್ಧತೆಯಲ್ಲಿಡಲ್ಪಟ್ಟರು.

ವೆಲ್ಲೂರು ಜೇಲಿನಲ್ಲೂ ಇತರ ಕಮ್ಯೂನಿಸ್ಟ್ ಸ್ಥಾನಬದ್ಧ ಕೈದಿಗಳೊಂದಿಗೆ ಸೇರಿ ಹೋರಾಟ. ಆಗ ಅಲ್ಲಿ ನಡೆದ ಅನ್ನಸತ್ಯಾಗ್ರಹಗಳೆಷ್ಟು ! 42 ದಿನಗಳ ಕಾಲವೂ ಅನ್ನಸತ್ಯಾಗ್ರಹ. ಅಷ್ಟರಲ್ಲಿಯೇ ರಣದಿವೆ ನಾಯಕತ್ವದ ನೀತಿ ತಪ್ಪೆಂದು ದೇಶದಲ್ಲೆಲ್ಲಾ ಸ್ಪಷ್ಟವಾದಾಗ ಇವರೂ ಹಾಗೆಯೇ ಸಾರಿದರು. 1950ರಲ್ಲಿ ಬಿಡುಗಡೆ. 1951ರ ತನಕ ಅರೆ ಅಜ್ಞಾತವಾಸ. 1951ರಲ್ಲಿ ಪುನಃ ಪಾರ್ಟಿಯಲ್ಲಿ ತನ್ನ ಸ್ಥಾನವನ್ನು ಅವರು ಸೇರಿಕೊಂಡರು.

## ಸ್ವಾತಂತ್ರ್ಯಾನಂತರ

1951ರನಂತರ ಪಾರ್ಟಿ, ಎಐಟಿಯುಸಿಗಳ ಹೊಣೆ ಹೆಚ್ಚಿತು. ನಂತರ ಹೋರಾಟಗಳ ಪರ್ವಕಾಲ. 1952ರ ಬಂದರ ಕೆಲಸಗಾರರ ಮುಷ್ಕರ 1953ರ ಹಂಚಿನ ಕಾರ್ಮಿಕರಧೀರ ಹೋರಾಟ, 1954ರಲ್ಲಿ ನಡೆದ ಗೇರುಬೀಜ ಕಾರ್ಮಿಕರ ಅಪ್ರತಿಮ ಚಳವಳಿ, ಅದಕ್ಕಾಗಿ ಶಾಂತಾರಾಮ ಪೈಯವರು ನಡೆಸಿದ ಆಮರಣ ಉಪವಾಸ ಇವು ಕೆಲವು ಉದಾಹರಣೆಗಳಷ್ಟೆ. ಈ ಆಮರಣ ಉಪವಾಸ 4ನೇ ದಿನಕ್ಕೆ ಮುಂದರಿದಾಗ ಸಮಗ್ರ ಮಂಗಳೂರಿನ ಜನತೆಯೇ ಕೆರಳಿತ್ತು. ಸಹಸ್ರ ಸಹಸ್ರ ಜನರು ವರ್ಗ ಭೇದಗಳಿಲ್ಲದೆ ಈ ಉಪವಾಸ ಸತ್ಯಾಗ್ರಹ ನಡೆಯುವಲ್ಲಿಗೆ ಬಂದು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದರು ಕೊನೆಗೆ ಜಿಲ್ಲಾಧಿಕಾರಿಗಳೇ ಸ್ವತಃ ಬಂದು ಈ ಉಪವಾಸ ನಿಲುಗಡೆಗೆ ಸೂತ್ರವೊಂದನ್ನು ಮುಂದಿಡಬೇಕಾಯಿತು.

ಇನ್ನು ಸಾರ್ವಜನಿಕ ನಾಯಕರಾಗಿ ಅವರು ಜಿಲ್ಲೆಯಲ್ಲೇ ಪ್ರಖ್ಯಾತರಾದರು. 1946ರ ರೇಶನ್ ಕಡಿತ ವಿರೋಧಿ ಚಳವಳಿ 1948ರಲ್ಲಿ ಗಾಂಧೀಜಿ ಕೊಲೆಯ ಇದಿರಾಗಿ ನಡೆದ ಸಭೆ 1955ರ ಗೋವಾ ವಿಮೋಚನಾ ಹೋರಾಟ, 1955ರ ಆಹಾರ ಚಳವಳಿ, 1960ರ ಸಿಟಿ ಬಸ್ ದರ ಏರಿಕೆ ವಿರುದ್ಧ ಹೋರಾಟ,1962ರ ಆಹಾರ ಸಮರ, ಚೀನೀ ಆಕ್ರಮಣದ ವಿರುದ್ಧ ಜನ ಜಾಗೃತಿ,1963ರಮಹಾಮನವಿ, 1964ರ ಆಹಾರ ಸತ್ಯಾಗ್ರಹ, 1966ರಮಂಗಳೂರು ಬಂದ್ ಹೀಗೆ ಬರೆದರೆ ಅದೇ ಪುಟಗಟ್ಟಲೆಯಾದೀತು. ಇವುಗಳಲ್ಲೆಲ್ಲ ಶಾಂತಾರಾಮ ಪೈ ಪ್ರಧಾನ ಪಾತ್ರ ವಹಿಸಿದವರಲ್ಲಿ ಒಬ್ಬರು.

## ಜನಪ್ರಿಯತೆ

12ವರುಷಗಳ ಕಾಲ ಎಡೆ ಬಿಡದೆ ಅವರು ಮಂಗಳೂರು ನಗರ ಸಭಾ ಸದಸ್ಯರಾಗಿದ್ದರು.

ಪ್ರೊಡಕ್ಟಿವಿಟಿ ಕೌನ್ಸಿಲ್, ರಾಜ್ಯ ಕಾರ್ಮಿಕ ಸಲಹಾ ಸಮಿತಿ, ಇಎಸ್‌ಐ ಸಲಹಾ ಸಮಿತಿ, 'ಇಎಸ್‌ಐ ಕೋರ್ಟಿನ ಜ್ಯೂರಿ ಇವುಗಳ ಸದಸ್ಯರಾಗಿ ಎಸ್.ಕೆ. ಟಿ.ಯು.ಸಿ. ಅಧ್ಯಕ್ಷರಾಗಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ. ಪಕ್ಷದ ರಾಜ್ಯ ಮಂಡಲಿಯ ಸದಸ್ಯರಾಗಿ, ಕೆಪಿಟಿಯುಸಿ ಕೋಶಾಧಿಕಾರಿಯಾಗಿ, ಎಐಟಿಯುಸಿ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಇರುವಾಗಲೇ ಸಿಡಿಲೆರಗಿದಂತೆ ಎರಗಿತ್ತು ಅವರ ಸಾವು. ಹೃದಯಾಘಾತದಲ್ಲಿ ಎರಡೇ ತಾಸುಗಳೊಳಗೆ ಅವರು ಕೊನೆಯುಸಿರನ್ನೆಳೆದರು. ಅವರ ಜನಪ್ರಿಯತೆಗೆ ಅವರ ಶವಯಾತ್ರೆಯೇ ಸಾಕ್ಷಿ. ಇಡಿಯ ಮಂಗಳೂರು ನಗರವೇ ಜಾತಿ, ಮತ ರಾಜಕೀಯ ಭೇದವಿಲ್ಲದೆ ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಿತು.

ಸದಾ ಹಸನ್ಮುಖಿ, ಆತ್ಮ ವಿಶ್ವಾಸದ ನಿರ್ಮಲ ನಗೆ, ಎಲ್ಲರೊಡನೆಯೂ ಆತ್ಮೀಯತೆ, ಬಿಚ್ಚು ಮನಸ್ಸು, ಮಾನವೀಯ ಅನುಕಂಪ. ಆದರೆ ಎಂತಹ ಇದಿರಾಳಿಯನ್ನೂ ಇದಿರಿಸಬಲ್ಲ ಎದೆಗಾರಿಕೆ, ತತ್ವನಿಷ್ಠೆ, ಪ್ರಾಮಾಣಿಕತೆ, ಕಾರ್ಯತತ್ಪರತೆ, ಅವಿಶ್ರಾಂತ ದುಡಿಮೆ, ಶಿಸ್ತು, ದೃಢತೆಗಳೆಂಬ ಕಮ್ಯೂನಿಸ್ಟ್ ಗುಣಗಳೇ ಶಾಂತಾರಾಂ ಪೈಯವರ ಜನಪ್ರಿಯತೆಗೆ ಸಾಕ್ಷಿ.

ಈಗ ಕಮ್ಯೂನಿಸ್ಟ್ ಪಕ್ಷದ ಕಛೇರಿ ಇರುವ ರಸ್ತೆಗೆ ಮಂಗಳೂರು ನಗರ ಸಭೆ 'ಎ. ಶಾಂತಾರಾಮ ಪೈ ರಸ್ತೆ' ಎಂಬ ನಾಮಕರಣ ಮಾಡಿ ಗೌರವಿಸಿದೆ.

1955ರಲ್ಲಿ ಇವರು ವಿವಾಹವಾದರು. ಪತ್ನಿ ಮತ್ತು ಇಬ್ಬರು ಮಕ್ಕಳು ಅವರಿಗಿದ್ದಾರೆ.

ಎಐಟಿಯುಸಿಯ 32ನೇ ಅಧಿವೇಶನದ ಈ ಸಂದರ್ಭದಲ್ಲಿ ದೇಶದ ಕಾರ್ಮಿಕ ವರ್ಗ ಗೌರವದಿಂದ ನೆನೆಸುವ ಹೆಸರು ಕಾ। ಶಾಂತಾರಾಮಪೈ.

OLD FRIENDS TO KEEP

Socialism PRINCIPLES. PRACTICE. PROSPECTS.
Theoretical Monthly
Three Years Rs. 30.00

NEWS from UKRAINE
Illustrated Weekly
Three Years Rs. 35.00

OLYMPIC PANORAMA
Annual Rs. 25.00
Three Years Rs. 50.00

Soviet Military Review
Illustrated Monthly
Three Years Rs. 48.00

STP Illustrated Monthly
SOCIALISM: THEORY AND PRACTICE
Three Years Rs. 30.00

Far Eastern Affairs
Quarterly Journal
Annual Rs. 26.00
Three Years Rs. 52.00

FOREIGN TRADE
Monthly Trade journal
Annual Rs. 125.00
Three years Rs. 250.00

XX Century and Peace
Monthly Magazine
Three years Rs. 20.00

SOCIAL SCIENCES
Quarterly Journal
Annual Rs. 36.00
Three years Rs. 72.00

SPORT in the USSR
Sports Monthly
Three Years Rs. 35.00

Asia Africa today
Bi-monthly journal
Three years Rs. 40.00

muslims of the Soviet East
Annual Rs. 8.00
Three Years Rs. 16.00

For non receipt of Magazines or Change of Address or any other discrepancy write to the agency concerned

Admark

GIFT :- SUBSCRIBE NOW AND OBTAIN A FULL-SIZE MULTI-COLOURED CALENDAR FOR THREE YEARS SUBSCRIBERS ONLY

SUBSCRIBE TO SOVIET PERIODICALS NOW WITH

NAVAKARNATAKA PUBLICATIONS (P) LTD., B. R. C. Complex, S. C. Road, Bangalore-560 009. MAGAZINE CENTRE, B. V. K. Iyengar Road, Bangalore-550 003.

# ಕರ್ನಾಟಕದ ಕಾರ್ಮಿಕವರ್ಗ ತನ್ನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ಈಡೇರಿಸಲಿದೆ

(6ನೇ ಪುಟದಿಂದ)

ಈ ಹೋರಾಟದ ಕಾಲದಲ್ಲೇ ಕಾಂ| ಗೋಪಿ ಸಮರಶೀಲ ನಾಯಕನಾಗಿ ಮುಂದೆ ಬಂದುದು. ಅವರನ್ನು ಕೆಲಸದಿಂದ ವಜಾ ಮಾಡಲಾಯಿತು. ನಂತರ ಗೋಪಿಯವರು ಟ್ರೇಡ್ ಯೂನಿಯನ್ನಿನ ಪೂರ್ಣಕಾಲಕಾರ್ಯಕರ್ತರಾದರು, ಬಳಿಕ ಎಐಟಿಯುಸಿ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದರು. ಆದರೆ ಅಪಘಾತವೊಂದರಲ್ಲಿ ಸಿಲುಕಿ ಅವರು ಎಳೆಯ ಪ್ರಾಯದಲ್ಲೇ ನಿಧನರಾದರು.

ಇದೇವೇಳೆ ವೇತನ ಪರಿಷ್ಕರಣಕ್ಕಾಗಿ ಎಐಟಿಯುಸಿ ನಾಯಕತ್ವದಲ್ಲಿ 15 ಸಾವಿರ ಮಂದಿ ಜವುಳಿ ಗಿರಣಿ ಕಾರ್ಮಿಕರು ಭಾರಿ ಮತಪ್ರದರ್ಶನವನ್ನು ನಡೆಸಿದರು.

## ಬೆಂಗಳೂರು ಬಂದ್

ತಮ್ಮ ತುಟ್ಟಿಭತ್ತೆ ಇತ್ಯಾದಿಗಳಿಗಾಗಿ ಕಾರ್ಮಿಕರು ತಮ್ಮ ಯೂನಿಯನ್‌ಗಳಡಿಯಲ್ಲಿ ಹೋರಾಡುವುದು ಸಾಮಾನ್ಯ. ಆದರೆ ಎಲ್ಲ ವಿಭಾಗದ ಜನರಿಗೂ ಇಡಿಯ ದೇಶಕ್ಕೂ ಮುಖ್ಯವಾದ ನಿರ್ದಿಷ್ಟ ರಾಜಕೀಯ ಪ್ರಶ್ನೆಗಳಲ್ಲಿ ಹೋರಾಟ ಹೂಡುವಷ್ಟಕ್ಕೆ ಅವರಿನ್ನೂ ಬಂದಿಲ್ಲ. ಆದರೂ 1973ರಲ್ಲಿ ಸುಮಾರು 50ಸಾವಿರಕ್ಕೂ ಮಿಕ್ಕಿ ಕೆಲಸಗಾರರು ಬೆಂಗಳೂರು ಬಂದ್ ಆಚರಿಸಿದರು ; ವಿಧಾನಸೌಧಕ್ಕೆ ತೆರಳಿ ಮತಪ್ರದರ್ಶನ ನಡೆಸಿದರು, ಅಲ್ಲಿ ಅವರಿಗೆ ದೊರೆತುದು ಲಾಠಿ ಪ್ರಹಾರ ಮತ್ತು ಅಶ್ರುವಾಯು. ಅದು ಬೆಲೆಗಳು ಒಂದೇ ಸಮನೆ ಏರುತ್ತಿದ್ದ ಕಾಲ. ಆ ಸಮಯದಲ್ಲಿ ಕೆಲಸಗಾರರು ಬೆಲೆ ಏರಿಕೆಯ ವಿರುದ್ಧ ನಡೆಸಿದ ಹೋರಾಟ ಎಲ್ಲ ವಿಭಾಗಗಳ ಜನರ ಶ್ಲಾಘನೆಗೆ ಪಾತ್ರವಾಗಿತ್ತು.

ಇನ್ನೊಂದು ರಾಜಕೀಯ ವಿಚಾರಕ್ಕಾಗಿ ದುಡಿಯುವ ಜನರು ಹೋರಾಟಕ್ಕಿಳಿದುದೆಂದರೆ ಕರ್ನಾಟಕ ಏಕೀಕರಣಕ್ಕಾಗಿ. ಸುಮಾರು 1955ರ ಕಾಲದಿಂದಲೂ ಕರ್ನಾಟಕ ಪ್ರಾಂತೀಕರಣ ಸಮಿತಿಯಲ್ಲಿ ಎಐಟಿಯುಸಿ ಕ್ರಿಯಾಶೀಲ ಪಾತ್ರವನ್ನು ವಹಿಸಿತ್ತು. ಈ ಹೋರಾಟದ ಕೇಂದ್ರವಾಗಿದ್ದ ಹುಬ್ಬಳ್ಳಿಯ ಸಮಸ್ತ ಕಾರ್ಮಿಕ ವರ್ಗವೇ ಈ ಚಳವಳಿಯಲ್ಲಿ ಭಾಗವಹಿಸಿತ್ತು. ಕ್ರೂರವಾದ ಮರ್ದನ ದಬ್ಬಾಳಿಕೆಗಳಿಗೆ ಒಳಗಾಗಿತ್ತು.

## 1975 ಮತ್ತು ನಂತರ

1975ರಲ್ಲಿ ತುರ್ತು ಪರಿಸ್ಥಿತಿಯು ಜಾರಿಯಾಯಿತು, ಇದು ಕಾರ್ಮಿಕರ ಚಳವಳಿ ಮತ್ತು ಮುಷ್ಕರದ ಹಕ್ಕುಗಳನ್ನು ಹೆಚ್ಚು ಕಡಿಮೆ ಕಸಿದುಕೊಂಡಿತ್ತು. ಟ್ರೇಡ್ ಯೂನಿಯನ್ ಹಕ್ಕುಗಳನ್ನು ಹತ್ತಿಕ್ಕಲಾಗಿತ್ತು. ಆದರೆ ಕರ್ನಾಟಕದಲ್ಲಿ ಎಐಟಿಯುಸಿ, ಮುಷ್ಕರವನ್ನು ನಡೆಸದೇ ಇರಲಿಲ್ಲ, ಇಲ್ಲಿ ಹಲವಾರು ಮುಷ್ಕರಗಳು ನಡೆದವು. ಟಿ.ಆರ್ ಮತ್ತು ಚಂದ್ರಾ ಮಿಲ್‌ನ ಕಾರ್ಮಿಕರು 66 ದಿನಗಳ ಮುಷ್ಕರ ನಡೆದುದೇ ಆ ದಿನಗಳಲ್ಲಿ. ಬೋನಸ್ ಕಡಿತದ ವಿರುದ್ಧ ಒಂದು ದಿನದ ಅನ್ನ ಸತ್ಯಾಗ್ರಹ ಹೆಚ್ಚು ಕಡಿಮೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನಡೆದಿತ್ತು. ಹಟ್ಟಿಯ ಚಿನ್ನದ ಗಣಿ ಕಾರ್ಮಿಕರು ಬೋನಸಿಗಾಗಿ ಹೋರಾಟ ನಡೆಸಿದರು, ಪರಿಣಾಮವಾಗಿ ಇಬ್ಬರು ಕಾರ್ಮಿಕರು ಕೊಲ್ಲಲ್ಪಟ್ಟರು.

ತುರ್ತು ಪರಿಸ್ಥಿತಿಯ ಕಾಲದಲ್ಲಿ ನಾವು ಯಾವ ಯೂನಿಯನ್‌ಗಳನ್ನೂ ಕಳೆದುಕೊಂಡಿಲ್ಲ ಎಂಬುದು ಸತ್ಯ. ಆದರೆ ತುರ್ತು ಪರಿಸ್ಥಿತಿಯ ನಂತರ ಕೆಲವು ಮುಖ್ಯ ಯೂನಿಯನ್‌ಗಳು ನಮ್ಮ ಕೈ ತಪ್ಪಿ ಹೋದವು. ಬಿಎಚ್ ಇಎಲ್‌ನಲ್ಲಿ ಅಲ್ಪ ಮತಗಳಿಂದ ನಾವು ಸೋತೆವು. ಅದೇ ರೀತಿ ಮೈಕೋ ಮತ್ತು ಐಟಿಸಿಗಳಲ್ಲಿ ಕೂಡಾ. ಹರಿಹರದಲ್ಲಿ ಪಾಲಿ ಫೈಬರ್ ಯೂನಿಯನ್ ಮತ್ತು ಕಿರ್ಲೋಸ್ಕರ್ ಯೂನಿಯನ್‌ಗಳು ನಮ್ಮ ಕೈ ತಪ್ಪಿ ಹೋದವು. ಹುಬ್ಬಳ್ಳಿಯಲ್ಲಿ ಎ.ಕೆ. ಇಂಡಸ್ಟ್ರೀಸ್ ಮತ್ತು ಕೆಲವು ಇಂಜೀನಿಯರಿಂಗ್ ಘಟಕಗಳ ಸಂಘಟನೆಗಳೂ ಬೇರೆಯವರ ನಾಯಕತ್ವದಡಿ ಹೋದವು. ಬೆಂಗಳೂರಿನ ಸ್ಟಾಂಪ್ ಶಾಲೆ ಸೋಮಪ್ಪ ನೌಕರರ ಸಂಘ, ಮೈಸೂರಿನ ಐಡಿಯಲ್ ಜಾವಾ ಮುಂತಾದ ಸಂಘಗಳು ಎಐಟಿಯುಸಿಯ ಕೈತಪ್ಪಿ ಹೋದವು, ಇವಕ್ಕೆಲ್ಲ ಏನು ಕಾರಣ? ನಮಗೆ ಹಿನ್ನಡೆ ಏಕಾಯಿತು? ಎಂಬುದನ್ನು ವಿವರಿಸಲು ಹೋಗುವುದು ಈ ಲೇಖನದ ಉದ್ದೇಶವಲ್ಲ. ಇವನ್ನು ಚರ್ಚಿಸಬೇಕು, ಕಾರಣ ತಿಳಿಯಬೇಕು ಎಂಬುದು ನಿಜ. ಆದರೆ ಅದೇ ವೇಳೆ ಈ ಅವಧಿಯಲ್ಲಿ ಎಐಟಿಯುಸಿ ಬೆಳೆದಿಲ್ಲ ಎಂಬುದು ಇದರರ್ಥವಲ್ಲ. ಬದಲಿಗೆ ಕೆಲವು ಯೂನಿಯನ್‌ಗಳು ನಮ್ಮಿಂದ ಬಿ.ಎಂ.ಎಸ್‌ಗೊ ಸೀಟೂಗೂ ಹೋಗಿದ್ದರೆ ಆ ಸಂಘಟನೆಗಳ ಹಲವಾರು ಯೂನಿಯನ್‌ಗಳು ಎಐಟಿಯುಸಿ ನಾಯಕತ್ವವನ್ನು ಸ್ವೀಕರಿಸಿವೆ. ಉದಾಹರಣೆಗಾಗಿ ಬೆಂಗಳೂರಿನ ಇಂಜಿನಿಯರಿಂಗ್ ಕೈಗಾರಿಕೆ, ಹಾಗೂ ಜವುಳಿ ಕೈಗಾರಿಕೆ ; ಚಿತ್ರದುರ್ಗದ ಹಲವಾರು ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಎಐಟಿಯುಸಿ ಮುಖ್ಯ ಸಂಘಟನೆಯಾಗಿದೆ. ಪಿಡಬ್ಲ್ಯುಡಿ ಕೆಲಸಗಾರರ ಪ್ರಾತಿನಿಧಿಕ ಫೆಡರೇಶನ್ ಎಐಟಿಯುಸಿಯ ನೇತೃತ್ವದಲ್ಲಿದೆ. ಅಗರಬತ್ತಿ ಕೆಲಸಗಾರರು ಸಂಘಟಿತರಾಗಿದ್ದಾರೆ. ಗುಲ್ಬರ್ಗ ಜಿಲ್ಲೆಯ ಕುರುಕುಂಟ ಸಿಮೆಂಟ್ ಕಾರ್ಮಿಕರು, ಬಿಜಾಪುರ ಜಿಲ್ಲೆಯ ಜಮಖಂಡಿಯ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ಶ್ರಮಜೀವಿಗಳು ಈ ಅವಧಿಯಲ್ಲಿ ಸಂಘಟಿತರಾಗಿದ್ದಾರೆ. ಎಐಟಿಯುಸಿ ತನ್ನ ಚಟುವಟಿಕೆಗಳನ್ನೂ ಪ್ರಭಾವವನ್ನೂ ವಿಸ್ತರಿಸುತ್ತಿದೆ.

## ಅಸಂಖ್ಯಾತ ಹೋರಾಟಗಳು

ಈ ಅವಧಿಯಲ್ಲಿ ವಿವಿಧ ಕೇಳಿಕೆಗಳಿಗಾಗಿ ರಾಜ್ಯಾದ್ಯಂತವಾಗಿ ಅಸಂಖ್ಯಾತ ಹೋರಾಟಗಳು ನಡೆದಿವೆ. ಅವನ್ನಿಲ್ಲಿ ವಿವರಿಸುವ ಅಗತ್ಯವಿಲ್ಲ. ವಿವರಿಸಿ ಬರೆದರೆ ಅದೇ ಒಂದು ದೊಡ್ಡ ಲೇಖನವಾದೀತು. ಈಹೋರಾಟಗಳಲ್ಲಿಮುಖ್ಯವಾದುದು ದೀಪಕ್ ಕೇಬಲ್ಸ್‌ನಲ್ಲಿ ನಡೆದ ಐದೂವರೆ ತಿಂಗಳ ಮುಷ್ಕರ. ಕಿರ್ಲೋಸ್ಕರ್ ಇಂಜಿನಿಯರಿಂಗ್ ಕಾರ್ಮಿಕರ 17 ದಿನಗಳ ಮುಷ್ಕರ, ಜಿ.ಕೆ. ಡಬ್ಲ್ಯು ನೌಕರರ ಮುಷ್ಕರ, ಮೈಸೂರು ವೈಯರ್ ಇಂಡಸ್ಟ್ರೀಸ್‌ನ ದೀರ್ಘಕಾಲದ ಮುಷ್ಕರ, ಮೈಸೂರಿನ ಇಂಜಿನಿಯರಿಂಗ್ ಕೆಲಸಗಾರರು ನಡೆಸಿದ ಮುಷ್ಕರ ಇತ್ಯಾದಿ, ಇತರ ಜಿಲ್ಲೆಗಳಲ್ಲೂ ಇಂತಹ ಮುಷ್ಕರಗಳು ನಡೆದಿದ್ದವು. ಅಮ್ಮಸಂದ್ರ ಸಿಮೆಂಟ್ ಕೆಲಸಗಾರರ ಮುಷ್ಕರ, ತಮ್ಮ ವೇತನ ಪುನರ್ ವಿಮರ್ಶೆಗಾಗಿ ರಾಜ್ಯದ ಜವುಳಿ ಕಾರ್ಮಿಕರು ನಡೆಸಿದ ಒಂದು ದಿನದ ಸಾಂಕೇತಿಕ ಸಂಪು. ರಾಮನಗರದ ಕೆಲಸಗಾರರ ದೀರ್ಘಕಾಲೀನ ಹೋರಾಟ ಇವನ್ನು ಇಲ್ಲಿ ನಮೂದಿಸಬಹುದು.

## ಸಾರ್ವಜನಿಕ ಕ್ಷೇತ್ರ

ಇಲ್ಲಿ ಒಂದು ಮುಖ್ಯ ವಿಷಯವನ್ನು ನೆನಪಿಗೆ ತರಬೇಕಾಗಿದೆ. ಅದೆಂದರೆ ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ 1,25,000 ಕಾರ್ಮಿಕರು ನಡೆಸಿದ 80ದಿನಗಳ ವೀರೋಚಿತ ಹೋರಾಟ. ಬಿ ಎಚ್ ಇ ಎಲ್ ನಲ್ಲಿರುವ ವೇತನದಂತೆ ತಮಗೂ ವೇತನ ದೊರೆಯಬೇಕೆಂಬುದು ಅವರ ಕೇಳಿಕೆಯಾಗಿತ್ತು. ಈ ಕುರಿತು ಸೀಟೂ ಮುಖಂಡರು ಎಂತಹ ಸುಳ್ಳಿನ ವಿಶ್ವಾಸಘಾತಕ ಪ್ರಚಾರವನ್ನೇ ಮಾಡಲಿ, ಜಂಟಿಕ್ರಿಯಾರಂಗದ ಆಶ್ರಯದಲ್ಲಿ ನಡೆದ ಈ ಮುಷ್ಕರದಲ್ಲಿ ಎಐಟಿಯುಸಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಈ ಹೋರಾಟವು ಇಂದಿರಾ ಗಾಂಧಿಯವರ ಸರಕಾರದ ವಿರುದ್ಧ ನಡೆದ ಅತ್ಯಂತ ಶಕ್ತಿಶಾಲಿಯಾದ ಹೋರಾಟವೆಂದು ಕರ್ನಾಟಕದ ಕಾರ್ಮಿಕ ವರ್ಗದ ಇತಿಹಾಸದಲ್ಲಿ ಬರೆಯಲ್ಪಡುವುದು ಎಂಬುದರಲ್ಲಿ ಸಂದೇಹವಿಲ್ಲ. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಈ ಐಕ್ಯ ಮುಷ್ಕರವೇ ರಾಷ್ಟ್ರೀಯ ಆಂದೋಲನಾ ಸಮಿತಿಯ ರಚನೆಗೆ ಸ್ಫೂರ್ತಿ ನೀಡಿತು ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಈ ಆಂದೋಲನಾ ಸಮಿತಿಯಾದರೋ ನಮ್ಮ ದೇಶದ ಕಾರ್ಮಿಕ ವರ್ಗದ ಸಂಯುಕ್ತ ಚಳವಳಿಯನ್ನು ಮುನ್ನಡೆಸುವ ಪ್ರಯತ್ನವನ್ನು ಮಾಡುತ್ತದೆ.

## ಕಾರ್ಮಿಕ - ರೈತ ಸಖ್ಯ

ರೈತ ವರ್ಗದ ನೆರವು ಮತ್ತು ಸಹಾಯಕ್ಕೆ ಕಾರ್ಮಿಕ ವರ್ಗ ಹೋದುದು ಈ ಅವಧಿಯ ಒಂದು ಮುಖ್ಯ ಘಟನೆ. 1981ರಲ್ಲಿ ತಮ್ಮ ಕೃಷಿ ಉತ್ಪಾದನೆಗಳಿಗೆ ಪ್ರತಿ ಫಲದಾಯಕ ಬೆಲೆ ಬೇಕು, ಪೀಡನೆಯ ಕರ, ನೀರಾವರಿ ತೆರಿಗೆಗಳನ್ನು ರದ್ದು ಮಾಡಬೇಕು ಎಂಬುದಕ್ಕಾಗಿ ನರಗುಂದ ಮತ್ತು ನವಲಗುಂದದ ರೈತರು ಹೋರಾಟ ಹೂಡಿದರು. ಇಂತಹ ಧೈರ್ಯ ತೋರಿದಕ್ಕಾಗಿ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇದರ ವಿರುದ್ಧ ರಾಜ್ಯಾದ್ಯಂತ ರೈತರ ಹೋರಾಟದ ಅಲೆಯೇ ಎದ್ದಿತು. ಈ ಹೋರಾಟದಲ್ಲಿ ತೊಡಗಿದ 130 ಮಂದಿಯನ್ನು ಹಿಂದಿನ ಕಾಂಗ್ರೆಸ್ ಸರ್ಕಾರ ಗುಂಡಿಕ್ಕಿ ಕೊಂದಿತು. ನರಗುಂದದ ರೈತರು ಅಲ್ಲಿಂದ ಹುತಾತ್ಮ ಜ್ಯೋತಿಯನ್ನು ಹಿಡಿದುಕೊಂಡು 500 ಕಿ.ಮೀ. ನಡೆದು ಬೆಂಗಳೂರಿಗೆ ಬಂದರು. ರೈತರ ಈ ಜಾಥಾಕ್ಕೆ ಹಾದಿಯುದ್ದಕ್ಕೂ ಕಾರ್ಮಿಕ ವರ್ಗ ಉತ್ಸುಕತೆಯಿಂದ ಸ್ವಾಗತ ನೀಡಿತು. ಹುಬ್ಬಳ್ಳಿ, ಹರಿಹರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಬೆಂಗಳೂರುಗಳಲ್ಲಂತೂ ಈ ಜಾಥಾಕ್ಕೆ ಪ್ರಚಂಡ ಸ್ವಾಗತ ದೊರೆಯಿತು. ಇದರಲ್ಲಿ ಎಐಟಿಯುಸಿಯು ನಾಯಕತ್ವ ಹೊಂದಿದ ಕಾರ್ಮಿಕ ವರ್ಗ ಪರಿಣಾಮಕಾರಿ ಪಾತ್ರವನ್ನು ವಹಿಸಿತು. ಬೆಂಗಳೂರು ನಗರವಂತೂ ಕಾರ್ಮಿಕ ರೈತ ಐಕ್ಯಕ್ಕೆ ಅಭೂತಪೂರ್ವ ಉದಾಹರಣೆಯಾಗಿತ್ತು.

ಕರ್ನಾಟಕದ ಅದರಲ್ಲೂ ಮುಖ್ಯವಾಗಿ ಬೆಂಗಳೂರಿನ ಕಾರ್ಮಿಕ ವರ್ಗ ಕಾಂಗ್ರೆಸ್‌ನ ಕಾರ್ಮಿಕ ವಿರೋಧಿ ನೀತಿ, ಜನ ವಿರೋಧಿ ನೀತಿಗಳನ್ನು ಖಡಾಖಂಡಿತವಾಗಿ ತಿರಸ್ಕರಿಸುವ ಮೂಲಕ ತನ್ನ ಶಕ್ತಿಯನ್ನು ಪ್ರದರ್ಶಿಸಿತು. ಇದರರ್ಥ ಇಲ್ಲೇನೂ ದೌರ್ಬಲ್ಯಗಳಿಲ್ಲವೆಂದಲ್ಲ; ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರಕಾರವೊಂದರ ರಚನೆಯೇ ಬೆಂಗಳೂರಿನ ಕಾರ್ಮಿಕವರ್ಗ ನೀಡಿದ ಬೆಂಬಲದ ಅರ್ಥವಾಗಿತ್ತು.

## ಕರ್ತವ್ಯಗಳು

ಎಐಟಿಯುಸಿಯ ನೇತೃತ್ವದ ಟ್ರೇಡ್ ಯೂನಿಯನ್‌ಗಳು ಅಸಂಘಟಿತ ಕಾರ್ಮಿಕರನ್ನು ಮುಖ್ಯವಾಗಿ ಕೃಷಿ ಕಾರ್ಮಿಕರನ್ನು, ಹೋಟೆಲ್ ಕೆಲಸಗಾರರನ್ನು, ನಿರ್ಮಾಣ ಕೆಲಸದಲ್ಲಿ ದುಡಿಯುವವರನ್ನು ಮುಂದಕ್ಕೆ ಸಂಘಟಿಸಬೇಕಾಗಿದೆ, ಆ ಧ್ಯಾಪಕರ ನಡುವೆ ಈಗಷ್ಟೇ ಕೆಲಸ ಆರಂಭವಾಗಿದೆ. ಅದನ್ನು ಬಲಗೊಳಿಸಬೇಕು. ಎಐಟಿಯುಸಿಯ ಸಂಘಟನಾತ್ಮಕ ದೌರ್ಬಲ್ಯಗಳನ್ನು ಆದಷ್ಟು ಬೇಗನೇ ಹೋಗಲಾಡಿಸಬೇಕು. ಒಂದು ಯೋಜಿತ, ವ್ಯವಸ್ಥಿತ ರೀತಿಯ ರಾಜಕೀಯ ಶಿಕ್ಷಣವು ಅತ್ಯಂತ ಅಗತ್ಯದ ಕರ್ತವ್ಯಗಳಲ್ಲೊಂದು. ಎಐಟಿಯುಸಿಯ ವಿರುದ್ಧ ಸೀಟೂ ನಡೆಸುವ ದುರುದ್ದೇಶ ಪೂರ್ವಕವಾದ ಸುಳ್ಳು ಅಪಪ್ರಚಾರಗಳಿಂದ ಕೆರಳದೆ ಕಾರ್ಮಿಕ ವರ್ಗದ ಸಂಯುಕ್ತ ಕಾರ್ಯಾಚರಣೆಗಾಗಿ ಎಐಟಿಯುಸಿ ಪಟ್ಟು ಹಿಡಿದು ತಾಳ್ಮೆಯಿಂದ ದುಡಿಯಬೇಕಾಗಿದೆ. ಬಿ ಎಂ ಎಸ್ ಮತ್ತು ಅಂತಹ ಇತರ ಶಕ್ತಿಗಳು ನಡೆಸುತ್ತಿರುವ ಜಾತಿ ಕೋಮು ಪ್ರಚಾರಗಳ ವಿರುದ್ಧ ಹೋರಾಡಲು ಎಲ್ಲ ಪ್ರಯತ್ನಗಳನ್ನೂ ಮಾಡಬೇಕು. ಎಐಟಿಯುಸಿಯ ಧೋರಣೆಯಂತೆ ಧೋರಣೆಯಿರುವ ಇತರ ಶಕ್ತಿಗಳನ್ನು ಒಟ್ಟಿಗೆ ಸೇರಿಸಿ ಮುನ್ನಡೆಯಬೇಕು, ಮುಂಬರುವ ದಿನಗಳಲ್ಲಿ ಕರ್ನಾಟಕದ ಕಾರ್ಮಿಕ ವರ್ಗ ತನ್ನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ಈಡೇರಿಸುವುದೆಂದು ಹಾರೈಸೋಣ.

'ಕೆಂಬಾವುಟ'
ತಪ್ಪದೆ ಓದಿ

# ಭಾರತದಲ್ಲಿ ಸಿಐಎ ಕೈವಾಡ

ಇಂದು ಅಮೇರಿಕಾದ ಬೇಹುಗಾರಿಕೆ ಇಲಾಖೆ ಸಿಐಎಯ ಕರಾಳ ಹಸ್ತ ನಮ್ಮ ಸೈನ್ಯದೊಳಗೂ ಚಾಚಲ್ಪಟ್ಟಿದೆ ಎಂಬುದಕ್ಕೆ ಇತ್ತೀಚೆಗೆ ದೆಹಲಿಯಲ್ಲಿ ಭಾರತದ ಸೈನ್ಯದ ಮೂರು ಮಂದಿ ಉಚ್ಚ ನಿವೃತ್ತ ಅಧಿಕಾರಿಗಳನ್ನು ಬಂಧಿಸಿದ್ದೇ ಸಾಕ್ಷಿ. ಈ ವಿಚಾರದಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿ ನಿಜಸಂಗತಿಯ ತಿಲಾಂಶ ಮಾತ್ರ. ಈ ಸಿಐಎ– ಉಚ್ಚ ಅಧಿಕಾರಿಗಳ ಸಂಪರ್ಕ ಹಳೆಯದು, ಹಾಗೂ ಅದಕ್ಕೀಗ ಸಾಕ್ಷ್ಯ–ಪುರಾವೆಗಳು ದೊರಕಿವೆ.

ಸಿಐಎಗೆ ಭಾರತ ಸೈನ್ಯದ ಗುಪ್ತ ವಿಚಾರಗಳನ್ನು ನೀಡುತ್ತಿದ್ದ ಭಾರತ ಸೇನೆಯ ಉಚ್ಚಾಧಿಕಾರಿಗಳೆಂದರೆ ಏರ್ ವೈಸ್ ಮಾರ್ಶಲ್ ಲರ್ಕಿನ್ಸ್, ಅವರ ಸೋದರ ಮೇಜರ್ ಜನರಲ್ ಲರ್ಕಿನ್ಸ್ ಮತ್ತು ಲೆ| ಕರ್ನಲ್‌ಸಿಂಗ್. ಇವರಿಗೆ ಮಾಹಿತಿಗಳೆಲ್ಲ ಎಲ್ಲಿಂದ ದೊರೆತವು ? ಇದಕ್ಕೆ ನೌಕಾ ಸೇನೆ, ಭೂಸೇನೆ ಹಾಗೂ ವಾಯು ಪಡೆಗಳಲ್ಲಿರುವ 6ಮಂದಿ ಉನ್ನತಾಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ವರದಿಯಾಗಿದೆ, ಅವರ ಹೆಸರುಗಳನ್ನು ಸರಕಾರವಿನ್ನೂ ಪ್ರಕಟಿಸಿಲ್ಲ.

ಈ ಪ್ರಕರಣದ ಸವಿವರ ಚರ್ಚೆಯಾಗಬೇಕೆಂದು ಪಾರ್ಲಿಮೆಂಟಿನಲ್ಲಿ ಒತ್ತಾಯಿಸಲಾಯಿತು.

ಇನ್ನು ಸ್ವಾರಸ್ಯ ಸಂಗತಿಯೆಂದರೆ ಈ ಅಧಿಕಾರಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಸಿಐಎ ಕೇಂದ್ರಕ್ಕೆ ಕಳುಹಿಸುತ್ತಿದ್ದ ಅಮೇರಿಕನ್ ರಾಯಭಾರಿ ಕಛೇರಿಯ ಮುಖ್ಯಾಧಿಕಾರಿಯೊಬ್ಬನನ್ನು ಭಾರತ ಬಿಟ್ಟು 24 ತಾಸುಗಳೊಳಗೆ ತೊಲಗತಕ್ಕದ್ದೆಂದು ಆಜ್ಞಾಪಿಸಲಾದುದು. ಇದೀಗ ತಿಳಿದು ಬರುವಂತೆ ಭಾರತದ ಭೂಸೇನೆಯ ಅಸ್ತ್ರಗಳ ಆದರ ಹೊಸ ಯುದ್ಧ ವಿಮಾನಗಳ ಕುರಿತು ತಿಳಿದುಕೊಳ್ಳಲು ಅಮೇರಿಕಾ ಆಸಕ್ತವಾಗಿದೆ,

## ಸಹಕಾರಿ ಬ್ಯಾಂಕ್ ನೌಕರರ ಚಳವಳಿ

ಸಹಕಾರಿ ಬ್ಯಾಂಕ್‌ಗಳ ನೌಕರರ ಈಗಿನ ಅಲ್ಪ ಸಂಬಳವನ್ನೇ ಕಡಿಮೆ ಮಾಡಬೇಕೆಂದು ಈ ಬಗ್ಗೆ ನೇಮಿಸಲಾದ ಆಯೋಗವೊಂದು ನೀಡಿದ ವರದಿಯನ್ನು ಈ ಹಿಂದೆ ಈ ಪುಟಗಳಲ್ಲಿ ಪ್ರಕಟಿಸಲಾಗಿತ್ತು. ಇದೀಗ ಕರ್ನಾಟಕ ರಾಜ್ಯ ಸರಕಾರದ ಆದೇಶದ ಮೇಲೆ ಸಹಕಾರಿ ಸಂಘಗಳ ನಿಬಂಧಕರು ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ್‌ಗಳ ನೌಕರರ ಮಾಸಿಕ ವೇತನವನ್ನು ರೂ 200 ರಿಂದ 300 ರೂ ವರೆಗೆ ಕಡಿಮೆ ಮಾಡಿ ಆದೇಶ ಹೊರಡಿಸಿರುತ್ತಾರೆ, ಇದನ್ನು ಪ್ರತಿಭಟಿಸಿ ರಾಜ್ಯದ 19 ಜಿಲ್ಲೆಗಳಲ್ಲಿರುವ ಮಧ್ಯವರ್ತಿ ಬ್ಯಾಂಕ್‌ಗಳ ನೌಕರರು ಕರ್ನಾಟಕ ಪ್ರದೇಶ ಬ್ಯಾಂಕ್ ನೌಕರರ ಸಂಘದ ನೇತೃತ್ವದಲ್ಲಿ ಹೋರಾಟವನ್ನು ನಡೆಸಿದರು. ಅದರಂತೆ ಧಾರವಾಡ ಜಿಲ್ಲೆಯ ಕೆ, ಸಿ, ಸಿ ಬ್ಯಾಂಕ್ ನೌಕರರು ಕಳೆದ 5 ರಂದು 'ಪ್ರತಿಭಟನಾದಿನ'ವನ್ನು ಆಚರಿಸಿದರು.

### ಧಾರವಾಡ

ಧಾರವಾಡ ಜಿಲ್ಲೆಯ ಕೆ. ಸಿ. ಸಿ. ಬ್ಯಾಂಕ್ ಹಿಂದಿನ ವೇತನ ಶ್ರೇಣಿಯನ್ನೇ ಕೊಡಲು ತಯಾರಿದ್ದೆ, ಬೆಂಗಳೂರಿನಲ್ಲಿರುವ ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರು ರಾಜ್ಯ ಸರಕಾರದ ಆದೇಶದ ಮೇರೆಗೆ ವೇತನವನ್ನು ಕಡಿಮೆ ಮಾಡಬೇಕೆಂದು ಆಜ್ಞೆ ನೀಡಿದ್ದಾರೆ.

ಸಹಕಾರಿ ಸಂಘಗಳ ರಿಜಿಸ್ಟ್ರಾರರು ತಮ್ಮ ಕಾರ್ಮಿಕರ ವಿರೋಧಿ ಆಜ್ಞೆಯನ್ನು ಹಿಂದೆಗೆದುಕೊಂಡು ನೌಕರರ ಬೇಡಿಕೆಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳದ್ದಲ್ಲಿ ರಾಜ್ಯಾದ್ಯಂತವಾಗಿ ಈ ನೌಕರರು ಹೋರಾಟ ನಡೆಸುವುದರಲ್ಲಿ ಸಂದೇಹವಿಲ್ಲ.

# ಉ. ಪ್ರದೇಶ: ಕಮ್ಯೂನಿಸ್ಟ್ ಪಕ್ಷವನ್ನು ಹತ್ತಿಕ್ಕಲು ಯತ್ನ

ಉತ್ತರಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯಲ್ಲಿ ಕಮ್ಯೂನಿಸ್ಟರ ಮೇಲೆ ಪೋಲೀಸರು ಭಯೋತ್ಪಾದಕತೆಯ ದಾಳಿಯನ್ನು ಆರಂಭಿಸಿದ್ದಾರೆ. ಈ ಜಿಲ್ಲೆಯಲ್ಲಿಯೇ ಪ್ರಧಾನಿ ಪುತ್ರ ರಾಜೀವ್ ಗಾಂಧಿಯವರ ಅಮೇಥಿ ಮತದಾರ ಕ್ಷೇತ್ರವೂ, ಉತ್ತರ ಪ್ರದೇಶದ ಮುಖ್ಯಮಂತ್ರಿ ಶ್ರೀಪತಿ ಮಿಶ್ರರ ಶಾಸನ ಸಭಾ ಕ್ಷೇತ್ರವೂ ಇರುವುದು.

ಈ ಜಿಲ್ಲೆಯ ಇಸಾಯಿಲಿ ಎಂಬಲ್ಲಿನ ಬಲ್ದಿರಾಯಿ ಮಾರ್ಕೆಟಿನ ಬಳಿ ಕಳೆದ 22 ರಂದು ಶ್ರೀಪತಿ ಮಿಶ್ರಾ ಭಾಷಣ ಮಾಡುತ್ತಿದ್ದರಂತೆ. ಆಗ ಯಾರೋ ಆತನ ಮೇಲೆ ಚಪ್ಪಲಿ ಎಸೆದರಂತೆ. ಈ ಶಿಕ್ಷೆಗೆ ಆ ಮುಖ್ಯಮಂತ್ರಿ ಅರ್ಹನೋ ಅನರ್ಹನೋ ಎಂಬುದು ಬೇರೆ ಪ್ರಶ್ನೆ. ಈ ಕೂಡಲೇ ಕಮ್ಯೂನಿಸ್ಟ್ ಪಕ್ಷದ ಸ್ಥಳೀಯ ಸಂಘಟಕ ರಾಮಶಂಕರ ಸಿಂಗರನ್ನೂ ಯುವಜನ ಫೆಡರೇಶನಿನ ಅಜೀಜ್ ಖಾನ್‌ರನ್ನೂ ಪೋಲಿಸರು ಬಂಧಿಸಿದರು. ಪೋಲಿಸ್ ಸ್ಟೇಶನಿನಲ್ಲಿ ಅವರನ್ನು ಚೆನ್ನಾಗಿ ಥಳಿಸಲಾಯಿತು, ಬಳಿಕ ಅವರನ್ನು ಸೆರೆಮನೆಗೆ ಕಳಿಸಿಕೊಡಲಾಯಿತು.

### ಪ್ರತಿಭಟನೆ

ಈ ಬಂಧನದ ವಾರ್ತೆ ಕೇಳಿದೊಡನೆ ಕಮ್ಯೂನಿಸ್ಟ್ ಪಕ್ಷದ ಶಾಸಕ ಮಿತ್ರಸೇನ್ ಯಾದವ್ ಈ ಪ್ರದೇಶಕ್ಕೆ ಭೇಟಿ ನೀಡಿದರು; ತನಿಖೆ ನಡೆಸಿದರು. ನಂತರ ಮುಖ್ಯಮಂತ್ರಿಯವರ ಮೇಲೆ ಚಪ್ಪಲಿ ಎಸೆದುದಕ್ಕೂ ಕಮ್ಯೂನಿಸ್ಟ್ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲವೆಂದು ಅವರು ಸ್ಪಷ್ಟಪಡಿಸಿದರು. ಪೋಲಿಸರ ಈ ದುರ್ವರ್ತನೆಯ ವಿರುದ್ಧ ಪೋಲಿಸ್ ಸ್ಟೇಶನಿನ ಎದಿರು ಮತಪ್ರದರ್ಶನ ನಡೆಸಲು ಸ್ಥಳೀಯ ಕಮ್ಯೂನಿಸ್ಟ್ ಪಕ್ಷ ನಿರ್ಧರಿಸಿತು, ಆದರೆ ಸಂಬಂಧಪಟ್ಟ ಪೋಲಿಸ್ ಅಧಿಕಾರಿಗಳು ಕ್ಷಮೆ ಕೇಳಿದರು. ಇಂತಹ ಘಟನೆಗಳು ಮುಂದಕ್ಕೆ ನಡೆಯದಂತೆ ನೋಡಲಾಗುವುದೆಂದು ಅಧಿಕಾರಿಗಳು ಭರವಸೆ ಕೊಟ್ಟರು. ಹೀಗಾಗಿ ಮತ ಪ್ರದರ್ಶನವನ್ನು ರದ್ದು ಮಾಡಲಾಯಿತು.

### ಹಿನ್ನೆಲೆ

ಆದರೆ ಈಗ ಕಮ್ಯೂನಿಸ್ಟರಿಗೆ ಪೋಲಿಸರು ಪುನಃ ಬೆದರಿಸತೊಡಗಿದ್ದಾರೆ; ಕಾರಣ: ಪೋಲಿಸರ ಈ ದಬ್ಬಾಳಿಕೆಯವಿರುದ್ಧ ಜನಾಭಿಪ್ರಾಯವನ್ನು ಕಮ್ಯೂನಿಸ್ಟ್ ಪಕ್ಷ ಸಂಗ್ರಹಿಸಿದ್ದೇ ಅವರ ಅಪರಾಧ.

ಈ ಘಟನೆಗೆ ಮೊದಲು ಪೋಲಿಸ್ ಜೀಪು ಒಂದು ರಾತ್ರಿಯಲ್ಲಿ ದೀಪವಿಲ್ಲದೆ ಹೋಗುತ್ತಿತ್ತು. ಅದರ ಚಾಲನೆ ಮಾಡುತ್ತಿದ್ದ ಇನ್ಸ್‌ಪೆಕ್ಟರನಾದರೋ ಕುಡಿದು ಮತ್ತನಾಗಿದ್ದ. ಈ ಜೀಪ್ ಗೋವಿಂದಪುರಕ್ಕೆ ಬಂದಾಗ ಇಬ್ಬರು ಹರಿಜನರನ್ನು ಕೆಡವಿಹಾಕಿತು. ಒಬ್ಬಾತ ಅಲ್ಲೇ ಮೃತನಾದ. ಇನ್ನೊಬ್ಬ ಗಾಯಗೊಂಡು ನರಳುತ್ತಿದ್ದ; ಜೀಪು ಹಿಂದೆ ಬರುವಾಗ ಅವನನ್ನೂ ಈ ಪೋಲಿಸ್ ರಕ್ಕಸರು ಕೊಂದರು.

ಈ ಘಟನೆಗೆ ಸ್ಥಳೀಯ ವ್ಯಕ್ತಿಯೊಬ್ಬ ಸಾಕ್ಷಿಯಾಗಿದ್ದ. ಈ ಪೋಲೀಸರಾದರೋ ಬಲ್ದಿರಾಯಿ ಪೋಲೀಸ್ ಸ್ಟೇಶನಿನವರು. ಅವರು ಈ ಪ್ರತ್ಯಕ್ಷ ಸಾಕ್ಷಿಗೆ ಬೆದರಿಕೆ ಹಾಕಿದರು, ಸುದ್ದಿ ಹರಡಿದರೆ ಪರಿಣಾಮ ನೆಟ್ಟಗಾಗದೆಂದು ಎಚ್ಚರಿಸಿದರು. ಹೆದರಿ ಕಂಗಾಲಾದ ಈ ವ್ಯಕ್ತಿ ಕಮ್ಯೂನಿಸ್ಟ್ ಪಕ್ಷಕ್ಕೆ ದೂರು ನೀಡಿದ.

ಕೂಡಲೇ 10 ಸಾವಿರ ಮಂದಿಯ ಮತಪ್ರದರ್ಶನವೊಂದು ನಡೆದು ಈ ಕೊಲೆಯನ್ನು ಪ್ರತಿಭಟಿಸಿತು. ಈ ಪ್ರದೇಶದಲ್ಲಿ ಈತನಕ ನಡೆಯದಿದ್ದಂತಹ ಅಪೂರ್ವ ಮೆರವಣಿಗೆ ಇದು. ಆರೋಪಿ ಪೋಲೀಸರನ್ನು ಕರೆದು ವಿಚಾರಣೆ ನಡೆಸಲಾಯಿತು. ಅದರ ಸೇಡನ್ನೀಗ ಕಮ್ಯೂನಿಸ್ಟ್ ಪಕ್ಷದ ನಾಯಕ ರಾಮಶಂಕರ ಸಿಂಗ್ ಮತ್ತು ಯುವಜನ ನಾಯಕ ಅಜೀಜ್‌ಖಾನ್‌ರ ಬಂಧನದ ಮೂಲಕ ಪೋಲೀಸರು ತೀರಿಸುತ್ತಿದ್ದಾರೆ.

ಈ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪ್ರಭಾವ ಹೆಚ್ಚಿರುವುದರಿಂದ ಜಿಲ್ಲಾಧಿಕಾರಿಗಳು ತಬ್ಬಿಬ್ಬಾಗಿದ್ದಾರೆ. ಮೇಲೆ ಹೇಳಿದ ಬೃಹತ್ ಮತಪ್ರದರ್ಶನ ಅವರ ಗಾಬರಿಗೆ ಕಾರಣವಾಗಿದೆ. ಇಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಬಡ ರೈತರ ಕೃಷಿ ಕಾರ್ಮಿಕರ ಬೆಂಬಲವಿದೆ.

## ಜಗತ್ತಿನಲ್ಲಿ ದಿನಕ್ಕೆ ೪೦ ಸಾವಿರ ಮಕ್ಕಳು ಸಾಯುತ್ತಿವೆ

ಜನರನ್ನು ಕೊಲ್ಲುವ ಪ್ರಕೃತಿಯ ವಿನಾಶದ ಕುರಿತು ಇಲ್ಲಿ ಎಲ್ಲರೂ ಗಮನ ಹರಿಸುತ್ತಾರೆ. ಆದರೆ ನಿಜ ಸಂಗತಿಯೆಂದರೆ ಜಗತ್ತಿನಲ್ಲಿ ಇಂದು ದಿನಕ್ಕೆ 40 ಸಾವಿರ ಮಕ್ಕಳು ಸಾಯುತ್ತವೆ. ಈ ನಿರ್ನಾಮದ ಕುರಿತು ಯಾರೂ ಗಮನ ಹರಿಸಿದಂತಿಲ್ಲ. ಇತ್ತೀಚೆಗೆ ಯೂನಿಸೆಫ್‌ನ ವರದಿ ಈ ಕುರಿತು ಜನರ ಲಕ್ಷ್ಯವನ್ನು ಸೆಳೆಯಿತು. ಆದರ ವರದಿ 1984ರಲ್ಲಿ ಜಗತ್ತಿನ 'ಮಕ್ಕಳ ಪರಿಸ್ಥಿತಿ' ಎಂಬ ಪುಸ್ತಕವನ್ನು ಯೂನಿಸೆಫ್‌ನ ನಿರ್ದೇಶಕ ಡಾವಿಡ್ ಪಿ. ಹಾಕ್‌ಸ್ಟನ್ ಬಿಡುಗಡೆಗೊಳಿಸಿದಾಗ ಈ ಅಂಶ ಬೆಳಕಿಗೆ ಬಂದಿತು.

ಈ ವರದಿ ಭಾರತದ ಕುರಿತಾದಿಯೂ ಹೇಳುತ್ತದೆ; 'ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಮಕ್ಕಳಿಗೆ ಸಂಬಂಧಪಟ್ಟ ವೆಚ್ಚವನ್ನು ಶೇ 15ರಿಂದ ಶೇ 12ಕ್ಕೆ ಇಳಿಸಲಾಗಿದೆ' ಎಂದು ಈ ವರದಿ ಹೇಳುತ್ತದೆ.

ತಾಯಿ ತನ್ನ ಮಕ್ಕಳಿಗೆ ಮೊಲೆ ಹಾಲು ನೀಡುವಂತೆ ಪ್ರೇರೇಪಿಸುವುದು, ಶಿಶುಗಳಿಗೆ ಶಕ್ತಿದಾಯಕ ಆಹಾರ ನೀಡುವುದು, ಸಣ್ಣ ಪ್ರಾಯದಲ್ಲಿ ಮಕ್ಕಳಿಗೆ ಬರಬಹುದಾದಂತಹ ಕಾಹಿಲೆಗಳು ಬಾರದಂತೆ ವ್ಯವಸ್ಥಿತವಾಗಿ ಪ್ರತಿಬಂಧಕ ಕ್ರಮ ವಹಿಸುವುದು, ಅತಿಸಾರದ ರೋಗಗಳಿಗೆ ಔಷಧಿ ನೀಡುವುದು ಇತ್ಯಾದಿ ಕ್ರಮಗಳನ್ನು ವಹಿಸಿದ್ದೇ ಆದರೆ ಈಗಿನ ಶಿಶುಮರಣದ ಸಂಖ್ಯೆಯನ್ನು ಅರ್ಧಕ್ಕಿಳಿಸಬಹುದು ಎನ್ನುತ್ತದೆ ವರದಿ

ಇಂತಹ ಶಿಶು ಮರಣ ಹಿಂದುಳಿದ ರಾಷ್ಟ್ರಗಳಲ್ಲಿ ಜಾಸ್ತಿ. ಈ ವರದಿಯ ಹೇಳಿಕೆಯಂತೆ "ಬ್ರಿಟನ್, ಪ. ಜರ್ಮನಿ ಮತ್ತು ಸ್ಪೈನ್‌ಗಳಲ್ಲಿರುವ ಮಕ್ಕಳ ಸಂಖ್ಯೆಯಷ್ಟು ಶಿಶುಗಳು ಕಳೆದ ಒಂದು ವರುಷದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಅನಗತ್ಯವಾಗಿ ಮರಣ ಹೊಂದಿವೆ."

ಅತಿಸಾರದ ಫಲವಾದಿ ಭಾರತದಲ್ಲೆ ವರುಷಕ್ಕೆ 15ಲಕ್ಷ ಶಿಶುಗಳು ಸಾಯುತ್ತವೆ ಎಂದು ಹೇಳಿದ ವರದಿ, ಯೋಗ್ಯ ಪ್ರಮಾಣದಲ್ಲಿ ಉಪ್ಪು ಮತ್ತು ಸಕ್ಕರೆಯನ್ನು ಬೆರೆಸಿದ ನೀರನ್ನು ಈ ಶಿಶುಗಳಿಗೆ ನೀಡಿದ್ದರೆ ಅವುಗಳನ್ನು ಉಳಿಸಬಹುದಿತ್ತು. ಅತ್ಯಂತ ಹೆಚ್ಚು ಶಿಶುಗಳು ಸಾಯುವ ದೇಶಗಳಲ್ಲಿ ಭಾರತವೂ ಒಂದು. ಇಲ್ಲಿ ಸಾವಿರ ಶಿಶುಗಳಲ್ಲಿ 125 ಶಿಶುಗಳು ಸಾಯುತ್ತವೆ, ಅತಿ ಹೆಚ್ಚು ಶಿಶುಗಳ ಸಾಯುವ 44 ದೇಶಗಳ ಸಾಲಿನಲ್ಲಿ ಭಾರತ 32ನೇ ಸ್ಥಾನದಲ್ಲಿದೆ. ಬಡತನ, ಜನ ಸಂಖ್ಯೆಯ ಹೆಚ್ಚಳಕ್ಕೂ ಶಿಶುಗಳ ಸಾವಿಗೂ ಅಂತರ್ ಸಂಬಂಧವಿದೆಯೆಂದು ಎಲ್ಲರಿಗೂ ಗೊತ್ತು. ಆದರೆ ಇದರಿಂದಾಗಿ ಪರಿಸ್ಥಿತಿ ಇಂದಿನಷ್ಟು ಹಾಳಾಗಬೇಕಾಗಿರಲಿಲ್ಲ. ಎಂದೂ ಈ ವರದಿ ಹೇಳುತ್ತದೆ.

## ಬೆಳೆ ಬಂದರೂ ಗೋಧಿಯ ಆಮದು ನಿಂತಿಲ್ಲ

ಈ ವರ್ಷ ಭಾರಿ ಪ್ರಮಾಣದಲ್ಲಿ ಬೆಳೆಗಳು ಬಂದಿವೆ ಎನ್ನಲಾಗುತ್ತದೆ. ಇದು ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿದೆ ಎಂದೂ ಸರಕಾರ ಹೇಳಿಕೊಳ್ಳುತ್ತಿದೆ, ಆದರೂ ಕೇಂದ್ರ ಸರಕಾರ ಅತ್ಯಧಿಕ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಇತರ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ.

1982-1983ರಲ್ಲಿ 65,477 ಕೋಟಿ ಡಾಲರ್ ಮೌಲ್ಯದ 39.5 ಲಕ್ಷ ಟನ್ ಗೋಧಿಯನ್ನು ಅಮೇರಿಕಾದಿಂದ ಭಾರತ ಆಮದು ಮಾಡಿಕೊಂಡಿತ್ತು, ಈ ವರುಷ 21,30 ಲಕ್ಷ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳಲಾಗಿದೆ ಎಂಬ ವರದಿ ಬಂದಿದೆ. ಈ ವರದಿಯಂತೆ ಈ ದಿನದ ತನಕ 9.8 ಲಕ್ಷಟನ್ (ಮೌಲ್ಯ 15.481 ಕೋಟಿ ಡಾಲರ್) ಗೋಧಿಯನ್ನು ಅಮೇರಿಕಾದಿಂದ, 8.024 ಕೋಟಿ ಡಾಲರ್ ಮೌಲ್ಯದ 5 ಲಕ್ಷ ಟನ್ ಗೋಧಿಯನ್ನು ಕೆನಡಾದಿಂದ 9.775 ಕೋಟಿ ಡಾಲರ್ ಮೌಲ್ಯದ 6.5 ಲಕ್ಷ ಟನ್ ಗೋಧಿಯನ್ನು ಅರ್ಜೆಂಟೀನಾದಿಂದ ಆಮದು ಮಾಡಿಕೊಳ್ಳಲಾಗಿದೆ. ಇಷ್ಟೇ ಅಲ್ಲ 3.82 ಕೋಟಿ ಡಾಲರ್ ಮೌಲ್ಯದ 1,70 ಲಕ್ಷ ಟನ್ ಅಕ್ಕಿಯನ್ನು ಥ್ಯಾಲೆಂಡಿನಿಂದಲೂ 3,86 ಕೋಟಿ ಡಾಲರ್ ಮೌಲ್ಯದ 2 ಲಕ್ಷ ಟನ್ ಅಕ್ಕಿಯನ್ನು ಬರ್ಮಾದಿಂದಲೂ ತರಿಸಲಾಗಿದೆ.

ಆಮದು ಮಾಡಿಕೊಂಡ ಗೋಧಿಯ ಬೆಲೆ ಟನ್‌ಗೆ 120,38 ಡಾಲರ್‌ಗಳಷ್ಟು ಆಗುತ್ತದೆ. ಅಮೇರಿಕಾದ ಗೋಧಿಯ ಬೆಲೆ ಇದಕ್ಕಿಂತಲೂ ಜಾಸ್ತಿ ಟನ್‌ಗೆ 157.97 ಡಾಲರ್. ಈ ವರುಷ ಆಮದು ಮಾಡಿಕೊಂಡ ಒಟ್ಟು ಗೋಧಿಯ ಮೌಲ್ಯ 33,281 ಕೋಟಿ ಡಾಲರ್‌ಗಳಾಗುತ್ತವೆ ಎಂಬುದು ಸರಕಾರದ ಅಂದಾಜು.

ಭಾರಿ ಬೆಳೆ ಬಂದಿದ್ದರೂ ಈ ಆಮದು ಏಕೆ ?

## ಬೀದರ್ : ಕಮ್ಯೂನಿಸ್ಟ್ ಪಕ್ಷದ ಚಳವಳಿ

ಈ ಹಿಂದೆ ವರದಿಯಾದಂತೆ ಬೆಲೆ ಏರಿಕೆ ವಿರುದ್ಧವಾಗಿ ಕೋಮು ಸಾಹಾರ್ದತೆಗಾಗಿ, ವಿಜಯನಗರ ಉಕ್ಕಿನ ಕಾರ್ಖಾನೆ, ಹಾಗೂ ಜಿಲ್ಲೆಯಲ್ಲಿ ಉದ್ಯಮೀಕರಣಕ್ಕಾಗಿ ಬೀದರ್ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಚಳವಳಿ ಆರಂಭವಾಗಿದೆ, ಕಳೆದ 25 ರಂದು ಈ ಚಳವಳಿಯನ್ನು ಬಗದಲ ಗ್ರಾಮದಲ್ಲಿ ಒಂದು ಬಹಿರಂಗ ಸಭೆಯ ಮೂಲಕ ಉದ್ಘಾಟಿಸಲಾಯಿತು, ಸಭೆಯ ಅಧ್ಯಕ್ಷತೆಯನ್ನು ಶಂಕರಪ್ಪಾ ಹವಶ್ಯಾ ವಹಿಸಿದ್ದರು. ವಿ. ಎನ್ ಪಾಟೀಲ್, ಬಾಬೂರಾವ್ ಹೊನ್ನಾ ಮುಖ್ಯ ಭಾಷಣಕಾರರಾಗಿದ್ದರು, ಅವರು ತಮ್ಮ ಭಾಷಣಗಳಲ್ಲಿ ಸಾಮ್ರಾಜ್ಯವಾದಿಗಳ ಯುದ್ಧಕೋರ ನೀತಿಯನ್ನು ಖಂಡಿಸಿದರು. ರಾಷ್ಟ್ರೀಯ ಪರಿಸ್ಥಿತಿಯನ್ನು, ಏಕಾತ್ಮತಾ ಯಜ್ಞದ ಅಪಾಯವನ್ನು ವಿವರಿಸಿದ ಅವರು ರಾಜ್ಯದಲ್ಲಿ ಶಾಸಕರನ್ನು ಕೊಳ್ಳುವ ರಾಜ್ಯ ಕಾಂಗ್ರೆಸ್ ನೀತಿಯನ್ನು ಬಯಲಿಗೆಳೆದರು, ವಿಜಯನಗರ ಉಕ್ಕಿನ ಸ್ಥಾಪನೆಯ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು.

## ಮೈಸೂರು : ಸ್ಪನ್ ಪೈಪ್ ಮಿಲ್ ಬಂದ್

ಮೈಸೂರು ನಗರದ ಹುಣಸೂರು ರಸ್ತೆಯಲ್ಲಿ ಚಾಮುಂಡಿ ಸ್ಪನ್ ಎಂಬ ಒಂದು ಕಾರ್ಖಾನೆಯಿದೆ; ಇಲ್ಲಿ ದುಡಿಯುವವರ ಸಂಖ್ಯೆ 60 ರಿಂದ 70, ಇಲ್ಲಿ ತಯಾರಿಸಲಾದ ಸ್ಪನ್ ಕಾಂಕ್ರಿಟ್ ಪೈಪ್‌ಗಳನ್ನು ಸರಕಾರಕ್ಕೆ ಮಾರಲಾಗುತ್ತದೆ. ಹೀಗಾಗಿ ಮಾಲಕರು ಹೇರಳಲಾಭವನ್ನು ಗಳಿಸುತ್ತಾರೆ.

ಇಲ್ಲಿ ದುಡಿಯುವ ಕಾರ್ಮಿಕರಿಗೆ ದಿನಗೂಲಿ ಎಷ್ಟು ಗೊತ್ತೆ ? 7 ರಿಂದ 7,50ರೂ. ಏರುತ್ತಿರುವ ಬೆಲೆಗಳು ದಾಗಿ ಜೀವನ ನಡೆಸಲಾರದ ಕಾರ್ಮಿಕರು ಕೂಲಿ ಹೆಚ್ಚಳಕ್ಕಾಗಿ ಮಾಲಕರ ಮುಂದೆ ಕೇಳಿಕೆಗಳನ್ನು ಮಂಡಿಸಿದರು, ಸುಮಾರು 6 ತಿಂಗಳ ಕಾಲ ಕಾರ್ಮಿಕ ಅಧಿಕಾರಿಗಳ ಮುಂದೆ ಮಾತುಕತೆ ನಡೆದರೂ ಮಾಲಕರ ಮೊಂಡುತನದಿಂದಾಗಿ ಪ್ರಶ್ನೆ ಇತ್ಯರ್ಥವಾಗಲಿಲ್ಲ; ಆಗ ಮುಷ್ಕರ ನಡೆಸುವುದು ಕಾರ್ಮಿಕರಿಗೆ ಅನಿವಾರ್ಯವಾಯಿತು.

ಇದೀಗ ಕಾರ್ಮಿಕರನ್ನು ಬಗ್ಗು ಬಡಿಯುವ ಉದ್ದೇಶದಿಂದ ಸುಳ್ಳು ಕಾರಣಗಳನ್ನು ಕೊಟ್ಟು ಕಾರ್ಖಾನೆಯನ್ನು ಮಾಲಕರು ಮುಚ್ಚಿದ್ದಾರೆ, ಮಾಲಿಕರ ಕ್ರಮವನ್ನು ಎಐಟಿಯುಸಿಯ ಮೈಸೂರು ಜಿಲ್ಲಾ ಸಮಿತಿ ಖಂಡಿಸಿದೆ, ಹಾಗೂ ಮಾಲಕರ ವಿರುದ್ಧ ಕ್ರಮ ತೆಗೆದುಕೊಂಡು ನೊಂದಿರುವ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕೆಂದು ಸರಕಾರವನ್ನು ಎಐಟಿಯುಸಿ ಒತ್ತಾಯಿಸಿದೆ.

# ಕ್ರಾಂತಿಕಾರಿ ಕಾರ್ಮಿಕವರ್ಗ ಶಾಂತಿ ಧ್ವಜವನ್ನು ಎತ್ತಿ ಹಿಡಿಯಬೇಕು

ಅಮೇರಿಕನ್ ಸಾಮ್ರಾಜ್ಯಶಾಹಿಗಳು ಇಂದು ಜಗತ್ತಿನಾದ್ಯಂತ ಅಣು ಯುದ್ಧದ ಕಾರ್ಮೋಡಗಳನ್ನು ಹರಡುತ್ತಿದ್ದಾರೆ. ರೇಗನರ ರಣಹದ್ದುಗಳು ತಮ್ಮ ಹರಿತವಾದ ಉಗುರುಗಳನ್ನು ಲೋಕದ ವಿವಿಧ ಕಡೆ ಚಾಚಿವೆ. ಸಮಾಜವಾದಿ ದೇಶಗಳನ್ನು ಮುಖ್ಯವಾಗಿ ಸೋವಿಯತ್ ಯೂನಿಯನನ್ನು ನಾಶಮಾಡುವುದೇ ಅವುಗಳ ಗುರಿ. ಅದರೊಂದಿಗೆ ನಿಜವಾದ ಅಲಿಪ್ತ ದೇಶಗಳ ವಿರುದ್ಧ ದಾಳಿ ಮಾಡುವುದು ಅವುಗಳ ಉದ್ದೇಶ, ಆಕ್ರಮಣದ, ಯುದ್ಧ, ವಿನಾಶದ ಸಾಮ್ರಾಜ್ಯವಾದಿ ಕೈಗಳನ್ನು ಜಗತ್ತಿನ ಜನ, ಮುಖ್ಯವಾಗಿ ಸಂಘಟಿತ ದುಡಿಯುವ ವರ್ಗ ತಡೆಹಿಡಿಯಬೇಕು.

ಇಂದು ಯುದ್ಧವೆಂದರೆ – ಅದು ಅಣು ಯುದ್ಧ. ಇದರಿಂದ ಉಂಟಾಗುವುದು ವಿನಾಶ, ಇಂದು ಒಂದು ಅಣು ಯುದ್ಧ ನಡೆದರೆ ಏನಾಗಬಹುದು? ಸರ್ವನಾಶ ; ಕೆಲವೊಂದು ಅಂಕೆ ಅಂಶಗಳನ್ನು ತಿಳಿಯಬಯಸುತ್ತೀರಾ ?

ಅಮೇರಿಕನ್ ಮೂಲವುಳ್ಳ ಒಂದು ಸಂಸ್ಥೆಯಿದೆ. 'ಸಾಮಾಜಿಕ ಜವಾಬ್ದಾರಿಗಾಗಿರುವ ವೈದ್ಯರು' ಎಂಬ ಸಂಸ್ಥೆ ಅದು. ಅಣು ಯುದ್ಧದ ವೈದ್ಯಕೀಯ ಪರಿಣಾಮಗಳ ಕುರಿತು ಅದು ಹಲವಾರು ವಿಚಾರ ಸಂಕಿರಣಗಳನ್ನು ನಡೆಸಿತ್ತು. ಆ ಸಂಸ್ಥೆ ಒಂದು ಮನವಿಯನ್ನು ಹೊರಡಿಸಿದೆ. ಮಾನವಕುಲಕ್ಕೆ ಈಗ ಬೆದರಿಕೆ ಹಾಕಿರುವ ಅಣು ಯುದ್ಧ ನಡೆದರೆ ಏನು ಸಂಭವಿಸೀತು ಎನ್ನುವ ಅಧಿಕೃತ ಅಂಶಗಳು ಅದರಲ್ಲಿವೆ. ಅದೆನ್ನುತ್ತದೆ,

'ಇಂದು ಅಣು ಯುದ್ಧವೆಂಬುದು ಸಾಮಾನ್ಯ ಸಾಧ್ಯತೆಯಿರುವ ವಿಚಾರ. ಇಂದಿನ ಅಂತರಾಷ್ಟ್ರೀಯ ಬೆಳವಣಿಗೆ ಈಸಾಧ್ಯತೆಯನ್ನು ಇನ್ನಷ್ಟು ಹತ್ತಿರಕ್ಕೆ ತಂದಿದೆ. ಅಣು ಯುದ್ಧ ಒಂದು 'ಪರಿಮಿತ' ನೆಲೆಯಲ್ಲಿ ನಡೆದರೂ ಅದರ ಪರಿಣಾಮ ಸಾವು–ನೋವು ; ರೋಗ-ರುಜಿನ.

## ವೈದ್ಯಕೀಯ ನೆರವು ಇಲ್ಲ

ಅಣುಯುದ್ಧದ ವಿನಾಶದಿಂದ ಪಾರಾಗಲು ವೈದ್ಯಕೀಯ ಯೋಜನೆಯೆಂಬುದು ಅರ್ಥವಿಲ್ಲದ್ದು. ಇದಕ್ಕೆಪ್ರತಿಕ್ರಿಯೆ ತೋರಿಸುವ ಪರಿಣಾಮಕಾರಿಯಾದ ವೈದ್ಯಕೀಯ ಚಿಕಿತ್ಸೆಯಿಲ್ಲ. ಏಕೆಂದರೆ ಈ ಯುದ್ಧವಾರಂಭವಾದಾಗಲೇ ಹೆಚ್ಚಿನ ಆಸ್ಪತ್ರೆಗಳು ನಾಶವಾಗುವವು. ಹೆಚ್ಚಿನ ಡಾಕ್ಟರುಗಳುಸಾವನ್ನಪ್ಪುವರು ಇಲ್ಲವೇ ಗಾಯಗೊಳ್ಳುವರು. ಎಷ್ಟೋ ಔಷಧಿಗಳು ದೊರೆಯಲಾರವು "ಬದುಕಿ ಉಳಿದ" ಹೆಚ್ಚಿನವರು ಸಾಯುವರು.

"ಇನ್ನು ಪರಿಣಾಮಕಾರಿಯಾದ" ನಾಗರಿಕ ರಕ್ಷಣೆಯೂ ಇರಲಾರದು, ಹೆಚ್ಚೇಕೆ ಈ ಯುದ್ಧದ ಬೆದರಿಕೆಯ ವಿರುದ್ಧ 'ಆಶ್ರಯ' ಪಡೆಯುವವರನ್ನು ಅಣು ವಿಕಿರಣಗಳು ಕೊಲ್ಲುವುವು.

"ಅಣು ಯುದ್ಧದ ರೋಗ ಮುಕ್ತತೆಗೊಳ್ಳುವುದು ಅಸಾಧ್ಯ. ಮಾನವ ಜೀವನಕ್ಕಾಗಿ ಅವಲಂಬಿಸಿರುವ ಅರ್ಥ ವ್ಯವಸ್ಥೆ, ವಾತಾವರಣ ಶುದ್ಧತೆ, ಹಾಗೂ ಸಾಮಾಜಿಕ ಚೌಕಟ್ಟುಗಳು ಅಮೇರಿಕಾದಲ್ಲೂ ಸೋವಿಯತ್ ಯೂನಿಯನಿನಲ್ಲೂ, ಹೆಚ್ಚಿನ ದೇಶಗಳಲ್ಲೂ ನಿರ್ನಾಮವಾಗುವುವು."

"ಒಟ್ಟಾರೆಯಾಗಿ ಹೇಳುವುದಾದರೆ ಅಣು ಯುದ್ಧದಲ್ಲಿ ಜಯಶೀಲರಾಗುವವರಿಲ್ಲ. ಅಣು ವಿಕಿರಣಗಳು ಜಗತ್ತಿನ ಸುತ್ತಲೂ ಹರಡುವವು; ಹಲವಾರು ತಲೆಮಾರುಗಳ ತನಕ ಇದರ ಪರಿಣಾಮ ಜೀವದಿಂದುಳಿಯುವ ಪ್ರತಿಯೊಂದರ ಮೇಲೂ ಬೀಳುವುದು.

## ಒಂದು ದಿನ

"ಒಂದು ದಿನದಲ್ಲಿ ಒಂದು ದೊಡ್ಡ ನಗರಕ್ಕೆ 20 ಮೆಗಟನ್ ಅಣುಬಾಂಬು ಬಿದ್ದಿತೆಂದು ಯೋಚಿಸೋಣ, ಅದು 6 ಮೈಲಿ ವ್ಯಾಸದ ಅಗ್ನಿ ಉಂಡೆಯನ್ನು ಉಂಟು ಮಾಡುವುದು. ಅದರ ಉಷ್ಣವಾದರೋ 2 ರಿಂದ 3 ಕೋಟಿ ಡಿಗ್ರಿ (F) ಇರುವುದು. ನಗರದ ಎಲ್ಲ ಪ್ರದೇಶ, ರಸ್ತೆಗಳು ಅದರ ಕೆಳಗಿನ ಭೂಮಿ, ಸರ್ವ ಜೀವಜಂತುಗಳು ಸುಟ್ಟು ಆವಿಯಾಗುವುವು. ಹಲವು ಮೀಟರ್ ಆಳದ ಅಗ್ನಿ ಕುಂಡಗಳು ಏಳುವವು,

ಇಂತಹ ನಗರಗಳಲ್ಲಿ ತೈಲ, ಅನಿಲ, ಪೆಟ್ರೋಲ್‌ದಾಸ್ತಾನುಗಳಿರುತ್ತವೆ. ಈ ಬಾಂಬ್‌ಬಿದ್ದ ಪರಿಣಾಮವಾಗಿ ಅವುಗಳಿಗೆ ಬೆಂಕಿಹಿಡಿಯುತ್ತವೆ. ಪರಿಣಾಮವಾಗಿ ಸ್ಥಳದಲ್ಲಿ ನೂರಾರು ಮಂದಿ ಜನ ಸಾಯುತ್ತಾರೆ.

ಈ ಎಲ್ಲ ಅಗ್ನಿಪ್ರಕೋಪ ಒಂದುಗೂಡಿ ತಾಸಿಗೆ 100-200 ಮೈಲು ವೇಗದ ಗಾಳಿಯ ಪರಿಣಾಮವಾಗಿ 1,200 ಚದರ ಮೈಲುಗಳ ಸುತ್ತ ಬೆಂಕಿ ಹರಡಿಸುವುದು. ಅಣುಯುದ್ಧದ ವಿರುದ್ಧ ಆಶ್ರಯ ಪಡೆದು ಕುಳಿತವರು ಕೂಡಾ ಇದರಿಂದ ಬೆಂದು ಹೋಗುವರು.

## ಆಸ್ಪತ್ರೆಗಳ ನಾಶ

"ಆಸ್ಪತ್ರೆಗಳೆಲ್ಲ ಈ ಬಾಂಬು ದಾಳಿಯಿಂದ ನಾಶವಾಗುವವು. ಹೆಚ್ಚಿನ ಡಾಕ್ಟರುಗಳು ಒಂದೋ ಮರಣಹೊಂದುವರು ಇಲ್ಲವೇ ಗಾಯಗೊಳ್ಳುವರು. ಮಿಲಿಯಾಂತರ ಹೆಣಗಳ ರಾಶಿ ಬೀಳುವುದು. ಆಹಾರ, ನೀರು, ಗಾಳಿ ಎಲ್ಲವೂ ಕಲುಷಿತಗೊಳ್ಳುವವು. ಬದುಕಿ ಉಳಿದವರೂ ಹಸಿವು, ಅಂಟುರೋಗ, ಅಣುವಿಕಿರಣಗಳ ರೋಗಗಳಿಂದ ಸಾಯುವರು ; ಇನ್ನು ಅಣುಯುದ್ಧಗಳು ವಿಸ್ತಾರವಾಗಿ ಹರಡಿದರೆ ಅಮೇರಿಕಾ ಸೋವಿಯತ್ ಯೂನಿಯನ್‌ಗಳ ಬಹುಮಂತ ಜನತೆ ಹತರಾಗುವರು. ಹೆಚ್ಚಿನ ಕೈಗಾರಿಕಾ ಕೇಂದ್ರಗಳು ನಾಶವಾಗುವವು."

ಅಮೇರಿಕಾದ ವಿಜ್ಞಾನಿಗಳ ಗುಂಪೊಂದೂ ಇದೇ ರೀತಿ ಎಚ್ಚರಿಕೆಯನ್ನು ನೀಡುತ್ತಿದೆ; ಇಂತಹ ಅಣುಯುದ್ಧ ನಡೆದರೆ ಸಾವಿರಾರು ಮಿಲಿಯ ಜನ ಸಾಯುತ್ತಾರೆ, ಇಷ್ಟೇ ಅಲ್ಲ "ಇಡಿಯ ಜಗತ್ತೇ ಶೀತಮಯವಾಗುವುದು ; ಲೋಕದಲ್ಲೆಲ್ಲ ಕತ್ತಲೆ ಆವರಿಸುವುದು. ಇದರಿಂದ ಬದುಕಿ ಉಳಿಯಲು ಜನತೆ ಸಮರ್ಥವಾಗುವುದಿಲ್ಲ."

## ಸ್ವರನೆತ್ತಿ !

ಹೀಗಿರುವಾಗ ಇಂತಹ ಭಯಾನಕವಾದ, ಲೋಕವಿನಾಶಕವಾದ ಅಣುಯುದ್ಧವನ್ನು ಜಗತ್ತಿನ ಮೇಲೆ ಹೇರಲು ಬಯಸುವ ರೇಗನ್ನರ ನೇತೃತ್ವದ ಸಾಮ್ರಾಜ್ಯಶಾಹಿ ಯತ್ನಗಳನ್ನು ಹಿಮ್ಮೆಟ್ಟಿಸಬೇಕಾದುದು ಜನತೆಯ ಮುಖ್ಯವಾಗಿ ಕಾರ್ಮಿಕ ವರ್ಗದ ಕರ್ತವ್ಯ.

ದುಡಿಯುವ ವರ್ಗವೆಂದರೆ ಸಂಘಟಿತವಾದ, ಶಕ್ತಿಶಾಲಿಯಾದ ವರ್ಗ ; ಜಗತ್ತಿನ ಭವಿಷ್ಯವನ್ನು ನಿರ್ಣಯಿಸುವ ವರ್ಗ ; ಕೊಳೆತ ಸಮಾಜ ವ್ಯವಸ್ಥೆಯನ್ನೇ ನಿರ್ನಾಮಮಾಡುವ ವರ್ಗ. ಅಂತಹ ಕ್ರಾಂತಿಕಾರಿ ಕಾರ್ಮಿಕ ವರ್ಗ ರೇಗನರ ಅಣುಯುದ್ಧ ತಯಾರಿಕೆಯ ಕೈಗಳನ್ನೇ ತಡೆಹಿಡಿಯಬೇಕು ; ಇನ್ನೊಂದು ಯುದ್ಧವಾಗದಂತೆ ನಡೆಯುವ ಶಾಂತಿ ಚಳವಳಿಯಲ್ಲಿ ಭಾಗವಹಿಸಬೇಕು, ಜಗತ್ತಿನಲ್ಲಿ ಶಾಂತಿ ನೆಲೆಸಿದರೇನೇ ಜೀವನ ; ಜೀವನ ಸೌಲಭ್ಯ ; ಭವಿಷ್ಯ. ಇದನ್ನು ನೆನೆಸಿಕೊಂಡು ಶಾಂತಿಚಳವಳಿಯಲ್ಲಿ ತ್ರಿಕರಣಪೂರ್ವಕವಾಗಿ, ದುಡಿಯುವ ವರ್ಗ ಭಾಗವಹಿಸುವುದೆಂಬ ವಿಶ್ವಾಸ ನಮಗಿದೆ.

★

**"ನಿಜಕ್ಕೂ ಜಗತ್ತಿನಾದ್ಯಂತ ಸಾಮೂಹಿಕ ಚಳವಳಿಯನ್ನು ನಾವು ಬೆಳೆಸಬೇಕಿದ್ದರೆ ಶಾಂತಿ ಹೋರಾಟದ ಬಾವುಟವೂ ಕಾರ್ಮಿಕರ ತುರ್ತು ಬೇಡಿಕೆಗಳ ಹೋರಾಟದ ಬಾವುಟವೂ ಒಟ್ಟೊಟ್ಟಾಗಿ ಮುನ್ನಡೆಯಬೇಕು"**

**—ಕಾಮ್ರೇಡ್ ಕಾಸ್ಟ್ರೋ**

# ಆಂಧ್ರ: ವಂಚಕ ಕಾಂಗ್ರೆ ಕದೀಮನ ಬಂಧನ

ಆಂಧ್ರ ಪ್ರದೇಶದ ಅಲಿಸಿದ್ದಿಕನ ವಿಷಯ ನಾವು ಈ ಹಿಂದೆ ವರದಿ ಮಾಡಿದ್ದೆವು. ಕೊಲ್ಲಿದೇಶಗಳಲ್ಲಿ ನೌಕರಿ ತೆಗೆಸಿ ಕೊಡುವೆನೆಂದು ಹೇಳಿ ನೂರಾರು ಜನರಿಗೆ ಲಕ್ಷಾಂತರ ರೂ. ವಂಚಿಸಿದವನೀತ. ಈ ಕಾರಣದಿಂದ ತನ್ನ ಬಂಧನವನ್ನು ತಪ್ಪಿಸಿಕೊಳ್ಳಲು ಅವನು ಕಾಂಗ್ರೆ ಛತ್ರದಡಿ ಸೇರಿದ; ದೆಹಲಿಯಲ್ಲಿ ಸಂಜಯ ಗಾಂಧಿಯ ಜೀವನದ ಕುರಿತಾಗಿ 'ಭಾರತದಪುತ್ರ' ಎಂಬ ಪ್ರದರ್ಶನವನ್ನು ಏರ್ಪಡಿಸಿದ. ಸಂಜಯ ಗಾಂಧಿಯ ಜೀವನ ಚರಿತ್ರೆಯನ್ನು ಬರೆದು ಪ್ರಕಟಿಸಿದ; ಈ ಪುಸ್ತಕದ ಬಿಡುಗಡೆಯನ್ನು ಸ್ವತಃ ಇಂದಿರಾ ಗಾಂಧಿಯವರೇ ಮಾಡಿದರು. ಹೀಗೆ ಎರಡು ವರ್ಷ ಕಾಲ ಪೋಲಿಸರ ಬಂಧನದಿಂದ ತಪ್ಪಿಸಿಕೊಂಡ ಈತನನ್ನು ಈಗ ಆಂಧ್ರ ಪೋಲಿಸರು ದಸ್ತಗಿರಿ ಮಾಡಿದ್ದಾರೆ.

ಅಲಿಮುತ್ತಾತನ ಮಗ ಸೇರಿ ಒಂದು ಸಂಸ್ಥೆಯನ್ನು ತೆರೆದರು. ಅದರ ಹೆಸರು 'ಅಲ್ ರರ್ಷಾಮ್ ಟ್ರಾವೆಲ್ಸ್' ಪ್ರೈವೆಟ್ ಲಿಮಿಟೆಡ್, ಇನ್ನೊಂದು ಸಂಸ್ಥೆಯೂ ಆತನಿಗಿದೆ 'ಮೆನ್ಸ್ ಇಂಟರ್ ನ್ಯಾಶನಲ್'. ಈ ಸಂಸ್ಥೆಗಳ ಮೂಲಕ ಸೌದಿ ಅರೆಬಿಯದಲ್ಲಿ ಕೆಲಸ ಕೊಡಿಸುವೆನೆಂದು ಹೇಳಿ ಆತ ನೂರಾರು ಜನರಿಗೆ ಮೋಸ ಮಾಡಿದ.

ಹಿಂದೆ ಕಾಂಗ್ರೆ ಸರಕಾರವಿದ್ದಾಗ ಇವನಿಗದು ರಕ್ಷಣೆ ನೀಡಿತ್ತು. ಶಾಸನ ಸಭೆಯಲ್ಲೂ ಈ ಕುರಿತು ಪ್ರಸ್ತಾಪ ಬಂದಿತ್ತು. ಈ ಮಹಾನುಭಾವ ಕಾಂಗ್ರೆ ನಾಯಕರೊಂದಿಗೆ ಬಹಿರಂಗವಾಗಿ ಸುತ್ತುತ್ತಿದ್ದರೂ ಇವನನ್ನು ಬಂಧಿಸಲು ಪೋಲೀಸರು ವಿಫಲರಾಗಿದ್ದಾರೆ ಎಂದು ಪ್ರತಿಪಕ್ಷಗಳು ಆರೋಪಿಸಿದ್ದವು.

## ಕಳ್ಳಸಾಗಾಟ

ಗಾಲ್ವಾರಿ ಸಹೋದರರ ಕುರಿತು ನಿಮಗೆ ಗೊತ್ತಿರಬಹುದು. ಕೊಲ್ಲಿ ಪ್ರದೇಶದಲ್ಲಿರುವ ಪ್ರಸಿದ್ಧ ಕಳ್ಳ ಸಾಗಾಣಿಕೆದಾರರು. ವಾಜಪೇಯಿಯವರು ವಿದೇಶಾಂಗ ಸಚಿವರಾಗಿದ್ದಾಗ ಅವರೂ ಈತನ ಆತಿಥ್ಯ ಸ್ವೀಕರಿಸಿದ್ದರು. ನಂತರ ಮೇಲೆ ಹೇಳಿದ ಅಲಿಯ ಮೂಲಕ ಕಾಂಗ್ರೆ ನಾಯಕರೂ ಗಾಲ್ವಾರಿ ಸಹೋದರರಿಂದ ಹಣ ಪಡೆಯುತ್ತಿದ್ದರು. ಆಂಧ್ರಪ್ರದೇಶದಲ್ಲಿ ಕೆ. ಅಂಜಯ್ಯ ಮುಖ್ಯಮಂತ್ರಿಯಾಗಿದ್ದಾಗ ಈ ಸಿದ್ದಿಕ್ ಅಲಿ ಭಾರಿ ಭೋಜನ ಕೂಟವೊಂದನ್ನು ಏರ್ಪಡಿಸಿದ್ದ. ಅದರಲ್ಲಿ ಅಂಜಯ್ಯನವರೂ ಭಾಗವಹಿಸಿದ್ದರು.

ಕಳೆದ ವರುಷ ಆಂಧ್ರದಲ್ಲಿ ಚುನಾವಣೆ ನಡೆದಾಗ ತನ್ನ ಮಗಳ ಗಂಡನಿಗೆ ಕಾರಾವಾನ್ ಕ್ಷೇತ್ರದಲ್ಲಿ ಕಾಂಗ್ರೆ ಟಿಕೇಟನ್ನು ತೆಗೆಸಿಕೊಡುವಲ್ಲಿ ಇವನು ಯಶಸ್ವಿಯಾದ. ಈತನಿಗಾಗಿ ಆಂಧ್ರದ ಐವರು ಮಾಜಿ ಮುಖ್ಯಮಂತ್ರಿಗಳು ಪ್ರಚಾರ ಮಾಡಿದ್ದರು. ಇಷ್ಟೇ ಅನ್ನುತ್ತೀರಾ ? ಅವನ ಮೇಲಿದ್ದ ವಂಚನೆಯ ಆರು ಖಟ್ಲೆಗಳನ್ನು ಅವರು ವಾಪಸು ಪಡೆದಿದ್ದರು. ಇದೀಗ ಸಿದ್ದಿಕಿಯ ಬಂಧನವಾಗಿದೆ. ಮುಂದೇನಾಗುವುದೋ ಕಾದು ನೋಡಬೇಕು.

★

ನರಗುಂದ :

# ನಂದಿ-ಹಸಬಿ ಗಿರಣಿ ಲಾಕೌಟು

ನರಗುಂದದಲ್ಲಿರುವ ನಂದಿ–ಹಸಬಿ ಜವಳಿ ಗಿರಣಿಯನ್ನು ಆಡಳಿತವು ಕಳೆದ 5 ರಂದು ಪೂರ್ವಾಹ್ನ ಒಮ್ಮಿಂದೊಮ್ಮೆಗೇ ಲಾಕೌಟು ಮಾಡಿದೆ. ಈ ಬಗ್ಗೆ ಸರಕಾರಕ್ಕಾಗಲೀ, ಕಾರ್ಮಿಕರಿಗಾಗಲೀ ಆಡಳಿತವು ಯಾವ ಮುನ್ಸೂಚನೆಯನ್ನೂ ನೀಡಿರಲಿಲ್ಲ. ಮಿಲ್‌ನಲ್ಲಿ ಕಾರ್ಮಿಕರಿಂದ ಯಾವ ಅಹಿತಕಾರಿ ಘಟನೆಗಳೂ ನಡೆದಿರಲಿಲ್ಲ. ತಾ|| 4 ರವರೆಗೂ ಮಿಲ್ ಸುಸೂತ್ರವಾಗಿ ನಡೆದುಕೊಂಡು ಬಂದಿತ್ತು. ಹಾಗಾದರೆ ಈ ಲಾಕೌಟು ಏಕೆ ? ಕಾರ್ಮಿಕರ ವಿರುದ್ಧ ಸೇಡು ತೀರಿಸಲು ಆಡಳಿತ ವರ್ಗ ವಹಿಸಿದ ಕ್ರಮವಿದು. ಈ ಲಾಕೌಟು ಆಕ್ರಮ ಹಾಗೂ ಕಾನೂನುಬಾಹಿರ.

ತಾ 5ರಂದು ಎಂದಿನಂತೆ ಕಾರ್ಮಿಕರು ಕೆಲಸಕ್ಕೆ ಹೋದಾಗ ಅವರು ಕಾರ್ಖಾನೆಯ ಒಳಗೆ ಪ್ರವೇಶಿಸದಂತೆ ಕಾವಲುಗಾರರು ತಡೆದರು. ನಿಸ್ಸಹಾಯಕರಾದ ಕಾರ್ಮಿಕರು ಗೇಟಿನ ಮುಂದೆ ಕುಳಿತರು.

ಈ ಅನ್ಯಾಯದ ಲಾಕೌಟು ವಿರುದ್ಧ ಮರುದಿನ ಈ ಕಾರ್ಮಿಕರು ಭಾರಿ ಮೆರವಣಿಗೆ ನಡೆಸಿದರು. ಪ್ರಚಂಡ ಸಭೆ ನಡೆಯಿತು.

ಈ ಸಭೆಯಲ್ಲಿ ಕಾರ್ಮಿಕ ನಾಯಕರಾದ ಎ.ಜೆ.ಮುಧೋಳ, ಎಂ. ಏ. ಮೋದಿ. ಬಾಲಚಂದ್ರ ಗಂಗೂರ ಮಾತನಾಡಿ ಆಡಳಿತ ವರ್ಗದ ನೀತಿಯನ್ನು ಬಲವಾಗಿ ಖಂಡಿಸಿದರು. ರಾಜ್ಯ ಸರಕಾರ ಕೂಡಲೇ ಮಧ್ಯಪ್ರವೇಶಿಸಬೇಕು. ಈ ಲಾಕೌಟನ್ನು ತೆರೆಸಬೇಕು, ಲಾಕೌಟಿನ ಪರಿಣಾಮವಾಗಿ ಬೀದಿಪಾಲಾಗಿರುವ 800ಮಂದಿ ಕಾರ್ಮಿಕರು ಉಪವಾಸ ಬಿದ್ದಿದ್ದಾರೆ, ಅವರಿಗೆ ಲಾಕೌಟ್ ಕಾಲದ ಕೂಲಿ ಕೊಡಬೇಕು ಎಂದೂ ಅವರು ಒತ್ತಾಯಿಸಿದರು.

'ಕೆಂಬಾವುಟ'
ತಪ್ಪದೆ ಓದಿ

# ಮೈಸೂರು : ಕೆ. ಆರ್. ಮಿಲ್‌ನಲ್ಲಿ ಇಂಟಕ್ಕೈ ಪುಂಡಾಟಿಕೆ

ಮೈಸೂರು ನಗರದ ಶ್ರೀ ಕೃಷ್ಣ ರಾಜೇಂದ್ರ ಮಿಲ್ಸ್ ಹಳೆಯ ಮಿಲ್. ಈ ಮಿಲ್‌ನಲ್ಲಿ ಎಐಟಿಯುಸಿ ಯೂನಿಯನ್ ಸುಸಂಘಟಿತವಾಗಿದೆ. ಪ್ರಾತಿನಿಧಿಕವಾಗಿದೆ. ಆದರೆ ಆಡಳಿತವರ್ಗವು ತನ್ನ ಕೈಗೊಂಬೆಯಾಗಿರುವ ಇಂಟಕ್ ಯೂನಿಯನಿನೊಂದಿಗೆ ಒಂದು ಗುಪ್ತ ಒಪ್ಪಂದವನ್ನು 1979ರಲ್ಲೇ ಮಾಡಿಕೊಂಡ ಸಂಗತಿ ಈಗ ಬೆಳಕಿಗೆ ಬಂದಿದೆ. ಹೀಗೆ ಮಾಡಿಕೊಂಡ ಒಪ್ಪಂದಕ್ಕೆ ಇಂಟಕ್ಕೈ ಯೂನಿಯನ್ ತನ್ನ ಸರ್ವಸದಸ್ಯರ ಸಭೆ ಕರೆದು ಅನುಮತಿಯನ್ನು ಪಡೆದಿರಲಿಲ್ಲ. ಈ ಒಪ್ಪಂದದ ಮುಖ್ಯ ಅಂಶವೆಂದರೆ ಕೆಲಸಗಾರರ ಶ್ರಮಭಾರವನ್ನು ಹೆಚ್ಚಿಸುವುದು.

1979 ರಲ್ಲಿ ಹೀಗೆ ಮಾಡಿಕೊಂಡ ಒಪ್ಪಂದವನ್ನು ಜಾರಿ ಮಾಡಲು ಆಡಳಿತ ವರ್ಗ ಈಗ ಹೊರಟಿದೆ. ಇದನ್ನು ಎಐಟಿಯುಸಿಗೆ ಸೇರಿದ ಕಾರ್ಮಿಕರು ವಿರೋಧಿಸಿದರು, ಆಗ ನಡೆದುದೇನು ? ಇಂಟಕ್ಕೈ ನಾಯಕರ ಗೂಂಡಾಗಿರಿ. ಕಾರ್ಖಾನೆಯ ಒಳಗೂ, ಹೊರಗೂ ಎಐಟಿಯುಸಿ ಕಾರ್ಮಿಕರ ಮೇಲೆ ಪುಂಡಾಟಿಕೆ, ಕಿರುಕುಳ ಈ ಶ್ರಮ ಭಾರವನ್ನು ಒಪ್ಪಿಕೊಳ್ಳದ ಕಾರ್ಮಿಕರನ್ನು ಕೆಲಸದಿಂದ ಹೊರದೂಡಲಾಗುತ್ತದೆ, ಬಲಾತ್ಕಾರವಾಗಿ ಶ್ರಮ ಭಾರ ಹೇರಲು ಯತ್ನಿಸಲಾಗುತ್ತಿದೆ.

ಇದಕ್ಕೆ ಉದಾಹರಣೆ ಕಳೆದ 3ರಂದು ನಡೆದ ಘಟನೆ. ಅಂದು ಇಂಟಕ್ಕೈ ಸಂಘದ ನಾಯಕರಿಗೆ ಮಾಲಿಕವರ್ಗ ಹಣ ಕೊಟ್ಟು, ತಿನ್ನಿಸಿತು, ಕುಡಿಸಿತು, ಎಐಟಿಯುಸಿ ಕಾರ್ಮಿಕರ ಮೇಲೆ ಈ ಗೂಂಡಾಗಳ ಮೂಲಕ ದಾಳಿ ಮಾಡಿಸಿತು. ಪರಿಣಾಮವಾಗಿ ಮಿಲ್‌ನ ಶಾಂತಿಗೆ ಧಕ್ಕೆ ಬಂದಿದೆ. ಈ ಅಶಾಂತಿಗೆ ಕಾರಣ ಮಾಲೀಕ ವರ್ಗ ಮತ್ತು ಇಂಟಕ್ಕೈ ಸಂಘದವರು.

ಈ ಮಧ್ಯೆ ಇಲ್ಲಿನ ಶಾಸಕರ ವಿಷಯವನ್ನೂ ಹೇಳಬೇಕು. ಅವರ ಹೆಸರು ಸಿದ್ದರಾಮಯ್ಯ. ಇವರು ಜನತಾರಂಗ ಮೈತ್ರಿ ಕೂಟದ ಬೆಂಬಲ ಪಡೆದು ಲೋಕದಳದ ಅಭ್ಯರ್ಥಿಯಾಗಿ ಕೆ.ಆರ್ ಮಿಲ್ಸ್ ನೌಕರರ ಸಹಾಯ ಸಹಕಾರ ಪಡೆದು ಆರಿಸಿ ಬಂದವರು. ಇನ್ನೊಬ್ಬ ಶಾಸಕ ಜನತಾ ಪಕ್ಷದ ಕೆಂಪೇಗೌಡರು ಮತ್ತು ಜಿಲ್ಲಾ ಕಾರ್ಯದರ್ಶಿ ಜಿ. ಮಾದೇಗೌಡ, ತನ್ನನ್ನು ಜನತಾ ಪಕ್ಷದ ಮುಖಂಡನೆಂದು ಕರೆದುಕೊಳ್ಳುವ ಕೆಂಪೀರೆಗೌಡ. ಇವರು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಮಾಲಕರ ಆಶಿರ್ವಾದದಿಂದ ನಡೆಯುವ ಕಾಂಗ್ರೆಸ್ಸಿನ ಇಂಟಕ್ ಸಂಘಕ್ಕೆ ಹಲವಾರು ರೀತಿಯಲ್ಲಿ ಬೆಂಬಲ ನೀಡುತ್ತಿದ್ದಾರೆ.

## ಎಚ್ಚರಿಕೆ

ಕಳೆದ 2ರಂದು ಕಾರ್ಮಿಕರ ಮೇಲೆ ಇಂಟಕ್‌ಗಳು ನಡೆಸಿದ ಗೂಂಡಾಗಿರಿಯಿಂದ ಹಲವಾರು ಮಂದಿ ಗಾಯಗೊಂಡಿದ್ದಾರೆ. ಈ ಸಂಬಂಧ ಕೆಲವರನ್ನು ಬಂಧಿಸಲಾಗಿದೆ. ಅವರಿಗೆ ಜನತಾ ಪಕ್ಷ ನೀಡುತ್ತಿರುವ ಬೆಂಬಲವನ್ನು ಎಐಟಿಯುಸಿ ಖಂಡಿಸಿದೆ; ಇನ್ನು ಮುಂದೆ ಇಂತಹ ಪುಂಡಾಟಿಕೆ ನಡೆದರೆ ಕಾರ್ಮಿಕರು ಸುಮ್ಮನಿರಲಾರರು ಎಂದೂ ಎಐಟಿಯುಸಿ ಆಡಳಿತವರ್ಗಕ್ಕೆ ಎಚ್ಚರಿಕೆ ನೀಡಿದೆ.

ಈ ಪುಂಡಾಟಿಕೆಯನ್ನು ಖಂಡಿಸಿ ಎಐಟಿಯುಸಿ ಯೂನಿಯನಿನ ಕಾರ್ಮಿಕರು ಭಾರಿ ಮೆರವಣಿಗೆ ನಡೆಸಿ ಜಿಲ್ಲಾ ಪೋಲಿಸಧಿಕಾರಿಗಳಿಗೆ ಮನವಿ ನೀಡಿ ತಮಗೆ ನ್ಯಾಯವನ್ನೊಗಿಸಬೇಕೆಂದೂ ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದೂ ಕೇಳಿಕೊಂಡಿದ್ದಾರೆ. ಅದೇ ವೇಳೆ ಇಂಟಕ್ ಬರಲಿ, ಯಾರೇ ಬರಲಿ ತಮ್ಮ ಐಕ್ಯವನ್ನು ಉಳಿಸಿಕೊಳ್ಳುವ ಪಣವನ್ನು ಕೆ. ಆರ್. ಮಿಲ್ಸ್ ಕಾರ್ಮಿಕರು ತೊಟ್ಟಿದ್ದಾರೆ.

# ಮಹಿಳಾ ಸಂಘಗಳ ನೆರವಿನಿಂದ ದುಡಿಯುವ ಮಹಿಳೆಯರ ಸಂಘಟನೆ

(7ನೇ ಪುಟದಿಂದ)

ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಅವು ಅಲಕ್ಷಿಸಿವೆ.

ಅಸಂಘಟಿತ ವಿಭಾಗದಲ್ಲಿರುವ ದುಡಿಯುವ ಮಹಿಳೆಯರನ್ನು ಸಂಘಟಿಸುವಲ್ಲಿ ಮಹಿಳಾ ಸಂಘಟನೆಗಳು ಈ ರಂಗದಲ್ಲಿರುವ ಟ್ರೇಡ್ ಯೂನಿಯನ್‌ಗಳ ಸಹಕಾರದಿಂದ ಮಾಡಬೇಕಾಗಿದ್ದು ಬಹಳವಿದೆ. ಟ್ರೇಡ್ ಯೂನಿಯನ್‌ಗಳಲ್ಲಿ ಜವಾಬ್ದಾರಿ ವಹಿಸಲು, ಅನೇಕ ಮಹಿಳೆಯರಿಗೆ ಕಷ್ಟವಾಗುತ್ತದೆ. ಇಂದಿನ ಭಾರತೀಯ ಸಮಾಜದಲ್ಲಿರುವ ಸಾಮಾಜಿಕ ಅಸಮಾನತೆ ಹಾಗೂ ವಿವಿಧ ರೀತಿಯ ಧೋರಣೆಗಳಿಂದಾಗಿ ಅವರು ಅನೇಕ ತೊಂದರೆಗಳನ್ನು ಎದುರಿಸಬೇಕಾಗಿದೆ. ದುಡಿಯುವ ಮಹಿಳೆಯರು ದೊಡ್ಡ ಪ್ರಮಾಣದಲ್ಲಿರುವ ಪ್ರದೇಶಗಳನ್ನು ಮಹಿಳಾ ಸಂಘಟನೆಗಳು ಗೊತ್ತುಮಾಡಿ, ಒಟ್ಟಾರೆಯಾಗಿ ಮಹಿಳೆಯರಲ್ಲಿ ಒಳ್ಳೆಯ ವಾತಾವರಣ ಉಂಟುಮಾಡಲು ಶ್ರಮಿಸಬೇಕು; ಇದರಿಂದಾಗಿ ದುಡಿಯುವ ಮಹಿಳೆಯರು ದೈನಂದಿನ ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಹೆಚ್ಚಿನ ಸಕ್ರಿಯ ಪಾತ್ರ ವಹಿಸಲು ಸಾಧ್ಯ. ಅವರ ಸೋದರಿಯರು ಮನೆ ಕೆಲಸ ಮತ್ತು ಮಕ್ಕಳ ಪಾಲನೆಯಲ್ಲಿ ನೆರವಾಗಿ ಸಕ್ರಿಯ ಬೆಂಬಲ ನೀಡುವರು.

## ಕೃಷಿ ಕಾರ್ಮಿಕರು

ಅಸಂಘಟಿತ ವಿಭಾಗದ ಹಾಗೂ ವಿಶೇಷವಾಗಿ ಕೃಷಿಯಲ್ಲಿ ದುಡಿಯುವ ಮಹಿಳೆಯರಿಗೆ ಮತ್ತೊಂದು ಪ್ರಮುಖ ಸಮಸ್ಯೆಯೆಂದರೆ: ಮಕ್ಕಳನ್ನು ನೋಡಿಕೊಳ್ಳುವ ಬಾಲವಾಡಿಗಳ ಕೊರತೆ ಹಾಗೂ ಯಾವುದೇ ಕಾರ್ಖಾನೆಯಲ್ಲಿರುವಂತೆ ಕಾರ್ಮಿಕರ ಲೆಕ್ಕವಿಡದೆ ಪ್ರಸವ ಸೌಲಭ್ಯಗಳನ್ನು ಕೊಡಲಾಗುವುದಿಲ್ಲ, ಮಹಿಳೆಗೆ ಕೆಲಸ ಮಾಡುವ ಹಕ್ಕನ್ನು ಸಂಪೂರ್ಣವಾಗಿ ಒಪ್ಪಿ ಜಾರಿಮಾಡಬೇಕಾದಲ್ಲಿ ಈ ಸೌಲಭ್ಯಗಳನ್ನು ಸಮಾಜವಾದಿ ದೇಶಗಳು ಕೊಡುವ ರೀತಿಯಲ್ಲಿ, ಸರಕಾರವೇ ಕೊಡಬೇಕು. ದುಡಿಯುವ ಮಹಿಳೆಯರ, ಮಹಿಳೆ ಹಾಗೂ ತಾಯಿಯ ಹಕ್ಕುಗಳನ್ನು ರಕ್ಷಿಸದಿದ್ದಲ್ಲಿ ಗೃಹಿಣಿ ಹಾಗೂ ತಾಯಿಯ ಅವಶ್ಯಕತೆಗಳನ್ನು ಪೂರೈಸದಿದ್ದಲ್ಲಿ ಅವರು ತಮ್ಮ ಪಾತ್ರವನ್ನು ವಹಿಸುವಂತೆ ಮತ್ತು ತಮ್ಮ ಹಕ್ಕುಗಳ ರಕ್ಷಣೆಗಾಗಿ ಹಾಗೂ ಕೇಳಿಕೆಗಳ ಈಡೇರಿಕೆಗಾಗಿ ಸಂಘಟಿತರಾಗುವಂತೆ ಅವರಲ್ಲಿ ಪ್ರಯತ್ನಶೀಲತೆ ತರುವುದು ಸುಲಭ ಸಾಧ್ಯವಿಲ್ಲ.

## ಸ್ವಾತಂತ್ರ್ಯದ ಮೂಲ

ಮಹಿಳೆಯರ ದುಡಿಯುವ ಹಕ್ಕು ಕೇವಲ ಆರ್ಥಿಕ ಅವಶ್ಯಕತೆಯಲ್ಲ; ಅದು ಸ್ವಾತಂತ್ರ್ಯದ ಮತ್ತು ಪ್ರಗತಿಯ ಮೂಲವಾಗಿದೆ. ಮಹಿಳೆಯರ- ವಿಶೇಷವಾಗಿ ಅಸಂಘಟಿತ ವಿಭಾಗದಲ್ಲಿರುವ ಮಹಿಳೆಯರ – ಸಾಮೂಹಿಕ ಸ್ಥಾನವನ್ನು ಕೀಳೆಂದು ಪರಿಗಣಿಸಬಾರದು ; ಅವರನ್ನು ಈ ವಿಭಾಗಕ್ಕೇ ಸೀಮಿತಗೊಳಿಸಲಾಗಿದೆ. ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಮುಂದುವರಿಯಲು ಅವಕಾಶಗಳನ್ನು ಕೊಡಲಾಗುತ್ತಿಲ್ಲ, ಅನಕ್ಷರತೆ, ತರಬೇತಿಯ ಕೊರತೆ ಮತ್ತು ದುಡಿಯುವ ಮಹಿಳೆಯರಾಗಿ ತಮ್ಮ ಹಕ್ಕುಗಳ ಬಗ್ಗೆ ಇರುವ ಅಜ್ಞಾನಗಳನ್ನು ದೂರಗೊಳಿಸಲು ಅವರಿಗೆ ಅವಕಾಶಗಳನ್ನು ಖಾತ್ರಿಗೊಳಿಸಲಾಗಿಲ್ಲ, ಮಹಿಳೆದಿರುವ ಉದ್ಯೋಗದ ಹಕ್ಕನ್ನು ಕೇವಲ ಮಹಿಳೆಯ ಹಕ್ಕೆಂಬ ಸಂಕುಚಿತ ವ್ಯಾಪ್ತಿಯಲ್ಲಿ ನೋಡಬಾರದು ; ಅದು ಮೂಲಭೂತ ಹಕ್ಕೂ ಆಗಿದೆ ; ಈ ಹಕ್ಕು ಕೇವಲ ಆರ್ಥಿಕ ಅವಶ್ಯಕತೆ ಮಾತ್ರವಲ್ಲದೆ ಸಮಾಜದ ಮುನ್ನಡೆಗೆ ಅತ್ಯಗತ್ಯವಾಗಿದೆ. ದೊಡ್ಡ ಪ್ರಮಾಣದ ನಿರುದ್ಯೋಗವಿರುವ ಭಾರತದಂಥ ದೇಶದಲ್ಲಿ ಈ ಹಕ್ಕನ್ನು ಹಂತಹಂತವಾಗಿ ಪಡೆದುಕೊಳ್ಳಲಾಗದು. ಮೂಲಭೂತ ಸಾಮಾಜಿಕ–ಆರ್ಥಿಕ ಬದಲಾವಣೆಗಳನ್ನು ತರುವುದರಿಂದ ಮತ್ತು ಈ ಬದಲಾವಣೆಗಳ ಅವಶ್ಯಕತೆಯನ್ನು ಮಹಿಳೆಯರೇ ಮನಗಾಣುವಂತೆ ಮಾಡುವುದರಿಂದ ಮಾತ್ರವೇ ಈ ಹಕ್ಕನ್ನು ಗಳಿಸಲು ಸಾಧ್ಯ. ಟ್ರೇಡ್‌ಯೂನಿಯನ್‌ಗಳು ಮಹಿಳಾ ಸಂಘಟನೆಗಳ ಸಹಕಾರದೊಡನೆ ಈ ನಿಟ್ಟಿನಲ್ಲಿ ದುಡಿಯುವ ಮಹಿಳೆಯರನಡುವೆ ಕೆಲಸಮಾಡಬೇಕಾಗಿದೆ. ಉದ್ಯೋಗದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ, ರಾಷ್ಟ್ರೀಯ ಕನಿಷ್ಠ ವೇತನ, ನಿರುದ್ಯೋಗ– ಅರೆಉದ್ಯೋಗ ನಿವಾರಣೆ ಮತ್ತು ಎಲ್ಲಾ ದುಡಿಯುವ ಮಹಿಳೆಯರ ಹಕ್ಕು ಸಾಧನೆ–ಈಗುರಿಗಳನ್ನು ಸಾಧಿಸಲು ಬೇರೆ ಯಾವ ದಾರಿಯೂ ಇಲ್ಲ.

# ಶಿಗ್ಗಾವಿ : ಪುರಸಭೆ ಕಾರ್ಮಿಕರ ವಿಜಯ

ಈ ಹಿಂದೆ ವರದಿಯಾದಂತೆ ಧಾರವಾಡ ಜಿಲ್ಲೆಯ ಶಿಗ್ಗಾಂವ್ ಪುರಸಭೆಯ ಕಾರ್ಮಿಕರ ಚಳವಳಿಯ ಪರಿಣಾಮವಾಗಿ ನಗರಸಭಾಡಳಿತ ಧಾರವಾಡ ಜಿಲ್ಲಾ ನೌಕರರ ಸಂಘದೊಡನೆ ಒಂದು ಒಪ್ಪಂದವನ್ನು ಮಾಡಿಕೊಂಡಿದೆ.

ಈ ಒಪ್ಪಂದದಂತೆ ಪುರಸಭೆಯ ಎಲ್ಲ ಕಾರ್ಮಿಕರಿಗೆ 1983ರ ಫೆಬ್ರವರಿಯಲ್ಲಿ ನೀಡಿದಂತೆ ಮೊದಲಿನ ವೇತನವನ್ನು 1984 ರ ಜನವರಿಯಿಂದ ಕೊಡಲು ಆಡಳಿತ ಒಪ್ಪಿಕೊಂಡಿದೆ. ಮಾರ್ಚ್ 83ರಿಂದ ಕಡಿತ ಮಾಡಿದ ವೇತನವನ್ನು ಒಟ್ಟು ಮೂರು ಕಂತುಗಳಲ್ಲಿ ಪಾವತಿ ಮಾಡುವುದಕ್ಕೂ ಪುರಸಭಾ ಆಡಳಿತ ಸಮ್ಮತಿಸಿದೆ.

ಈ ಮಾತುಕತೆಗಳಲ್ಲಿ ನೌಕರರ ಸಂಘದ ಕಾರ್ಯದರ್ಶಿ ಎಂ. ರಾಮರಾವ್, ಜಿ. ಎಸ್. ಜಕ್ಕಣ್ಣನವರ್ ಶರೀಫ್ ಕ್ಯಾಳಕೊಂಡ ಇವರು ಕಾರ್ಮಿಕರ ಪರವಾಗಿ ಭಾಗವಹಿಸಿದ್ದರು.



'ಕೆಂಬಾವುಟ ಚಂದಾದರ'

ವರ್ಷಕ್ಕೆ 30 ರೂ.

ಅರ್ಧ ವರ್ಷಕ್ಕೆ 17 ರೂ.

ಬಿಡಿ ಪ್ರತಿ 60ಪೈಸೆ.






ENROL WITH ANY ONE OF US
(Authorised Agents)

People's Publishing House (P) Ltd., 5-E Rani Jhansi Road, New Delhi-110 055 ● Magazine Centre, M.C.D. Building, No 2, IInd Floor, Deshbandhu Gupta Road, New Delhi-110 055. ● Lok Vangmaya Griha (P) Ltd., 85 Sayani Road, Prabhadevi, Bombay-400 025. ● People's Book House, Gheekanta Crossing, Relief Road, Ahmedabad-380 001. ● Vijay Stores, Station Road, Anand-388 001. ● Manisha Granthalaya (P) Ltd., 4/3-B, Bankim Chatterjee Street, Calcutta-700 073 ● National Book Agency (P) Ltd., 2, Surya Sen Street Calcutta-700 012. ● Bingsha Shatabdi, 75-C, Park Street, Calcutta-700 016. ● Rajasthan People's Publishing House (P) Ltd., Chameliwala Market, M.I. Road, Jaipur-302 001. ● Magazine Centre, Ganapathi Bldgs., 2nd Floor, B.V.K. Iyengar Road, Bangalore-560 053. ● Navakarnataka Publications (P) Ltd., B.R.C. Complex, S.C. Road, Bangalore-560 009. ● Visalaandhra Publishing House, Chandram Bldgs., Machavaram P.O. Vijayawada-520 004 ● Magazine Centre, 54, Abid Shopping Centre, Chiragali Lane, Hyderabad-500 001. ● New Century Book House (P) Ltd., 41-B, Sidco Industrial Estate, Ambattur, Madras-600 098. ● Prabhath Book House, Vanchiyoor, Trivandrum-695 024. ● Punjab Book Centre, S.C.O. 1126-27, Sector-22-B, Chandigarh-160 022 ● Sahityalaya, 56/5, Sirki Mahal, Kanpur.-208001 ● Vijay Associates, Commissariat Bldgs., 231, Dr. D.N. Road, Fort, Bombay-400001.

OR WITH

OUR SUB AGENTS CARRYING IDENTITY CARDS INSIST ON UNIFORM SUBSCRIPTION RECEIPTS ISSUED BY US AGAINST PAYMENT

Ask for Uniform subscription Receipts which are valid for Soviet Periodicals only. ADMARK

# ಆಧುನಿಕ ವಿಶ್ವಾಮಿತ್ರ-ಮೇನಕೆ; ರಾಮ ಲಕ್ಷ್ಮಣರು

ವಿಶ್ವ ಹಿಂದೂ ಪರಿಷತ್‌ನ ದ್ವಿತೀಯ ಪ್ರಾಂತ ಸಮ್ಮೇಳನ ಧರ್ಮಸ್ಥಳದ ಬಳಿಯಿರುವ ಉಜಿರೆಯಲ್ಲಿ ನಡೆದಾಗ ಈ ಸಮ್ಮೇಳನದ ವೇಳೆ ಸುತ್ತಮುತ್ತಲ ಬಾರ್, ಶರಾಬು, ಅಂಗಡಿಗಳನ್ನು ಸರಕಾರ ಬಂದ್ ಮಾಡಿಸಿದ್ದು ಏಕೆ? ಎಂದೊಬ್ಬರು ಪುರೋಹಿತರನ್ನು ಕೇಳಿದ್ದಾರೆ. ಹಿಂದೂ ಅಲ್ಲದ ಮುಂದೂ ಇಲ್ಲದ, ಶರಾಬು ಬ್ರಾಂಡಿ ವಿಸ್ಕಿಯ ರುಚಿಯೇ ತಿಳಿಯದ ಪುರೋಹಿತರು ಇದಕ್ಕೆ ಏನೆಂದು ಉತ್ತರಿಸಬೇಕೋ ತಿಳಿಯದು.

ಸರಕಾರ ಈ ರೀತಿ ಮಾದಕ ಪಾನೀಯಗಳ ಅಂಗಡಿಗಳನ್ನು ಮುಚ್ಚಿಸಿದ್ದು ಹಿಂದಾಲೋಚನೆ (ಹಿಂದು + ಆಲೋಚನೆ) ಯಿಂದಲೋ ಮುಂದಾಲೋಚನೆಯಿಂದಲೋ ಪುರೋಹಿತರಿಗೆ ತಿಳಿಯದು. ಆದರೆ ಒಂದು ಮಾತ್ರ ನಿಜ, ಹೀಗೆ ಶರಾಬು ಅಂಗಡಿಗಳನ್ನು ಮುಚ್ಚಿಸಿದುದು ವಿಶ್ವ ಹಿಂದೂ ಪರಿಷತ್ತಿಗೂ ಅದರ ನಾಯಕರಿಗೂ ಅದರಲ್ಲಿ ಭಾಗವಹಿಸಿದ ಇತರ ಮಠಾಧಿಪತಿಗಳಿಗೂ ಮಾಡಿದ ಅಪಮಾನವಲ್ಲದೆ ಬೇರಲ್ಲ ಏನೆನ್ನುತ್ತೀರಾ? ಈ ಶರಾಬು ಅಂಗಡಿ, ಬಾರ್‌ಗಳಿದ್ದರೆ ಅಲ್ಲಿಗೆ ಬಂದವರು ಕುಡಿದು ಅಮಲೇರಿ ಗಲಾಟೆ ಮಾಡಬಹುದೆಂದು ಸರಕಾರ ಯೋಚಿಸಿತ್ತೋ ಏನೊ? ಎಷ್ಟೆಂದರೂ 'ಸೋಮರಸ' ಎಂಬುದು ಹಿಂದೂ ಸಂಸ್ಕೃತಿಯ ಒಂದು ಅಂಗ ತಾನೆ? ಅಲ್ಲವೇ?

80 ಸಾವಿರ ಬಾಟ್ಲಿಗಳು ಖರ್ಚಾದುವು ಎಂದು ವರದಿಯಾಗಿದೆ. ಇದು ಗಂಗಾ ಜಲದ ಬಾಟ್ಲಿಗಳು ಎಂಬುದನ್ನು ಮರೆಯಬಾರದು ಎಂದು ಪುರೋಹಿತರು ಜ್ಞಾಪಿಸಲಿಚ್ಛಿಸುತ್ತಾರೆ

ವಿಶ್ವ ಹಿಂದೂ ಪರಿಷತ್ ಬ್ರಾಹ್ಮಣ ಹಿಂದೂಗಳ ಸಂಘಟನೆ, ಆರ್ಎಸ್ಎಸ್‌ನ ಒಂದು ಶಾಖೆ ಎಂತ ಪುರೋಹಿತರಿಗೆ ಗೊತ್ತು. ಆದರ ರಾಜಕೀಯವೂ ಪುರೋಹಿತರಿಗೆ ತಿಳಿಯದಿಲ್ಲ, ಅದು ಘೋಷಿಸಿಕೊಂಡಂತೆ 'ಮುಸ್ಲಿಮರು, ಕ್ರೈಸ್ತರು, ಇಂಗ್ಲಿಷ್ ಮಾತನಾಡುವವರು ಮತ್ತು ಕಮ್ಯೂನಿಸ್ಟರು ಅದರ ಶತ್ರುಗಳು.' ಗೊತ್ತಾಯಿತೆ? ಹಾಗಾದರೆ ಅದರ ಮಿತ್ರರಾರು ಎಂಬುದನ್ನು ಸುಲಭದಲ್ಲೇ ಊಹಿಸುತ್ತೀರಾ?

## ವಿಶ್ವಾಮಿತ್ರ–ಮೇನಕಾ

ಈ ಸಮ್ಮೇಳನದಲ್ಲಿ ಭಾಷಣ ಮಾಡಿದ ಗೊಡ್ಡು ಪುರಾಣವಾದಿ, ಅತ್ಯಂತ ಜಾತೀಯವಾದಿ ಮಠಾಧೀಶರಾದ ಪೇಜಾವರ ಮಠಾಧೀಶರು ಹೇಳಿದರಂತೆ, "ನಿಮ್ಮಲ್ಲಿ (ಎಂದರೆ ಪ್ರತಿನಿಧಿಗಳಲ್ಲಿ) ರಾಮ – ಲಕ್ಷ್ಮಣರಿದ್ದಾರೆ. ಅವರನ್ನು ನಮಗೆ ಕೊಡಿ, ನಾವು ಋಷಿಗಳಾದುದರಿಂದ ವಿಶ್ವಾಮಿತ್ರನಿಗೆ ಸಮಾನರು. ನಿಮ್ಮಲ್ಲಿರುವ ರಾಮ ಲಕ್ಷ್ಮಣರನ್ನು ಹಿಡಿದುಕೊಂಡು ದುಷ್ಟರನ್ನು ಶಿಕ್ಷಿಸುತ್ತೇವೆ. ಶಿಷ್ಟರನ್ನು ರಕ್ಷಿಸುತ್ತೇವೆ." ಇತ್ಯಾದಿ.

ರಾಮಾಯಣವನ್ನು ಓದಿರುವ ಪುರೋಹಿತರಿಗೆ ಸಂದೇಹ ಬರುವುದು ಇಲ್ಲಿಯೇ. ಈಗಿನ ಮಠಾಧೀಶರುಗಳೆಲ್ಲ ವಿಶ್ವಾಮಿತ್ರರಾದರೆ ಅದು ದೊಡ್ಡ ಪಜೀತಿಯಾಯಿತಲ್ಲ? ಹಿಂದಿನ ಪುರಾಣದಂತೆ ಒಬ್ಬ ವಿಶ್ವಾಮಿತ್ರನಿದ್ದ-ಒಬ್ಬಳು ಮೇನಕೆಯಿದ್ದಳು. ಮೇನಕೆಯಿಂದಾಗಿಯೇ ವಿಶ್ವಾಮಿತ್ರಪ್ರಸಿದ್ಧಿಗೆ ಬಂದ. ಅವಳು ಹೆತ್ತ ಮಗಳು ಶಕುಂತಲೆಯ ಪುತ್ರ ಭರತನಿಂದಾದಿಯೇ ಭಾರತಕ್ಕೆ ಈ ಹೆಸರು ಬಂದದ್ದು; ಈಗ ಊರಿಗೊಂದು ಮಠ ಕೇರಿಗೊಬ್ಬ ಋಷಿ ಇರುವಾಗ ಇವರಿಗೆಲ್ಲ ಮೇನಕೆಯರನ್ನು ಎಲ್ಲಿಂದ ತರಬೇಕು? ಪುರೋಹಿತರಿಗೆ ಸಮಸ್ಯೆ. ಸಿಕ್ಕಬಹುದೆಂದು ಹೇಳುತ್ತೀರಾ? ಉಡುಪಿಯ ಕೆಲವು ಮಠಗಳಲ್ಲಿ ತಲಾ ಒಂದಕ್ಕಿಂತಲೂ ಹೆಚ್ಚು ಮೇನಕೆಯರೂ, ಮೇನಕೆಯವರೊಡನೆ ಶಕುಂತಲೆಯರೂ ಇದ್ದಾರೆಂದು ಮಂಗಳೂರಿನ ಪತ್ರಿಕೆಯೊಂದು ಒಂದೆರಡು ವರ್ಷಗಳ ಹಿಂದೆಯೇ ಪ್ರಕಟಿಸಿದ್ದನ್ನು ಪುರೋಹಿತರು ಓದಿದ್ದಾರೆ. ಈ ವರದಿಗಳನ್ನು ಯಾವ ಮಠಾಧಿಪತಿಗಳೂ ಅಲ್ಲಗಳೆದಿಲ್ಲ.

ಅದಿರಲಿ; ಇನ್ನು ರಾಮ-ಲಕ್ಷ್ಮಣರ ವಿಚಾರ ನೋಡೋಣ. ರಾಮ–ಲಕ್ಷ್ಮಣರ ಕುರಿತೇನು? ಅವರ ತಂದೆ ದಶರಥ ಬೇಕು. ಆ ದಶರಥನಿಗೆ ಮೂರು ಹೆಂಡಿರಿರಬೇಕು. ಈಗಿನ ಕಲಿಯುಗದಲ್ಲಿ ಹಾಗಾಗಲು ಸಾಧ್ಯವೇ? ಅದು ಪುರೋಹಿತರಿಗೆ ತಿಳಿಯದು; ಬಹು ವಿವಾಹ ಪದ್ಧತಿಗೆ ನಿಷೇಧವಿದೆಯಲ್ಲ?

## ಸಿಡಿದ ಕಿಡಿಗಳು:

ಒಂದು ವೇಳೆ ಈ ಆಧುನಿಕ 'ವಿಶ್ವಾಮಿತ್ರ'ರಿಗೆ ರಾಮಲಕ್ಷ್ಮಣರು ದೊರೆತರೆಂದೇ ಮಾಡೋಣ, ಅವರು ಯಾವ ದುಷ್ಟರ ನಾಶಮಾಡುತ್ತಾರೆ? ಅದನ್ನು ಮೊದಲೇ ಪುರೋಹಿತರು ಹೇಳಿದ್ದಾರಲ್ಲ? 'ಮುಸ್ಲಿಮರು, ಕ್ರೈಸ್ತರು ಇಂಗ್ಲಿಷ್ ತಿಳಿದವರು ಮತ್ತು ಕಮ್ಯೂನಿಸ್ಟರು' ಆರ್ಎಸ್ಎಸ್‌ನ ಈ ವಾದವೇ ವೇದ ವಾಕ್ಯ ತಾನೇ ನಮ್ಮ ಮಠಾಧೀಶರುಗಳಿಗೆ.

## ಹುಚ್ಚು ಮನಸ್ಸಿನ ಹತ್ತು ಮುಖಗಳು

ಈ ಸಮ್ಮೇಳನದಲ್ಲಿ ಮತ್ತಾರು ಭಾಗವಹಿಸಿದರು? ಎಂದು ನೀವು ಕೇಳಬಹುದು. 'ಮೂಕಜ್ಜಿಯ ಕನಸುಗಳು' 'ಕಣ್ಣಿದ್ದರೂ ಕಾಣದವರು' ಕಾದಂಬರಿಗಳನ್ನು ಬರೆದ ಕೋಟ ಶಿವರಾಮ ಕಾರಂತರೇ ವಿಶ್ವ ಹಿಂದೂ ಪರಿಷತ್ತಿನ ವಸ್ತುಪ್ರದರ್ಶನವನ್ನು ಉದ್ಘಾಟನೆಗೈದರು. 'ಕಣ್ಣಿದ್ದೂ ಕಾಣದವ' ಈ ಸಮ್ಮೇಳನದಲ್ಲಿ ಅವರೂ ಕಣ್ಣಿದ್ದೂ ಕಾಣದವರಂತೆ ಮಾತನಾಡಿದರು. 'ಪರಕೀಯ' ಪ್ರಭಾವಗಳ ಆಘಾತದಿಂದ ಚೇತರಿಸಿಕೊಂಡು ಸ್ವಂತಿಕೆಯನ್ನು ಕಾಯ್ದುಕೊಳ್ಳಬೇಕಾದರೆ ಹಿಂದೂ ತತ್ವಜ್ಞಾನ, ನಮ್ಮ ಆಚಾರ್ಯರು ಋಷಿಗಳು ಸಾಧು ಸಂತರ ಬೋಧನೆ ತತ್ವ ಸಿದ್ಧಾಂತಗಳನ್ನು ನಾವು ಪರಿಚಯ ಮಾಡಿಕೊಳ್ಳುವುದು ಅಗತ್ಯ. ಸೆಕ್ಯುಲರ್ ಎಂದು ಹೇಳಿಕೊಳ್ಳುತ್ತಿರುವ ಸರಕಾರ ಎಲ್ಲ ಧರ್ಮಗಳನ್ನೂ ಸಮಾನವಾಗಿ ಕಾಣುವುದಿಲ್ಲ. ಈ ತಾರತಮ್ಯ ನೀತಿಯನ್ನು ಪ್ರತಿಭಟಿಸುವುದು ಅಷ್ಟೇ ಅಗತ್ಯ' ಎಂದರಂತೆ ಕಾರಂತರು,

ಅರಳು–ಮರಳು ಎಂಬ ಪುಸ್ತಕವನ್ನು ಡಾ|| ಕಾರಂತರು ಬರೆದಿದ್ದಾರೊ ಇಲ್ಲವೋ ಪುರೋಹಿತರಿಗೆ ಗೊತ್ತಿಲ್ಲ. 'ಎಪ್ಪತ್ತರ ಮರುಳು' ಎಂಬ ಮಾತನ್ನು ಪುರೋಹಿತರು ಕೇಳಿದ್ದಾರೆ.

ನಾಳೆ ವಿಚಾರವಾದಿಗಳು ಒಂದು ಸಮ್ಮೇಳನ ಕರೆದು ಅದಕ್ಕೆ ಡಾ|| ಕಾರಂತರನ್ನು ಆಮಂತ್ರಿಸಿದರೆ ಅಲ್ಲಿ ಅವರು ಈ ಸಾಧು ಸಂತ, ಮತ ಜಾತಿಗಳನ್ನು ಖಂಡಿಸಿ ಮಾತನಾಡುವುದು ಖಂಡಿತ. ಎಷ್ಟೆಂದರೂ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಅಲ್ಲವೆ?

ನಮ್ಮ ಆಚಾರ್ಯರು ಇತ್ಯಾದಿಗಳ ಬೋಧನೆ ತತ್ವ ಸಿದ್ಧಾಂತಗಳೆಂದು ಶಿವರಾಮ ಕಾರಂತರು ಹೇಳಿದ್ದು ತನ್ನ ತತ್ವ-ಸಿದ್ಧಾಂತ ಬೋಧನೆಗಳ ಕುರಿತು ಎಂದು ಆರ್‌ಎಸ್‌ಎಸ್ ಬಿಜೆಪಿ ನಾಯಕ ವಿ. ಎಸ್. ಆಚಾರ್ಯರು ಇನ್ನೂ ಹೇಳಿಕೆ ನೀಡಿಲ್ಲ.

ಈ ಸಮ್ಮೇಳನಕ್ಕೆ ಆರ್ಎಸ್ಎಸ್ ಸರಸಂಘ ಚಾಲಕ ದೇವರಸ್ ಬಾರದೆ ಇದ್ದರೆ ಆದೀತೆ? ಅವರು ಬರದೇ ಬಂದರು, ಏಕೆಂದರೆ ಆರ್ಎಸ್ಎಸ್‌ನಿಂದ ವಿಶ್ವಹಿಂದೂ ಪರಿಷತ್ತನ್ನು ಬೇರೆ ಮಾಡಲು ಸಾಧ್ಯವಿಲ್ಲ. 'ಎಲ್ಲ ಹಿಂದೂಗಳ ಸಂಘಟನೆ ರಾಷ್ಟ್ರೀಯ ಅವಶ್ಯಕತೆ' ಎಂದವರು ಬುರುಡೆ ಬಿಟ್ಟರು. ಹಿಂದೂ ಜಾಗೃತಿ ಹುಟ್ಟಿಸಲು ಏನು ಮಾಡಬೇಕು. ಎಂಬುದಕ್ಕೆ ದೇವರಸರು ಉತ್ತರಿಸಿದರು, 'ಭಾರತಮಾತೆಯಲ್ಲೂ ಗಂಗಾ ಮಾತೆಯಲ್ಲೂ ಇರುವ ಶ್ರದ್ಧೆಯನ್ನು ಬೆಳೆಸಬೇಕು.' ನಿಜಕ್ಕೂ ಇದಕಿಂತ ಅಸಹ್ಯವಾದ ಗೊಡ್ಡು ಪುರಾಣವಾದವಿದೆಯೆ? ಸಮಾಜ ಬೆಳೆಯಲು ಬೇಕಾದರೆ ಏನು ಮಾಡಬೇಕು? ಅದಕ್ಕೆ ಉತ್ತರ ನೀಡಿದವರು ಚಿನ್ಮಯಾನಂದರು: ಶ್ರೀರಾಮನ ಹಾಗೆ ಬ್ರಹ್ಮಾಸ್ತ್ರ ಉಪಯೋಗಿಸಬೇಕು. ಎಂದರವರು. ಈ ಯೋಗಿ ಯಾರ ವಿರುದ್ಧ ಈ ಬ್ರಹ್ಮಾಸ್ತ್ರವನ್ನು ಉಪಯೋಗಿಸಬೇಕೆಂಬುದನ್ನು ಬಾಯಿಬಿಟ್ಟು ಹೇಳಲಿಲ್ಲ. ಓದುಗರೇ ಅರ್ಥ ಮಾಡಿಕೊಳ್ಳಬೇಕು.

ಕೊನೆಗೊಂದು ಮಾತು. ಈ ರಥಯಾತ್ರೆಯನ್ನು ಎಲ್ಲ ಮತೀಯರೂ ಸ್ವಾಗತಿಸಿದ್ದಾರೆ. ಹಾಸನದ ಮುಸ್ಲಿಂ ನಗರ ಸಭಾಧ್ಯಕ್ಷರೇ ಈ ರಥ ಯಾತ್ರೆಗೆ ಆರತಿ ಬೆಳಗಿದರು ಎಂದು ಈ ಸಮ್ಮೇಳನದಲ್ಲಿ ಮಹಾಶಯರೊಬ್ಬರು ಕೊಚ್ಚಿದರು. ಸುಳ್ಳು ಹೇಳುವುದೇ ಹಿಂದೂ ಸಂಸ್ಕೃತಿಯ ಶ್ರೇಷ್ಠತೆಯೆಂದಾದರೆ ಈ ಮಾತನ್ನು ಒಪ್ಪಬಹುದು. ಏಕೆಂದರೆ ಹಾಸನ ನಗರ ಸಭಾಪತಿಯಾಗಿದ್ದವರು ಮುಸ್ಲಿಮರಲ್ಲ. ಆ ಸಭಾಪತಿಗಳೇ ಇತ್ತೀಚೆಗೆ ಕೊಲ್ಲಲ್ಪಟ್ಟಿರುವುದರಿಂದ ಅಲ್ಲಿ ನಗರ ಸಭಾಪತಿಗಳೇ ಇಲ್ಲ; ಹೀಗಿರುವಾಗ ಈ ವಿಶ್ವ ಹಿಂದೂ ಪರಿಷತ್ತಿನ ಪರಂಪರೆ ಸುಳ್ಳು ಪರಂಪರೆ ಎಂದು ಬೇರೆ ಹೇಳಬೇಕೆ?

–ಪುರೋಹಿತ

## ಭದ್ರಾವತಿ ಉಕ್ಕು ಕಾರ್ಮಿಕ ಸಂಘಕ್ಕೆ ಆಯ್ಕೆ

ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೆಲಸಗಾರರ ಸಂಘದ ಚುನಾವಣೆ ನಡೆದು ಅದರ ಅಧ್ಯಕ್ಷರಾಗಿ ಎಐಟಿಯುಸಿ ನಾಯಕ ಡಿ. ಸಿ. ಮಾಯಣ್ಣ ಆರಿಸಿಬಂದಿದ್ದಾರೆ. ಇದೂ ಸೇರಿದಂತೆ ಈ ಸ್ಥಾನಕ್ಕೆ ಮಾಯಣ್ಣನವರು ಈ ಸ್ಥಾನಕ್ಕೆ ಆರಿಸಿ ಬರುವುದು ಇದು ಮೂರನೇ ಬಾರಿ.

ಮಾಯಣ್ಣನವರು ಚುನಾಯಿತರಾದ ಕಾರ್ಮಿಕ ಸಂಘದ ಸದಸ್ಯತ್ವ ಸುಮಾರು 2,000 ಇದೆ. ಈ ಚುನಾವಣೆಯಲ್ಲಿ ಎಐಟಿಯುಸಿ ಯ ಎಂ. ಹೆಚ್. ಕುಲಕರ್ಣಿ ಉಪಾಧ್ಯಕ್ಷರಾಗಿ ಎಐಟಿಯುಸಿ ಹಿತೈಷಿ ತಿಮ್ಮೇಗೌಡರು ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟಿದ್ದಾರೆ. ಕಾರ್ಯಕಾರಿ ಸಮಿತಿಗೆ ಎಐಟಿಯುಸಿಯ ಎನ್. ನಾಗರಾಜ್, ಪಿ. ದೊರೈ ಸೀತಾರಾಮ್ ಇವರು ಕೂಡಾ ಆರಿಸಿ ಬಂದಿದ್ದಾರೆ.

## ಷಾ ನವಾಜ್ ಖಾನ್ ನಿಧನ

ಸ್ವಾತಂತ್ರ್ಯ ಹೋರಾಟಗಾರರೂ, ಸುಭಾಸ್‌ಚಂದ್ರಬೋಸರ ಐಎನ್ಎ ನಾಯಕರೂ, ಕೇಂದ್ರದ ಮಾಜಿ ಮಂತ್ರಿಯೂ ಆಗಿದ್ದ ಷಾ ನವಾಜ್ ಖಾನ್ ಕಳೆದ ವಾರ ನಿಧನರಾದ ದುಃಖಕರ ವರದಿ ಬಂದಿದೆ.

ಷಾ ನವಾಜ್ ಖಾನರು ಅಪ್ರತಿಮ ದೇಶಪ್ರೇಮಿಯಾಗಿದ್ದರು, ಜಾತ್ಯಾತೀತರಾಗಿದ್ದರು. ಕಲವು ಸಮಯದ ಹಿಂದೆ ಮೀರತ್‌ನಲ್ಲಿ ನಡೆದ ಜಾತೀಯ ಗಲಭೆಗಳಿಂದ ನೊಂದ ನವಾಜ್‌ಖಾನ್ ಈ ಕುರಿತು ಇಂದಿರಾಗಾಂಧಿಯವರಿಗೆ ಪತ್ರ ಬರೆದಾಗ ನವಾಜ್ ಖಾನರನ್ನೇ ಛೇಡಿಸಿ ಪ್ರಧಾನಿ ಅವಮಾನ ಮಾಡಿದ್ದನ್ನು ಇಲ್ಲಿ ಗಮನಿಸಬೇಕು.

ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ. ರಾಜೇಶ್ವರರಾವ್, ಷಾ ನವಾಜ್ ಖಾನರ ನಿಧನಕ್ಕೆ ಅತೀವ ದುಃಖವನ್ನು ವ್ಯಕ್ತಪಡಿಸಿದ್ದಾರೆ. "ಅವರು ದೇಶಪ್ರೇಮಿಯಾಗಿದ್ದರು, ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. 1945 ರಲ್ಲಿ ದೆಹಲಿ ಕೆಂಪು ಕೋಟೆಯಲ್ಲಿ ಐಎನ್ಎ ವಿಚಾರಣೆ ನಡೆದಾಗ ಮುಖ್ಯವಾದಿ ಇವರ ಹೆಸರು ದೇಶಾದ್ಯಂತ ಖ್ಯಾತಿ ಪಡೆಯಿತು, ಆಗ ದೇಶದಲ್ಲಿ ನಡೆದ ಸಾಮೂಹಿಕ ಚಳವಳಿಯ ಪರಿಣಾಮವಾಗಿ ಅವರನ್ನು ಬಿಡುಗಡೆಗೊಳಿಸಲು ಬ್ರಿಟನ್ ಸಾಮ್ರಾಜ್ಯವಾದಿಗಳು ನಿರ್ಬಂಧಿತರಾದರು." ಎಂದು ರಾಜೇಶ್ವರ ರಾವ್ ಹೇಳಿದ್ದಾರೆ.

"ಷಾ ನವಾಜ್ ಖಾನ್ ತನ್ನ ಕೊನೆಯ ಉಸಿರಿನ ತನಕವೂ ನಮ್ಮ ಸ್ವಾತಂತ್ರ್ಯ ಹೋರಾಟದ ಹಾಗೂ ನಮ್ಮ ಸಂವಿಧಾನದ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದವರು" ಎಂದೂ ರಾಜೇಶ್ವರ ರಾವ್ ಶ್ಲಾಘಿಸಿದ್ದಾರೆ.

## ಉ. ಪ್ರದೇಶ: ವಿಧಾನಸಭಾ ಉಪಚುನಾವಣೆ

ಉತ್ತರ ಪ್ರದೇಶದ ವಿಧಾನ ಸಭೆಗೆ ಡಿಸೆಂಬರ್ 23 ರಂದು ನಡೆಯುವ ಉಪ ಚುನಾವಣೆಗಳಲ್ಲಿ ಐದು ಸ್ಥಾನಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಎರಡು ಸ್ಥಾನಗಳಿಗೆ ಸ್ಪರ್ಧಿಸಲಿದೆ. ಈ ಎರಡು ಸ್ಥಾನಗಳೆಂದರೆ ದೇವೊರಿಯ ಜಿಲ್ಲೆಯ ಫಜಲ್‌ನಗರ ಮತ್ತು ಬಂದಾ ಜಿಲ್ಲೆಯ ತಿಂಡ್ವಾರಿ ಕ್ಷೇತ್ರಗಳು, ಇವಕ್ಕೆ ಉಮೇದ್ವಾರರು ಅನುಕ್ರಮವಾಗಿ ಲಲ್ಲಾನ್ ರಾಯ್ ಮತ್ತು ರಣಬೀರ್‌ಸಿಂಗ್ ಚೌಹಾನ್.

ಈ ಸ್ಥಾನಗಳ ಬಗ್ಗೆ ಹೊಂದಾಣಿಕೆಗೆ ಬರಲು ಸಂಯುಕ್ತರಂಗದ ಪಕ್ಷಗಳೊಡನೆಯೂ ಮಾರ್ಕ್ಸಿಸ್ಟ್ ಪಕ್ಷದೊಡನೆಯೂ ಕಮ್ಯೂನಿಸ್ಟ್ ಪಕ್ಷ ಸತತ ಪ್ರಯತ್ನ ನಡೆಸಿತು. ಆದರೆ ಜನತಾ ಪಕ್ಷ ಮತ್ತು ಮಾರ್ಕ್ಸಿಸ್ಟ್ ಪಕ್ಷಗಳ ಹಟಮಾರಿ ನೀತಿಯಿಂದಾಗಿ ಇಂತಹ ಹೊಂದಾಣಿಕೆ ಸಾಧ್ಯವಾಗಲಿಲ್ಲ.

ಫಜಲ್‌ನಗರ ಸ್ಥಾನಕ್ಕೆ ಮಾರ್ಕ್ಸಿಸ್ಟ್ ಪಕ್ಷ ಏಕಪಕ್ಷೀಯವಾಗಿ ತನ್ನ ಅಭ್ಯರ್ಥಿಯನ್ನು ಘೋಷಿಸಿತು. ಈ ಬಗ್ಗೆ ಮಾರ್ಕ್ಸಿಸ್ಟ್ ಪಕ್ಷದ ನಾಯಕತ್ವವನ್ನು ಸಂಪರ್ಕಿಸಲು ಯತ್ನಿಸಿದಾಗ ನಾಮಪತ್ರಗಳ ವಾಪಾಸು ಪಡೆಯುವ ದಿನದ ತನಕ ಮಾರ್ಕ್ಸಿಸ್ಟ್ ನಾಯಕರು ತಲೆಮರೆಸಿಕೊಂಡಿದ್ದರು.

ಬಹುಗುಣರ ಡಿಎಸ್‌ಪಿಯೊಂದಿಗೆ ಕಮ್ಯೂನಿಸ್ಟ್ ಪಕ್ಷ ಒಂದು ಹೊಂದಾಣಿಕೆಗೆ ಬಂದಿದೆ. ಕಮ್ಯೂನಿಸ್ಟ್ ಪಕ್ಷ ಸ್ಪರ್ಧಿಸುವ ಎರಡೂ ಸ್ಥಾನಗಳಲ್ಲೂ ಡಿಎಸ್‌ಪಿಯ ಬೆಂಬಲವಿದೆ. ಪಿರ್‌ಭಿತ್ ಕ್ಷೇತ್ರದಲ್ಲಿ ಡಿಎಸ್‌ಪಿಯ ಅಭ್ಯರ್ಥಿಯನ್ನು ಕಮ್ಯೂನಿಸ್ಟ್ ಪಕ್ಷ ಬೆಂಬಲಿಸುವುದು.

Licenced to post without
L.N·24 Reg. No. KRNU 179 Kembavuta, Weekly December 18, 1983

# ಸಾಮ್ರಾಜ್ಯವಾದಿಗಳ ವಿರುದ್ಧ, ಯುದ್ಧದ ವಿರುದ್ಧ. ಬಂಡವಳಶಾಹಿಗಳ ವಿರುದ್ಧ ಶಾಂತಿ. ಸಮಾಜವಾದಕ್ಕಾಗಿ ಹೋರಾಟ

## ಎಐಟಿಯುಸಿ ಸಮ್ಮೇಳನದಲ್ಲಿ ಎನ್. ಕೆ. ಕೃಷ್ಣನ್ ಕರೆ

(1ನೇ ಪುಟದಿಂದ)

ವಿದೇಶಗಳಿಂದ ಸೌಹಾರ್ದ ಪ್ರತಿನಿಧಿಗಳು ಆಗಮಿಸಿದ್ದರು. ಡಬ್ಲ್ಯು ಎಫ್‌ಟಿಯುವಿನ ಪ್ರಧಾನ ಕಾರ್ಯದರ್ಶಿ, ಸಮಾಜವಾದಿ ಶಿಬಿರದ ಅಗ್ರಗಣ್ಯ ರಾಷ್ಟ್ರವಾದ ಸೋವಿಯೆತ್ ಯೂನಿಯನ್, ಸಾಮ್ರಾಜ್ಯವಾದಿಗಳ ದಾಳಿಯನ್ನೆದಿರಿಸುತ್ತಿರುವ ಅಫಘಾನಿಸ್ತಾನ, ಸಿರಿಯ, ಬಂಡವಳಶಾಹಿ ದೇಶವಾದ ಆಸ್ಟ್ರೇಲಿಯ ಹೀಗೆ ವಿವಿಧ ದೇಶಗಳ ದುಡಿಯುವ ವರ್ಗದ ನಾಯಕರು ಅಲ್ಲಿ ಹಾಜರಿದ್ದರು.

ಗಾಜಿನ ಮನೆಯಾದರೋ ಆಕರ್ಷಕವಾಗಿ ಅಲಂಕೃತವಾಗಿತ್ತು, ಕೆಂಬಾವುಟಗಳಿಂದ ಕಂಗೊಳಿಸುತ್ತಿತ್ತು. ಶಿಸ್ತಿನ ಸಿಪಾಯಿಗಳಾದ ಸಮವಸ್ತ್ರಧಾರಿ ಸ್ವಯಂ ಸೇವಕರು ಈ ಎಲ್ಲ ಏರ್ಪಾಡುಗಳನ್ನೂ ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದರು. ಸಂಭ್ರಮ, ಪ್ರತಿನಿಧಿಗಳ ಆಗಮನ, ಅವರ ದಾಖಲಾತಿ ಇವುಗಳೆಲ್ಲ ಆದ ನಂತರ ಸಮ್ಮೇಳನದ ಕಾರ್ಯಕ್ರಮ ಆರಂಭ.

### ಧ್ವಜಾರೋಹಣ

ಈ ಸಂಭ್ರಮದ ವಾತಾವರಣದಲ್ಲಿ ಎಐಟಿಯುಸಿಯ ಧ್ವಜಾರೋಹಣವನ್ನು ಮಾಡಿದವರು ರಾಜ್ಯ ಎಐಟಿಯುಸಿಯ ಉಪಾಧ್ಯಕ್ಷರೂ ಶಾಸಕರೂ ಆದ ಪಂಪಾಪತಿಯವರು. ಎಐಟಿಯುಸಿಯ ಅಖಿಲ ಭಾರತ ನಾಯಕರು, ವಿದೇಶಗಳ ಸೌಹಾರ್ದ ಪ್ರತಿನಿಧಿಗಳು ಇವರ ಸಮಕ್ಷಮದಲ್ಲಿ ಎಐಟಿಯುಸಿಯ ಧ್ವಜವನ್ನು ಆರೋಹಣ ಮಾಡಿದ ಪಂಪಾಪತಿಯವರು ಎಐಟಿಯುಸಿಯ ಉಜ್ವಲ ಪರಂಪರೆಯನ್ನು ವಿವರಿಸಿದರು, ಈ ಬಾವುಟದಡಿಯಲ್ಲಿ ಲಕ್ಷಾಂತರ ಹೋರಾಟಗಳಲ್ಲಿ ಸಹಸ್ರಾರು ಮಂದಿ ಹುತಾತ್ಮರಾಗಿದ್ದಾರೆ, ಲಕ್ಷಾಂತರ ಮಂದಿ ಗಾಯಗೊಂಡಿದ್ದಾರೆ. ಈ ವೀರ ಪರಂಪರೆಯನ್ನು ಹೊಂದಿರುವ ಎಐಟಿಯುಸಿ ಮುಂದಿನ ದಿನಗಳಲ್ಲಿ ಇನ್ನಷ್ಟು ಹೋರಾಟಗಳನ್ನು ನಡೆಸಬೇಕಾಗಿದೆ ಎಂದು ಅವರು ಹೇಳಿದರು.

ದೇಶದ ಇಂದಿನ ಸಮಸ್ಯೆಗಳನ್ನು ಪಂಪಾಪತಿಯವರು ಸಂಕ್ಷಿಪ್ತವಾಗಿ ವಿವರಿಸಿದರು, ಮುಂದಿರುವ ಪ್ರಶ್ನೆಗಳನ್ನು ಪ್ರಸ್ತಾಪಿಸಿದರು. "ಸಂಘಟಿತ ಕೈಗಾರಿಕೆಗಳ ಕಾರ್ಮಿಕರನ್ನು ನಾವು ಒಟ್ಟುಗೂಡಿಸಿದ್ದೇವೆ. ಮಧ್ಯಮ ವರ್ಗದ ನೌಕರರನ್ನು ಸಂಘಟಿಸಿದ್ದೇವೆ. ಹಲವಾರು ಹೋರಾಟಗಳನ್ನು ನಡೆಸಿದ್ದೇವೆ. ಜಯಗಳಿಸಿದ್ದೇವೆ. ಆದರೆ ಇಷ್ಟರಲ್ಲಿಯೇ ನಮ್ಮ ಕಾರ್ಯ ಮುಗಿದಿಲ್ಲ, ಅಸಂಖ್ಯಾತ ಅಸಂಘಟಿತ ಕಾರ್ಮಿಕರಿದ್ದಾರೆ. ಸುಲಿಗೆ ಶೋಷಣೆಗಳಿಂದ ಅತ್ಯಂತ ಕಷ್ಟಕರ ದುಡಿಮೆಯಿಂದ ಯಾವುದೇ ಕಾಯಿದೆಗಳ ಅನ್ವಯವಾಗದೆ ಬಳಲುವವರು ಅವರು. ಅವರನ್ನು ಸಂಘಟಿಸಬೇಕಾಗಿದೆ. ಹಲವಾರು ವಿಧದ ಶೋಷಣೆಗಳಿಗೊಳಗಾಗಿರುವ ಮಹಿಳಾ ಕಾರ್ಮಿಕರು ಕಾರ್ಮಿಕ ಸಂಖ್ಯೆಯಲ್ಲಿ ಶೇ 50ರಷ್ಟಿದ್ದಾರೆ. ಅವರನ್ನು ಸಂಘಟಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ." ಎಂದರವರು.

ಶಾಂತಿ ಚಳವಳಿಯಲ್ಲಿ ಕಾರ್ಮಿಕ ವರ್ಗ ಕ್ರಿಯಾಶೀಲವಾಗಿ ಭಾಗವಹಿಸಬೇಕಾದ ಅಗತ್ಯವನ್ನು ಪಂಪಾಪತಿ ಒತ್ತಿಹೇಳಿ, ಎಐಟಿಯುಸಿಯ ಈ ರಕ್ತಧ್ವಜದ ಸಮರಶೀಲ ಪರಂಪರೆಯನ್ನು ಕಾಪಾಡಲು ಪಣ ತೊಡೋಣ, ಈ ಧ್ವಜವನ್ನು ಇನ್ನಷ್ಟು ಎತ್ತರಕ್ಕೆ ಏರಿಸೋಣ, ಎಂದು ಕರೆ ಕೊಟ್ಟರು.



ಅಂತರ್ರಾಷ್ಟ್ರೀಯ ಐಕ್ಯತೆಗೆ ಪ್ರತೀಕ: ವಿದೇಶಗಳ ಸೌಹಾರ್ದ ಪ್ರತಿನಿಧಿಗಳು ಹುತಾತ್ಮರ ಸ್ಮಾರಕದ ಬಳಿ ಹೋಗುತ್ತಿದ್ದಾರೆ.

### ಹುತಾತ್ಮ ಸ್ಮಾರಕ

ಗಾಜಿನ ಮನೆಯ ಅಲಂಕೃತ ಸಭಾಸದನದ ಆಗ್ನೇಯದಿಕ್ಕಿನಲ್ಲಿ ಹುತಾತ್ಮರ ಸ್ಮಾರಕ. ಧ್ವಜಾರೋಹಣವಾದ ಕೂಡಲೇ ಪ್ರತಿನಿಧಿಗಳು ಸಾಲು ಸಾಲಾಗಿ ಹೋಗಿ ಈ ಸ್ಮಾರಕಕ್ಕೆ ಹೂಮಳೆಗರೆದರು. ಕಾರ್ಮಿಕ ವರ್ಗದ ಹಕ್ಕುಗಳ ಕೇಳಿಕೆಗಾಗಿ, ದುಡಿಯುವ ಸ್ವಾತಂತ್ರ್ಯಕ್ಕಾಗಿ ಪ್ರಾಣವನ್ನೇ ಬಲಿದಾನಮಾಡಿದ ಅಸಂಖ್ಯಾತ ಹುತಾತ್ಮರ ಸ್ಮಾರಕಕ್ಕೆ ಪ್ರತಿನಿಧಿಗಳ ಪುಷ್ಪಾಂಜಲಿ. ಹಿನ್ನೆಲೆಯಲ್ಲಿ 'ಜನೋತ್ಸವ' ತಂಡದವರಿಂದ ಇಂದಿನ ಈ ವ್ಯವಸ್ಥೆಯ ವಿರುದ್ಧ ಸಿಡಿದೇಳುವಂತೆ ಕರೆಕೊಡುವ ಸ್ಫೂರ್ತಿ ಕೆರಳಿಸುವ ಶುಶ್ರಾವ್ಯವಾದ ಹುತಾತ್ಮ ಗೀತೆ,

### ಸಮ್ಮೇಳನಾರಂಭ

ನಂತರ ಸಮ್ಮೇಳನಾರಂಭವಾಯಿತು. ಸಮ್ಮೇಳನವನ್ನು ನಿರ್ವಹಿಸಿಕೊಡಲು ಎಐಟಿಯುಸಿ ಉಪಾಧ್ಯಕ್ಷರುಗಳಾದ ಎನ್. ಕೆ, ಕೃಷ್ಣನ್, ಚತುರಾನನ ಮಿಶ್ರ, ಚಿತ್ತರಂಜನ್, ಮುಹಮ್ಮದ್ ಇಲಿಯಾಸ್, ಡಿ. ಬಿ. ಜೋಷಿ, ಹೋಮಿದಾಜಿ, ಕೆ. ಜಿ. ಶ್ರೀವಾಸ್ತವ ಮತ್ತು ಎಂ. ಎಸ್. ಕೃಷ್ಣನ್‌ರವರನ್ನೊಳಗೊಂಡ ಅಧ್ಯಕ್ಷ ಮಂಡಲಿ. ನಂತರ ಕಾರ್ಯದರ್ಶಿ ಸಿದ್ಧಾಂತರಿಂದ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯ, ಬಳಿಕ ಜನೋತ್ಸವ ತಂಡದವರಿಂದ ಸುಶ್ರಾವ್ಯ ಕ್ರಾಂತಿ ಗೀತೆ.

ಸ್ವಾಗತ ಸಮಿತಿಯ ಅಧ್ಯಕ್ಷ ಎಂ. ಸಿ. ನರಸಿಂಹನ್‌ರಿಂದ ಸ್ವಾಗತ ಭಾಷಣ, ದೇಶ ವಿದೇಶಗಳಿಂದ ಬಂದ ಪ್ರತಿನಿಧಿಗಳಿಗೆ ಹೃತ್ಪೂರ್ವಕ ಸ್ವಾಗತ, 30 ವರುಷಗಳ ಹಿಂದೆ ಇದೇ ಲಾಲ್‌ಬಾಗ್‌ನಲ್ಲಿ ಸೋವಿಯತ್ ನಾಯಕರಾದ ಬುಲ್ಗಾನಿನ್ ಮತ್ತು ಕ್ರುಶ್ಚೇವ್‌ರವರು ನೆಟ್ಟ ಗಿಡಗಳು ಈಗ ಹೆಮ್ಮರವಾದಿವೆ ಅದೇರೀತಿ ಭಾರತ-ಸೋವಿಯತ್ ಬಾಂಧವ್ಯ ಅಗಾಧವಾಗಿದೆ ಎಂಬ ಸ್ಮರಣೆ, ಬೆಂಗಳೂರಿನ ಕಾರ್ಮಿಕರ ವೀರ ಹೋರಾಟಗಳ ವಿವರಣೆ, ನಾವು ಎಐಟಿಯುಸಿ ಸೇರಿದವರೆಂಬುದಕ್ಕಾಗಿ ಹೆಮ್ಮೆ, ಪ್ರತಿನಿಧಿಗಳಿಗೆ ಏನಾದರೂ ಅನಾನುಕೂಲತೆಯಾದರೆ ಕ್ಷಮಿಸಬೇಕೆಂಬ ವಿನಂತಿ. ಹೀಗೆ ನರಸಿಂಹನ್ ತನ್ನ ಸ್ವಾಗತ ಭಾಷಣವನ್ನು ಕೊನೆಗೊಳಿಸಿದರು.

### ಎನ್. ಕೆ. ಕೃಷ್ಣನ್ ಭಾಷಣ

ಬಳಿಕ ಅಂದಿನ ಅಧ್ಯಕ್ಷತೆ ವಹಿಸಿದ್ದ ಎನ್. ಕೆ. ಕೃಷ್ಣನ್ ಭಾಷಣ. ಎಐಟಿಯುಸಿಯ 64 ನೇ ವರುಷದಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರದ 37ನೇ ವರುಷದಲ್ಲಿ ಎಐಟಿಯುಸಿಯ ಈ 32ನೇ ಅಧಿವೇಶನ ನಡೆಯುತ್ತಿದೆ' ಎಂದವರು ಹೇಳಿದರು. ಇಂದಿನ ಸಂದರ್ಭ ರೇಗನ್ ಆಡಳಿತದ ಹುಚ್ಚು ಆಕ್ರಮಣಕಾರಿತನ, ಮಾನವ ಕುಲಯನ್ನೇ ಯುದ್ಧದ ಅಂಚಿಗೆ ತಳ್ಳುವ ಸಂದರ್ಭ. ಆದುದರಿಂದಲೇ ಕೊಲೆಗಡುಕ ಕೈಗಳನ್ನು ತಡೆಹಿಡಿಯಲು ನಾವಿಂದು ಮುಂದಾಗಬೇಕು' ಎಂದ ಕೃಷ್ಣನ್ ಇಂದಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿದರು, ಭಾರತವನ್ನು ನಾಲ್ದೆಸೆಗಳಿಂದಲೂ ಸುತ್ತುವರಿಯುತ್ತಿರುವ ಸಾಮ್ರಾಜ್ಯಶಾಹಿಗಳ ವ್ಯೂಹವನ್ನವರು ಬಯಲಿಗೆಳೆದರು. ಸೋವಿಯತ್ ಯೂನಿಯನಿನ ಶಾಂತಿ ಪ್ರಯತ್ನಗಳನ್ನವರು ಪ್ರಸ್ತಾಪಿಸಿದರು. ಸಿರಿಯ, ನಿಕಾರಾಗುವ ಮತ್ತು ಕ್ಯೂಬಾಗಳಿಗೆ ಅಮೆರಿಕಾ ಒಡ್ಡುತ್ತಿರುವ ಅಪಾಯವನ್ನು ಅವರು ಒತ್ತಿ ಹೇಳಿದರು; ಶಾಂತಿಗಾಗಿ, ಸಾಮ್ರಾಜ್ಯವಾದಿಗಳ ಆಕ್ರಮಣವನ್ನು ಹಿಮ್ಮೆಟ್ಟಿಸುವುದಕ್ಕಾಗಿ ಟ್ರೇಡ್ ಯೂನಿಯನ್‌ಗಳು ಐಕ್ಯ ಚಳವಳಿಯನ್ನು ನಡೆಸಬೇಕೆಂದು ಕರೆಕೊಟ್ಟರು.

### ಬಂಡವಳಶಾಹಿ ಬಿಕ್ಕಟ್ಟು

ನಂತರ ಅವರು ನಮ್ಮ ದೇಶದ ರಾಜಕೀಯ ಆರ್ಥಿಕ ಪರಿಸ್ಥಿತಿಗಳನ್ನು ಪ್ರಸ್ತಾಪಿಸಿದರು, ಜಾಗತಿಕ ಬಂಡವಾಳವಾದಿ ಬಿಕ್ಕಟ್ಟು ಭಾರತದ ಮೇಲೆ ಬಿದ್ದಿರುವುದು; ಪರಿಣಾಮವಾಗಿ ಬೆಲೆ ಏರಿಕೆ ಹಣದುಬ್ಬರ, ನಿರುದ್ಯೋಗಗಳು ಹೆಚ್ಚುತ್ತಿರುವುದು; ಕಾರ್ಖಾನೆಗಳ ಮುಚ್ಚುವಿಕೆ ಲಾಕೌಟು, ರೋಗಗ್ರಸ್ತವಾಗುವ ಕೈಗಾರಿಕೆಗಳು; ಇವನ್ನು ಅಂಕೆ ಸಂಖ್ಯೆಯ ಮೂಲಕ ವಿವರಿಸಿದ ಕೃಷ್ಣನ್ ಇವೆಲ್ಲವನ್ನೂ ಟ್ರೇಡ್ ಯೂನಿಯನ್ ಚಳವಳಿ ಗಣನೆಗೆ ತೆಗೆದು ಕೊಳ್ಳಬೇಕು. ಬಂಡವಳಶಾಹಿ ಬೆಳವಣಿಗೆಯ ಪಥದಿಂದ ಉಂಟಾಗಿರುವ ಈ ವೈಫಲ್ಯವನ್ನು ಹಿಮ್ಮೆಟ್ಟಿಸಬೇಕು. ಟ್ರೇಡ್ ಯೂನಿಯನ್‌ಗಳು ಈ ಕಾರ್ಯದಲ್ಲಿ ಮುಂದಾಗಬೇಕು ಎಂದ ಕೃಷ್ಣನ್ ಕೊನೆಗೆ ಹೀಗೆಂದರು.

"ಈ ವಿಚಾರದಲ್ಲಿ ಸಾಮಾಜಿಕ ಹೊಣೆ ಸಾಮ್ರಾಜ್ಯವಾದಿಗಳ ವಿರುದ್ಧ ಗುತ್ತೇದಾರಿಗಳ ವಿರುದ್ಧ ಹೋರಾಡುವ ಶಕ್ತಿಗಳ ಮೇಲಿದೆ, ನಮ್ಮ ದೇಶದ ಪಥ ಬಂಡವಾಳವಾದಿ ವಿರುದ್ಧ ಪಥವಿರಬೇಕು, ಸಮಾಜವಾದಿ ಹಾದಿಯಲ್ಲಿ ನಡೆಯಬೇಕು, ಸಂಕ್ಷಿಪ್ತವಾಗಿ ಹೇಳಬೇಕಾದರೆ ಶಾಂತಿ ಬಯಸುವವರು ಸಾಮಾಜಿಕ ಪ್ರಗತಿಯನ್ನು ಅಪೇಕ್ಷಿಸುವವರು ಬಂಡವಳವಾದದ ವಿರುದ್ಧ ರಾಜಿಯೇ ಇಲ್ಲದ ಹೋರಾಟ ಮಾಡುವವರು ಒಂದೇ ಟ್ರೇಡ್ ಯೂನಿಯನ್ ಪ್ರವಾಹದಲ್ಲಿ ಒಂದಾಗಬೇಕು, ಟ್ರೇಡ್ ಯೂನಿಯನ್ ಚಳವಳಿಗೆ ಹೊಸ ಉತ್ಸಾಹ ಮೂಡಿಸಬೇಕು."

### ಬಂಡವಳಗಾರರಿಗೆ ಎಚ್ಚರಿಕೆ

ಈ ಸಮ್ಮೇಳನಕ್ಕೆ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರು ತನ್ನ ಭಾಷಣದಲ್ಲಿ ಈ ಸಮ್ಮೇಳನಕ್ಕೆ ಶುಭ ಹಾರೈಸಲು ತನಗೆ ಅಭಿಮಾನವೆನಿಸುತ್ತದೆ ಎಂದರು. ಕರ್ನಾಟಕ ಸರಕಾರದ, ಜನತೆಯ ಪರವಾಗಿ ಬೇರೆ ರಾಜ್ಯಗಳಿಂದ ಬೇರೆ ದೇಶಗಳಿಂದ ಬಂದ ಪ್ರತಿನಿಧಿಗಳನ್ನು ಅವರು ಸ್ವಾಗತಿಸಿದರು. ಮುಂದರಿದು ಅಂತರ್ರಾಷ್ಟ್ರೀಯ ರಂಗದಲ್ಲಿ ಯುದ್ಧದ ಕಾರ್ಮೋಡಗಳು ಹಬ್ಬುತ್ತಿವೆ, ಅದೇ ವೇಳೆ ದೇಶದಲ್ಲಿ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯ ಮೇಲೂ ದಾಳಿ ನಡೆಯುತ್ತಿದೆ. ಪ್ರಜಾಪ್ರಭುತ್ವವಾದಿ ವ್ಯವಸ್ಥೆಯನ್ನು ಕಾಪಾಡಬೇಕು, ಮಾನವನ ಘನತೆಯನ್ನು ರಕ್ಷಿಸಬೇಕು, ಎಂದರು. ದುಡಿಯುವವರ ಹಕ್ಕುಗಳನ್ನು ತನ್ನ ಸರಕಾರ ರಕ್ಷಿಸುತ್ತದೆ. ಸಾರ್ವಜನಿಕ ಕ್ಷೇತ್ರದ ಮುಷ್ಕರ ಕಾಲದಲ್ಲಿ ಕಾರ್ಮಿಕರ ಮೇಲೆ ಹಿಂದಿನ ಸರಕಾರ ಹಾಕಿದ್ದ ನೂರಾರು ಖಟ್ಲೆಗಳನ್ನು ಈ ಸರಕಾರ ಹಿಂದೆಗೆದುದೇ ಇದಕ್ಕೆ ಸಾಕ್ಷಿ ಆದರೂ ಇನ್ನಷ್ಟು ಸಮಸ್ಯೆಗಳಿವೆ ಎಂದರು, ಕಾರ್ಮಿಕರ ಕೇಳಿಕೆಗಳನ್ನು ಸಾಮೂಹಿಕ ಚೌಕಾಶಿಯಿಂದ ತೀರ್ಮಾನ ಮಾಡುವುದು ಕಾರ್ಮಿಕರ ಮೂಲಭೂತ ಹಕ್ಕು ಎಂದು ಘೋಷಿಸಿದ ಮುಖ್ಯಮಂತ್ರಿಯವರು ಇಂತಹ ಸಾಮೂಹಿಕ ಚೌಕಾಶಿಗೆ ಬರಲು, ಮಾತುಕತೆಗಳನ್ನು ನಡೆಸಲು ನಿರಾಕರಿಸುವ ಮಾಲಿಕರಿಗೆ ಅವರು ಎಚ್ಚರ ನೀಡಿದರು.

(ಉಳಿದ ವಿವರ ಮುಂದಿನ ಬಾರಿ)

'ಕೆಂಬಾವುಟ'
ತಪ್ಪದೆ ಓದಿ

Printed by R. S. Rajaram at Janashakthi Printers, Gandhinagar Bangalore-9 and Published by M. S. Krishnan, MLA at Ghate Bhavan 14, Pipeline Sankey Road, Malleswaram, Bangalore-3. Phone : 33704 Editor : U. N. Srinivas Bhat, Editorial Office : Janashakthi Printers Gandhinagar 5th Main Road, Bangalore-9. Phone : 71876